ಸಂಪುಟ: 05 ಸಂಚಿಕೆ: 64 ಪುಟಗಳು: 08 ಭಾನುವಾರ 18 ಮೇ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ
ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಿಸ್ವಾರ್ಥ ಮತ್ತು ಸಮರ್ಥ ಕೆಲಸವನ್ನು ಮಾಡುವವರೆಲ್ಲರೂ ನಿಜವಾದ ಅನ್ವೇಷಕರಾಗಿ ರುತ್ತಾರೆ. ನೀವು ಮಾಡುವ ಸೇವೆ ಯಾವಾಗಲೂ ನಿಸ್ವಾರ್ಥತೆಯನ್ನು ಹೊಂದಿರಲಿ.

## ಮಣ್ಣಿನ ಮಗ, ಮಾಜಿ ಪ್ರಧಾನಿ ಜೆಡಿಎಸ್ ಪಕ್ಷದ ಸರ್ವೋಚ್ಚ ನಾಯಕ ಎಚ್ ಡಿ ದೇವೇಗೌಡರವರಿಗೆ

# ಹುಟ್ಟುಹಬ್ಬದ ಶುಭಾಶಯ ಕೋರಿದ ಟಿ. ಹೊಂಬೇಗೌಡರು



**ನಮ್ಮ ರಾಜ್ಯಕ್ಕೆ ಹೆಮ್ಮೆಯ ವಿಷಯ**

ಕರ್ನಾಟಕ ರಾಜ್ಯ, ರಾಜಕಾರಣದಲ್ಲಿ ಅದೆಷ್ಟು ರಾಜಕಾರಣಿಗಳು ಪ್ರಾದೇಶಿಕ ಪಕ್ಷವನ್ನು ಕಟ್ಟಿ ಕೊನೆಗೆ ಯಶಸ್ಸು ಕಾಣಲಾಗದೆ ಸೋತು ಸುಮ್ಮನಾದ ಈ ಕಾಲದಲ್ಲಿ, ಜನತಾದಳ ಮತ್ತು ಜಾತ್ಯಾತೀತ ಜನತಾದಳ ಪಕ್ಷವನ್ನು ಕಟ್ಟಿ ಬೆಳೆಸಿ ತಾವು ಬೆಳೆಸಿದ ಪಕ್ಷದಿಂದಲೇ ಹತ್ತಾರು ಮಂದಿ ಇಂದು ಬೇರೆ ಪಕ್ಷಗಳಿಗೆ ಹೋಗಿ ಶಾಸಕರು, ಸಚಿವರು, ಮುಖ್ಯಮಂತ್ರಿಗಳು ಸಹ ಆಗಿದ್ದಾರೆ. ಅಂತಹ ಸದೃಢ ಪಕ್ಷ ಕಟ್ಟಿದ ಶಕ್ತಿ ಯಾರೆಂದರೆ ಅದು ದೇಶದ ರಾಜಕಾರಣದಲ್ಲಿ ಅದರಲ್ಲೂ ಕರ್ನಾಟಕ ರಾಜ್ಯದ ಮಣ್ಣಿನ ಮಗ ಎಚ್ ಡಿ ದೇವೇಗೌಡರು ಮಾತ್ರ.

ಇಂದಿಗೂ ದೇಶದ ಅದೆಷ್ಟೋ ರಾಜ್ಯಗಳಲ್ಲಿ ದೇವೇಗೌಡರ ಪ್ರತಿಮೆ ಸ್ಥಾಪನೆ ಮಾಡಿದ್ದಾರೆಂದರೆ ಅದು ದೇವೇಗೌಡರಿಗೆ ರೈತರ ಬಗ್ಗೆ ಇರುವ ಕಾಳಜಿ. ಅದಕ್ಕೆ ಸ್ಪಷ್ಟ ಉದಾಹರಣೆಯಂತೆ, ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಜಿ ಅವರು ಖುದ್ದಾಗಿ ದೇವೇಗೌಡರ ಬಗ್ಗೆ ದೇಶದಲ್ಲಿ ರೈತರ ಬಗ್ಗೆ ಕಾಳಜಿ ಉಳ್ಳಂತಹ ರಾಜಕಾರಣಿ ಏನಾದರೂ ಇದ್ದರೆ ಅದು ದೇವೇಗೌಡರು ಮಾತ್ರ ಎಂದು ಪ್ರಶಂಸಿರುವುದು ನಮ್ಮ ರಾಜ್ಯಕ್ಕೆ ಹೆಮ್ಮೆಯ ವಿಷಯವಾಗಿದೆ.

ಅಂತಹ ಮಾಜಿ ಪ್ರಧಾನ ಮಂತ್ರಿಗಳಾದ ಎಚ್.ಡಿ.ದೇವೇಗೌಡರಿಗೆ ಉದಯವಾಹಿನಿ ಪತ್ರಿಕೆಯ ಪ್ರಧಾನ ಸಂಪಾದಕರಾದ ಟಿ. ಹೊಂಬೇಗೌಡರು ಹುಟ್ಟು ಹಬ್ಬದ ಶುಭಾಶಯ ಕೋರಿದ್ದಾರೆ.

## ಕಾವೇರುತ್ತಿರುವ ಸಂಪುಟ ವಿಸ್ತರಣೆಯ ಗುಸುಗುಸು

• ಉದಯವಾಹಿನಿ, ಬೆಂಗಳೂರು

2023ರಲ್ಲಿ ಅಭೂತಪೂರ್ವ ಮ್ಯಾಂಡೇಟ್ ಮೂಲಕ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೆ ಮುಂದಿನ ವಾರ ಎರಡು ವರ್ಷ ಪೂರ್ಣವಾಗಲಿದೆ. ಈ ಸಂಬಂಧ, ಹೊಸಪೇಟೆಯಲ್ಲಿ ಮೇ 20ರಂದು ಸಾಧನಾ ಸಮಾವೇಶ ನಡೆಯಲಿದೆ. ಅದಕ್ಕೆ ಪೂರ್ವ ಸಿದ್ದತೆ ನಡೆಯುತ್ತಿದೆ. ಸಿದ್ದರಾಮಯ್ಯನವರ ಸರ್ಕಾರ ಒಂದು ವರ್ಷ ಪೂರೈಸಿದಾಗಲೇ, ಸಚಿವ ಸಂಪುಟ ವಿಸ್ತರಣೆಯೋ ಅಥವಾ ಪುನರ್ ರಚನೆಯ ಸುದ್ದಿ ಹರಿದಾಡುತ್ತಿತ್ತು. ಆದರೆ, ನಾನಾ ಕಾರಣಗಳಿಂದು ಅದು ಮುಂದಕ್ಕೆ ಹೋಗುತ್ತಲೇ ಇತ್ತು. ಇದರ ಮಧ್ಯೆ, ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರ ಬದಲಾವಣೆಯ ಸುದ್ದಿ ಕಾಂಗ್ರೆಸ್ಸಿನಲ್ಲಿ ಬಿರುಗಾಳಿ ಎಬ್ಬಿಸಲು ಆರಂಭಿಸಿದ ಹಿನ್ನಲೆಯಲ್ಲಿ ಆ ಸುದ್ದಿ ತಣ್ಣಗಾಗಿತ್ತು. ಪಕ್ಷ ಅಧಿಕಾರಕ್ಕೆ ಬಂದು ಎರಡು ವರ್ಷಗಳಾಗುತ್ತಿವೆ, ಪಾರ್ಟಿಗೆ ಹೊಸ ಚೈತನ್ಯದ ಅವಶ್ಯಕತೆಯಿದೆ. ಎರಡು ವರ್ಷ ಸಚಿವರಾಗಿದ್ದ ಹಿರಿಯರು, ಬೇರೆಯವರಿಗೂ ಅವಕಾಶವನ್ನು ಮಾಡಿಕೊಡಬೇಕು ಎನ್ನುವ ಕೂಗು ಹೆಚ್ಚಾಗುತ್ತಿದೆ ಎನ್ನುವ ಸುದ್ದಿಗಳು ಹರಿದಾಡುತ್ತಿವೆ. ಕೆಲವೇ ಕೆಲವು ಸಚಿವರಿಗೆ ಮಾತ್ರ, ಸಕ್ರಿಯ ಸಚಿವರು ಎನ್ನುವ ಪಟ್ಟಿ ಹೈಕಮಾಂಡ್ ಕಡೆಯಿಂದ ಸಿಕ್ಕಿದೆ ಎನ್ನುವ ಗುಸುಗುಸು ಸುದ್ದಿಗಳು ಹರಿದಾಡುತ್ತಿವೆ. ಕೆಪಿಸಿಸಿ ಅಧ್ಯಕ್ಷರಾಗಿ ಈಶ್ವರ್ ಖಂಡ್ರೆ ಆಯ್ಕೆಯಾಗುವುದು ಬಹುತೇಕ ಖಚಿತ ಎನ್ನುವ ಸುದ್ದಿಯೂ ಚಾಲ್ತಿಯಲ್ಲಿದೆ. ಅರಣ್ಯ ಸಚಿವರಾಗಿರುವ ಅವರು ಸಚಿವ ಸ್ಥಾನವನ್ನು ತೊರೆದರೆ, ಮತ್ತು ಹಾಲೀ ಆರೇಳು ಸಚಿವರಿಗೆ ಕೆಳಗಿಳಿಯಲು ಸೂಚಿಸಿದರೆ, ಎಂಟು ಸ್ಥಾನವನ್ನು ತುಂಬುವ ಅವಕಾಶವಿದೆ ಎನ್ನುವ ಲೆಕ್ಕಾಚಾರದಲ್ಲಿದ್ದಾರೆ ಆಕಾಂಕ್ಷಿಗಳು. ಕೆಲವು ಸಚಿವರ ಕಾರ್ಯವೈಖರಿಯ ಬಗ್ಗೆ ದೆಹಲಿ ಮಟ್ಟದಲ್ಲೂ ಅಸಮಾಧಾನವಿದೆ ಎನ್ನುವ ಸುದ್ದಿಯೂ ಇದೆ.

## ತುಮಕೂರು- ಶಿರಾ- ಚಿತ್ರದುರ್ಗ ರೈಲ್ವೆ ಸರಕು ಸಾಗಣೆ ಮಾರ್ಗ

• ಉದಯವಾಹಿನಿ, ಶಿರಾ

ತುಮಕೂರಿನಿಂದ ಶಿರಾ, ಚಿತ್ರದುರ್ಗ ಮಾರ್ಗವಾಗಿ ದಾವಣಗೆರೆಗೆ ಹೊಸದಾಗಿ ನಿರ್ಮಾಣವಾಗಲಿರುವ ರೈಲ್ವೆ ಬ್ರಾಡ್ ಗೇಜ್ ಮಾರ್ಗದೊಂದಿಗೆ ಪ್ರತ್ಯೇಕ ಸರಕು ಸಾಗಣೆ ಮಾರ್ಗ ಕೂಡ ನಿರ್ಮಿಸಬೇಕು ಎಂದು ರಾಜ್ಯ ಸರಕಾರದ ದೆಹಲಿ ವಿಶೇಷ ಪ್ರತಿನಿಧಿ, ಶಾಸಕ ಟಿ.ಬಿ.ಜಯಚಂದ್ರ ಅವರು ಕೇಂದ್ರ ರೈಲ್ವೆ ಖಾತೆ ಸಹಾಯಕ ಸಚಿವ ವಿ.ಸೋಮಣ್ಣ ಅವರಿಗೆ ಮನವಿ ಸಲ್ಲಿಸಿದರು. ಚಿತ್ರದುರ್ಗದಲ್ಲಿ ವಿ.ಸೋಮಣ್ಣ ಅವರ ಅಧ್ಯಕ್ಷತೆಯಲ್ಲಿ ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲ್ವೆ ಯೋಜನೆ ಕಾಮಗಾರಿ ಅನುಷ್ಠಾನ ಕುರಿತ ಪ್ರಗತಿ ಪರಿಶೀಲನಾ ಸಭೆಯಲ್ಲಿಚಿತ್ರದುರ್ಗ ಸಂಸದರಾದ ಗೋವಿಂದ ಕಾರಜೋಳ, ರಾಜ್ಯ ಯೋಜನೆ ಹಾಗೂ ಸಾಂಖ್ಯಿಕ ಸಚಿವರಾದ ಸುಧಾಕರ್, ಚಳ್ಳಕೆರೆ ಶಾಸಕರಾದ ರಘುಮೂರ್ತಿ ಅವರ ಉಪಸ್ಥಿತಿಯಲ್ಲಿ ಈ ಸಂಬಂಧ ಸೋಮಣ್ಣ ಅವರಿಗೆ ಜಯಚಂದ್ರ ಮನವಿ ಸಲ್ಲಿಸಿದರು. ತುಮಕೂರಿನಿಂದ ಶಿರಾ ಮೂಲಕ ಚಿತ್ರದುರ್ಗದವರೆಗೆ ರೈಲ್ವೆ ಸರಕು ಸಾಗಣೆ ಮಾರ್ಗ ನಿರ್ಮಾಣದಿಂದ ಸುತ್ತಮುತ್ತಲ ಭಾಗದ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ಮಾರುಕಟ್ಟೆ ವ್ಯವಸ್ಥೆಗೆ ತುಂಬಾ ಅನುಕೂಲವಾಗುತ್ತದೆ ಎಂದರು.

## ಪಾಕಿಸ್ತಾನಕ್ಕೆ ಆಪರೇಷನ್ ಸಿಂಧೂರ ವಿಷಯ ತಿಳಿಸಿದ್ದು ಅಪರಾಧ

• ಉದಯವಾಹಿನಿ, ನವದೆಹಲಿ

ಪಹಲ್ಗಾಮ್ ಉಗ್ರರ ದಾಳಿಗೆ ಪ್ರತಿಯಾಗಿ ಪಾಕಿಸ್ತಾನದೊಳಗೆ ನುಗ್ಗಿ ಉಗ್ರರ ನೆಲೆಗಳನ್ನು ಧ್ವಂಸ ಮಾಡುವ ಆಪರೇಷನ್ ಸಿಂಧೂರದ ಬಗ್ಗೆ ಆರಂಭದಲ್ಲೇ ಭಾರತ ಸರ್ಕಾರ ಪಾಕಿಸ್ತಾನಕ್ಕೆ ಮಾಹಿತಿ ನೀಡಿದ್ದು ದೊಡ್ಡ ಅಪರಾಧ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಆಪರೇಷನ್ ಸಿಂಧೂರ ಮುಗಿಯುವವರೆಗೂ ಕಾದು, ನಂತರ ಪಾಕಿಸ್ತಾನಕ್ಕೆ ತಿಳಿಸಬಹುದಾಗಿತ್ತು. ಆರಂಭಿಕ ಹಂತದಲ್ಲೇ ತಿಳಿಸಿದ್ದರಿಂದ ನಮ್ಮ ಸೇನಾಪಡೆಯ ಸೈನಿಕರು, ಯುದ್ಧ ವಿಮಾನಗಳಿಗೆ ಸಂಕಷ್ಟ ಎದುರಾಗುವ ಸಾಧ್ಯತೆ ಹೆಚ್ಚಾಗಿತ್ತು ಎಂದಿದ್ದಾರೆ. ಆಪರೇಷನ್ ಸಿಂಧೂರ್ ಆರಂಭದಲ್ಲಿಯೇ ಭಾರತ ಪಾಕಿಸ್ತಾನಕ್ಕೆ ನೀಡಿದ ಮಾಹಿತಿಯ ಬಗ್ಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಹೇಳಿಕೆಗಳನ್ನು ಉಲ್ಲೇಖಿಸಿರುವ ರಾಹುಲ್ ಗಾಂಧಿ ಟೀಕಾ ಪ್ರಹಾರ ನಡೆಸಿದ್ದಾರೆ. ಕೇಂದ್ರ ಸರ್ಕಾರದ ಈ ನಿರ್ಧಾರದಿಂದ ದಾಳಿಯಲ್ಲಿ ಭಾರತೀಯ ವಾಯುಪಡೆ ಅನುಭವಿಸಿದ ನಷ್ಟದ ಬಗ್ಗೆಯೂ ಮಾಹಿತಿ ನೀಡಲಿ ಎಂದಿದ್ದಾರೆ. ನಮ್ಮ ದೇಶದ ದಾಳಿಯ ಆರಂಭದಲ್ಲಿ ಪಾಕಿಸ್ತಾನಕ್ಕೆ ಮಾಹಿತಿ ನೀಡಿದ್ದು ಅಪರಾಧ. ಭಾರತ ಸರ್ಕಾರ ಅದನ್ನು ಮಾಡಿದೆ ಎಂದು ವಿದೇಶಾಂಗ ಸಚಿವಾಲಯ ಸಾರ್ವಜನಿಕವಾಗಿ ಒಪ್ಪಿಕೊಂಡಿದೆ. ಈ ರೀತಿಯಾಗಿ ಆರಂಭಿಕ ಹಂತದಲ್ಲೇ ಪಾಕಿಸ್ತಾನಕ್ಕೆ ಮಾಹಿತಿ ನೀಡಲು ಯಾರು ಆದೇಶ ನೀಡಿದರು ಎಂದರು.




# ಪಾಕ್ ಉಗ್ರಮುಖ ಬಹಿರಂಗ

## ಸರ್ವಪಕ್ಷಗಳ ನಿಯೋಗ

**ಪಾಕ್ ಬಣ್ಣ ಬಯಲು**








• ಉದಯವಾಹಿನಿ, ನವದೆಹಲಿ

ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರದ ಬಳಿಕ ಪಾಕಿಸ್ತಾನದ ಭಯೋತ್ಪಾದನೆಯ ಮುಖವನ್ನು ವಿಶ್ವವೇದಿಕೆಗೆ ತಿಳಿಸಲು ಭಾರತ ಅಭಿಯಾನ ಆರಂಭಿಸಲಿದೆ. ಇದಕ್ಕಾಗಿ ಸರ್ವಪಕ್ಷಗಳ ಸದಸ್ಯರುಳ್ಳ ನಿಯೋಗಗಳನ್ನು ರಚಿಸಿದೆ.

ಪಾಕಿಸ್ತಾನ ಪ್ರಾಯೋಜಿಸುತ್ತಿರುವ ಭಯೋತ್ಪಾದನೆಯನ್ನ ವಿಶ್ವ ರಾಷ್ಟ್ರಗಳ ಮುಂದೆ ಬಹಿರಂಗಪಡಿಸಲು ಏಳು ನಿಯೋಗಗಳನ್ನು ರಚಿಸಲಾಗಿದೆ. ಈ ನಿಯೋಗಗಳು ವಿವಿಧ ದೇಶಗಳಿಗೆ ಮೇ 22 ಮತ್ತು 23 ರಂದು ಭೇಟಿ ನೀಡಲಿವೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಪ್ರಮುಖ ವಿರೋಧ ಪಕ್ಷ ಕಾಂಗ್ರೆಸ್ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳ ಸಂಸದರು, ಹಿರಿಯ ನಾಯಕರು ನಿಯೋಗದಲ್ಲಿ ಇರಲಿದ್ದಾರೆ. ತಮ್ಮ ಸದಸ್ಯರನ್ನು ನಿಯೋಗದಲ್ಲಿ ಕಳುಹಿಸಿಕೊಡಲು ರಾಜಕೀಯ ಪಕ್ಷಗಳು ಒಪ್ಪಿಗೆ ನೀಡಿವೆ. ನಿಯೋಗದಲ್ಲಿ **ಯಾವೆಲ್ಲ ಪಕ್ಷಗಳಿವೆ:** ಪಾಕಿಸ್ತಾನದ ಉಗ್ರವಾದದ ಮುಖವನ್ನು ವಿಶ್ವದ ಮುಂದೆ ಬಹಿರಂಗಪಡಿಸಲು ರಚಿಸಲಾಗಿರುವ ನಿಯೋಗದಲ್ಲಿ ಬಿಜೆಪಿ, ಟಿಎಂಸಿ, ಡಿಎಂಕೆ, ಎನ್‌ಸಿಪಿ (ಎಸ್‌ಪಿ) ಜೆಡಿಯು, ಬಿಜೆಡಿ, ಸಿಪಿಎಂ ಮತ್ತು ಇತರ ಪಕ್ಷಗಳ ಸಂಸದರು ಇರಲಿದ್ದಾರೆ. ಬಿಜೆಪಿಯಿಂದ ಅನುರಾಗ್ ಠಾಕೂರ್, ಅಪರಾಜಿತಾ ಸಾರಂಗಿ ಪ್ರಮುಖರಾಗಿದ್ದರೆ, ಕಾಂಗ್ರೆಸ್‌ನಿಂದ ಶಶಿ ತರೂರ್, ಮನೀಶ್ ತಿವಾರಿ, ಸಲ್ಮಾನ್ ಖುರ್ಷಿದ್ ಹಾಗೂ ಅಮರ್ ಸಿಂಗ್ ಅವರು ನಿಯೋಗದಲ್ಲಿ ಇರಲಿದ್ದಾರೆ. ಟಿಎಂಸಿ ಪಕ್ಷದಿಂದ ಸುದೀಪ್ ಬಂಡೋಪಾಧ್ಯಾಯ, ಜೆಡಿಯುನ ಸಂಜಯ್ ಝಾ, ಬಿಜೆಡಿಯ ಸಸ್ಮಿತ್ ಪಾತ್ರಾ, ಎನ್‌ಸಿಪಿ (ಎಸ್‌ಪಿ) ಸುಪ್ರಿಯಾ ಸುಳೆ, ಡಿಎಂಕೆಯ ಕೆ.ಕನಿಮೋಳಿ, ಸಿಪಿಎಂನ ಜಾನ್ ಬ್ರಿಟ್ಟಸ್, ಶಿವಸೇನೆಯ ಶ್ರೀಕಾಂತ್ ಶಿಂಧೆ, ಎಐಎಂಎಐಎಂ ಪಕ್ಷದ ಅಸಾದುದ್ದೀನ್ ಒವೈಸಿ ನಿಯೋಗದ ಸದಸ್ಯರಾಗಿದ್ದಾರೆ ಎಂದು ಕೇಂದ್ರದ ಮೂಲಗಳು ತಿಳಿಸಿವೆ.

**ಕೇಂದ್ರ ಸರ್ಕಾರದ ಆಟ:** ಪಕ್ಷ ಸೂಚಿಸಿದರ ಹೆಸರುಗಳನ್ನು ಕೈಬಿಟ್ಟು, ಕೇಂದ್ರ ಆಟವಾಡುತ್ತಿದೆ' ಎಂದು ಕಾಂಗ್ರೆಸ್ ಶನಿವಾರ ಆಕ್ರೋಶ ವ್ಯಕ್ತಪಡಿಸಿದೆ. ಪಹಲ್ಗಾಮ್‌ನಲ್ಲಿ ಉಗ್ರರು ನಡೆಸಿದ ಗುಂಡಿನ ದಾಳಿಗೆ ಪ್ರತಿಯಾಗಿ, ಭಯೋತ್ಪಾದಕರ ನೆಲೆಗಳನ್ನು ಗುರಿಯಾಗಿಸಿ ಪಾಕಿಸ್ತಾನ ಹಾಗೂ ಪಾಕ್ ಆಕ್ರಮಿತ ಕಾಶ್ಮೀರದ ಪ್ರದೇಶಗಳ ಮೇಲೆ ಭಾರತೀಯ ಸೇನೆ ನಡೆಸಿದ 'ಅಪರೇಷನ್ ಸಿಂಧೂರ' ಕುರಿತು ಮಾಹಿತಿ ನೀಡಲು ಮತ್ತು ಪಾಕಿಸ್ತಾನವು ಭಯೋತ್ಪಾದನೆಗೆ ಪ್ರಾಯೋಜಕತ್ವ ವಹಿಸುತ್ತಿದೆ ಎಂಬುದನ್ನು ವಿಶ್ವವೇದಿಕೆಯಲ್ಲಿ ಸಾರಲು ಭಾರತ ಮುಂದಾಗಿದೆ. ಅದರ ಭಾಗವಾಗಿ, ವಿವಿಧ ಪಕ್ಷಗಳ ಏಳು ಸಂಸದರ ನೇತೃತ್ವದ ನಿಯೋಗಗಳನ್ನು ರಚಿಸಿದೆ. ಸಂಸದರ ನಿಯೋಗಗಳಿಗೆ ಪಕ್ಷ ಸೂಚಿಸದಿದ್ದರೂ, ಶಶಿ ತರೂರ್ ಅವರ ಹೆಸರನ್ನು ಸೇರಿಸಿರುವುದು ಕಾಂಗ್ರೆಸ್ ಆಕ್ರೋಶಕ್ಕೆ ಕಾರಣವಾಗಿದೆ. ಸರ್ಕಾರವು ತರೂರ್ ಹೆಸರು ಸೇರಿಸಿರುವುದಷ್ಟೇ ಅಲ್ಲ, ಹಿರಿಯ ನಾಯಕ ಸಲ್ಮಾನ್ ಕುರ್ಷಿದ್ ಅವರನ್ನೂ ಸಂಪರ್ಕಿಸಿದೆ. ಆದರೆ, ಅವರು ನಿಯೋಗದ ವಿಚಾರವಾಗಿ ಪಕ್ಷ ತೀರ್ಮಾನ ಕೈಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದ್ದಾರೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ಹೇಳಿದ್ದಾರೆ.

**1** ಸರ್ಕಾರವು ಮೇ 22-23ರ ವೇಳೆಗೆ ನಿಯೋಗಗಳು ಹೊರಡಲು ಸಿದ್ಧವಾಗಿರಲು ಸೂಚಿಸಿದೆ

**2** ಸರ್ಕಾರದ ಈ ನಡೆಯ ಬಗ್ಗೆ ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ಪ್ರತಿಕ್ರಿಯಿಸಿದ್ದಾರೆ

**3** ಆಪರೇಷನ್ ಸಿಂಧೂರ್ ಮೂಲಕ ಪಾಕಿಸ್ತಾನದ ಭಯೋತ್ಪಾದನೆಯನ್ನು ಜಗತ್ತಿಗೆ ತಿಳಿಸಲು ಸರ್ಕಾರ ಸಜ್ಜು

### ನಿಯೋಗದ ಕಾರ್ಯವೇನು..

ಸುಮಾರು 40 ಸದಸ್ಯರನ್ನು ಒಳಗೊಂಡಿರುವ ನಿಯೋಗವನ್ನು ಏಳು ಗುಂಪುಗಳಾಗಿ ರಚಿಸಲಾಗುತ್ತದೆ. ಈ ತಂಡಗಳು ವಿಶ್ವದ ವಿವಿಧ ದೇಶಗಳಿಗೆ ತೆರಳಿ ಭಯೋತ್ಪಾದನೆಯ ವಿರುದ್ಧ ದೇಶದ ಶೂನ್ಯ ಸಹಿಷ್ಣುತೆಯನ್ನು ತಿಳಿಸಲಿದ್ದಾರೆ. ಈ ಏಳು ನಿಯೋಗಗಳಲ್ಲಿರುವ ಇತರ ಸದಸ್ಯರ ಹೆಸರುಗಳನ್ನು ಇನ್ನೂ ಘೋಷಿಸಲಾಗಿಲ್ಲ. ಪ್ರತಿ ನಿಯೋಗವು ಏಳರಿಂದ ಎಂಟು ಸದಸ್ಯರನ್ನು ಒಳಗೊಂಡಿದ್ದು, ನಾಲ್ಕರಿಂದ ಐದು ದೇಶಗಳಿಗೆ ಭೇಟಿ ನೀಡಲಿದೆ.

### ನಿಯೋಗದ ಪ್ರವಾಸ ಯಾವಾಗ...

ಮೇ 23ರಿಂದಲೇ ಈ ನಿಯೋಗ ವಿಶ್ವದಾದ್ಯಂತ ಪ್ರವಾಸ ಮಾಡಲಿದೆ. ಸುಮಾರು 10 ದಿನಗಳ ಈ ಪ್ರವಾಸದಲ್ಲಿ ಯುನೈಟೆಡ್ ಸ್ಟೇಟ್ಸ್, ಯುನೈಟೆಡ್ ಕಿಂಗ್‌ಡಮ್, ಯುನೈಟೆಡ್ ಅರಬ್ ಎಮಿರೇಟ್ಸ್, ದಕ್ಷಿಣ ಆಫ್ರಿಕಾ ಮತ್ತು ಜಪಾನ್ ಸೇರಿದಂತೆ ಹಲವಾರು ಪ್ರಮುಖ ದೇಶಗಳ ರಾಜಧಾನಿಗಳಿಗೆ ಭೇಟಿ ನೀಡುವ ಸಾಧ್ಯತೆಯಿದೆ.ಪಾಕ್ ಆಕ್ರಮಿತ ಕಾಶ್ಮೀರ ಮತ್ತು ಪಾಕಿಸ್ತಾನದಿಂದ ಹುಟ್ಟಿಕೊಂಡಿರುವ ಗಡಿಯಾಚೆಗಿನ ಭಯೋತ್ಪಾದನೆಯ ಬಗ್ಗೆ ಭಾರತದ ನಿಲುವನ್ನು ಮಂಡಿಸಲು ಇದೇ ಮೊದಲ ಬಾರಿಗೆ ಕೇಂದ್ರವು ಹಲವು ಪಕ್ಷಗಳ ಸಂಸದರನ್ನು ನಿಯೋಜಿಸಿದೆ. ಈ ಕುರಿತು ಶನಿವಾರ ಪ್ರತಿಕ್ರಿಯಿಸಿರುವ ನಿಯೋಗದ ಪ್ರವಾಸ ಯೋಜನೆಯನ್ನು ಮುನ್ನಡೆಸುತ್ತಿರುವ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ಅತ್ಯಂತ ಮುಖ್ಯವಾದ ಕ್ಷಣದಲ್ಲಿ ಭಾರತ ಒಗ್ಗಟ್ಟಾಗಿದೆ. ಏಳು ಸರ್ವಪಕ್ಷ ನಿಯೋಗಗಳು ಶೀಘ್ರದಲ್ಲೇ ಪ್ರಮುಖ ಪಾಲುದಾರ ರಾಷ್ಟ್ರಗಳಿಗೆ ಭೇಟಿ ನೀಡಲಿವೆ. ಭಯೋತ್ಪಾದನೆಗೆ ನಮ್ಮ ಶೂನ್ಯ ಸಹಿಷ್ಣುತೆಯ ಸಂದೇಶವನ್ನು ಹೊತ್ತುಕೊಂಡು ತೆರಳಲಿದೆ. ರಾಜಕೀಯ, ಭಿನ್ನಾಭಿಪ್ರಾಯಗಳನ್ನು ಮೀರಿ ರಾಷ್ಟ್ರೀಯ ಏಕತೆಯ ಪ್ರಬಲ ಪ್ರತಿಬಿಂಬ ಇದು ಎಂದು ಹೇಳಿದ್ದಾರೆ.

### ನಿಯೋಗದ ಸಂಭಾವ್ಯ ಸದಸ್ಯರು ಬಿಜೆಪಿ

- ರಾಜೀವ್ ಪ್ರತಾಪ್ ರೂಢಿ
- ಅನುರಾಗ್ ಠಾಕೂರ್
- ಅಪರಾಜಿತಾ ಸಾರಂಗಿ
- ಸಮಿಕ್ ಭಟ್ಟಾಚಾರ್ಯ
- ಬ್ರಿಜ್ ಲಾಲ್ ಭೂಷಣ್

| ಏಳು ಸರ್ವಪಕ್ಷಗಳ ನಿಯೋಗ | |
|---|---|
| ಶಶಿ ತರೂರ್ | ಕಾಂಗ್ರೆಸ್ |
| ಕನಿಮೋಳಿ ಕರುಣಾನಿಧಿ | ಡಿಎಂಕೆ |
| ಸುಪ್ರಿಯಾ ಸುಳೆ | ಎನ್ಸಿಪಿ (ಶರದ್ ಪವಾರ್ ಬಣ) |
| ರವಿಶಂಕರ್ ಪ್ರಸಾದ್ | ಬಿಜೆಪಿ |
| ಸಂಜಯ್ ಕುಮಾರ್ ಝಾ | ಜೆಡಿಯು |
| ಶ್ರೀಕಾಂತ್ ಏಕನಾಥ್ ಶಿಂಧೆ | ಶಿವಸೇನೆ (ಶಿಂಧೆ ಬಣ) |
| ಬೇಲ್ ಜಯಂತ್ ಪಂಡಾ | ಬಿಜೆಪಿ |

| ಇತರರು | |
|---|---|
| ಸುದೀಪ್ ಬಂಡೋಪಾಧ್ಯಾಯ | ತೃಣಮೂಲ ಕಾಂಗ್ರೆಸ್ |
| ಸಸ್ಮಿತ್ ಪಾತ್ರ | ಬಿಜು ಜನತಾದಳ |
| ಜಾನ್ ಬ್ರಿಟ್ಟಾಸ್ | ಸಿಪಿಐ(ಎಂ) |
| ಪ್ರಿಯಾಂಕ ಚತುರ್ವೇದಿ | ಶಿವಸೇನೆ (ಠಾಕ್ರೆ ಬಣ) |
| ಅಸಾದುದ್ದೀನ್ ಓವೈಸಿ | ಎಐಎಂಐಎಂ |
| ವಿಕ್ರಮಜಿತ್ ಸಾಹ್ನಿ | ಆಮ್ ಆದ್ಮಿ ಪಾರ್ಟಿ |


### ಭಯೋತ್ಪಾದನೆ ನಿರ್ಮೂಲನೆಗೆ ಆಪರೇಷನ್ ಸಿಂಧೂರ್

ವಾಸ್ತವವಾಗಿ, ಕಾಶ್ಮೀರದ ಪಹಲ್ಗಾಮ್‌ನ ಬೈಸರನ್ ಕಣಿವೆಯಲ್ಲಿ ಪ್ರವಾಸಿಗರನ್ನು ಅವರ ಧರ್ಮದ ಬಗ್ಗೆ ಕೇಳಿದ ನಂತರ ಹತ್ಯೆ ಮಾಡಲಾಯಿತು. ಅವರಲ್ಲಿ ಹೆಚ್ಚಿನವರು ಹಿಂದೂ ಪ್ರವಾಸಿಗರಾಗಿದ್ದರು. ಭೂಮಿಯ ಮೇಲಿನ ಸ್ವರ್ಗ ಎಂದು ಕರೆಯಲ್ಪಡುವ ಕಾಶ್ಮೀರದಲ್ಲಿ ನಡೆದ ಭಯಾನಕ ಘಟನೆ ದೇಶವನ್ನು ಮಾತ್ರವಲ್ಲದೆ ಇಡೀ ಜಗತ್ತನ್ನೇ ದಿಗ್ಭ್ರಮೆಗೊಳಿಸಿತು. ಈ ಭಯೋತ್ಪಾದಕ ದಾಳಿಯ ನಂತರ, ಭಾರತವು ಇದಕ್ಕೆ ಕಾರಣರಾದವರನ್ನು ಮತ್ತು ಅವರಿಗೆ ಬೆಂಬಲ ನೀಡಿದವರನ್ನು ಆಪರೇಷನ್ ಸಿಂಧೂರ್ ಮೂಲಕ ನಾಶಮಾಡಿತು. ಭಾರತದ ಕ್ರಮಕ್ಕೆ ಬೆದರಿದ ಪಾಕಿಸ್ತಾನ ಮಂಡಿಯೂರಿ ಕದನ ವಿರಾಮಕ್ಕೆ ಮನವಿ ಮಾಡಿದ್ದು, ಆಪರೇಷನ್ ಸಿಂಧೂರ್ ಅನ್ನು ತಾತ್ಕಾಲಿಕವಾಗಿ ನಿಲ್ಲಿಸಲು ನಿರ್ಧರಿಸಿತು.

# ಕೇಂದ್ರ ಸರ್ಕಾರದ ನಿಗಮ ಮಂಡಳಿಗೆ ಪಾದಯಾತ್ರೆಯವರನ್ನು ನೇಮಿಸುವಂತೆ ಒತ್ತಾಯ

• ಉಮೇಶ್ ಬಾಣಾವರ, ಉದಯವಾಹಿನಿ ಬೆಂಗಳೂರು

**● ದೇವೇಗೌಡರ ನಾಯಕತ್ವಕ್ಕೆ ತಮ್ಮ ಒಲವು ● ನಿರಂತರ ರಾಜಕೀಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ಬಸವರಾಜ ಪಾದಯಾತ್ರೆ**



ಕರ್ನಾಟಕ ರಾಜ್ಯ ಪ್ರದೇಶ ಜನತಾದಳ ಜಾತ್ಯತೀತ ಪಕ್ಷದ ಸೇವಾದಳ ವಿಭಾಗದ ರಾಜ್ಯಾಧ್ಯಕ್ಷರಾದ ಬಸವರಾಜ ಪಾದಯಾತ್ರೆ ಅವರ ನೇತೃತ್ವದಲ್ಲಿ ಈ ಹಿಂದೆ ರಾಜ್ಯ ಜೆಡಿಎಸ್ ಸೇವಾದಳ ವತಿಯಿಂದ ಅಭಿಯಾನವನ್ನು ನಡೆಸಿಕೊಂಡು ಬಂದಿದೆ. ದೇಶದ ಮಾಜಿ ಪ್ರಧಾನ ಮಂತ್ರಿಗಳು, ಜೆಡಿಎಸ್ ಸರ್ವೋಚ್ಚ ನಾಯಕರಾದ ಎಚ್.ಡಿ.ದೇವೇಗೌಡರವರ ಮಾರ್ಗದರ್ಶನದಲ್ಲಿ 1983ರಿಂದಲೂ ಜೆಡಿಎಸ್ ಪಕ್ಷದಲ್ಲಿ ಗುರುತಿಸಿಕೊಂಡು ಇಷ್ಟು ವರ್ಷಗಳ ನಿರಂತರ ರಾಜಕಾರಣದಲ್ಲಿ ಅನ್ಯ ಪಕ್ಷದವರ ಆಸೆ ಆಮಿಷಗಳಿಗೆ ಒಳಗಾಗದೆ, ಪಕ್ಷ ಬದಲಾವಣೆಯನ್ನು ಸಹ ಮಾಡದೆ ಮಾಜಿ ಪ್ರಧಾನಿಗಳು ಹಾಗೂ ರೈತ ನಾಯಕರಾದ ದೇವೇಗೌಡರ ನಾಯಕತ್ವಕ್ಕೆ ತಮ್ಮ ಒಲವನ್ನು ವ್ಯಕ್ತಪಡಿಸುತ್ತಾ ಇಷ್ಟು ವರ್ಷಗಳ ನಿರಂತರ ರಾಜಕೀಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ಬಸವರಾಜ ಪಾದಯಾತ್ರೆ ಅವರು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿಯೊಂದು ಚುನಾವಣೆಗಳಲ್ಲೂ ಸಹ ಚುನಾವಣೆ ಉಸ್ತುವಾರಿಗಳನ್ನು ವಹಿಸಿಕೊಂಡು, ಪಕ್ಷದ ಶಿಸ್ತಿನ ಸಿಪಾಯಿಯಂತೆ ಕೆಲಸ ನಡೆಸುತ್ತಿರುತ್ತಾರೆ. ಈ ಹಿಂದೆಯೂ ಸಹ ಬಸವರಾಜ್ ಪಾದಯಾತ್ರೆ ಅವರಿಗೆ ಖಾದಿ ನಿಗಮ ಮಂಡಳಿ ಅಧ್ಯಕ್ಷ ಸ್ಥಾನವನ್ನು ನೀಡಬೇಕೆಂದು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸೇವಾದಳ ವಿಭಾಗದ ಜಿಲ್ಲಾ ಅಧ್ಯಕ್ಷರುಗಳು ತಾಲ್ಲೂಕು ಅಧ್ಯಕ್ಷರುಗಳು ಸಹ ಅಭಿಯಾನವನ್ನು ನಡೆಸಿದ್ದರು. ಆದ್ದರಿಂದ ಜೆಡಿಎಸ್ ಪಕ್ಷದ ವರಿಷ್ಠರು ಹಾಗೂ ಮಾಜಿ ಪ್ರಧಾನ ಮಂತ್ರಿಗಳಾದ ದೇವೇಗೌಡಜಿರವರು ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಉಕ್ಕು ಮತ್ತು ಕೈಗಾರಿಕೆ ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರು ಇವರ ಪಕ್ಷ ನಿಷ್ಠೆ ಮತ್ತು ಜೇಷ್ಠತೆ ಆಧಾರದಲ್ಲಿ ಪರಿಗಣಿಸಿ ಇವರನ್ನು ಕೇಂದ್ರ ಖಾದಿ ಗ್ರಾಮೋದ್ಯೋಗ ನಿಗಮ ಅಥವಾ ಕೇಂದ್ರ ಸೋಲಾರ್ ನಿಗಮಕ್ಕೆ ಕೇಂದ್ರ ಸರ್ಕಾರದ ನಿಗಮ ಮಂಡಳಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳ ಸೇವಾದಳ ವಿಭಾಗದ ಅಧ್ಯಕ್ಷರುಗಳು ಒತ್ತಾಯಿಸಿದ್ದಾರೆ.



**ನಿಷ್ಠೆ ಮತ್ತು ಪ್ರಾಮಾಣಿಕತೆಯ ಪ್ರತೀಕ**

### ಬಸವರಾಜ ಪಾದಯಾತ್ರೆ ಪ್ರತಿಕ್ರಿಯೆ

ನನ್ನ ರಾಜಕೀಯ ಜೀವನದುದ್ದಕ್ಕೂ ಹತ್ತಾರು ಚುನಾವಣೆಗಳಲ್ಲಿ ಸ್ಟಾರ್ ಪ್ರಚಾರಕರಾಗಿ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಭಾಗವಹಿಸಿದ್ದೇನೆ. ಐತಿಹಾಸಿಕ ಭಾರತ ಪಾದಯಾತ್ರೆಯಲ್ಲಿ ಮಾಜಿ ಪ್ರಧಾನ ಮಂತ್ರಿಗಳಾದ ಚಂದ್ರಶೇಖರ್ ಜಿ ಹಾಗೂ ನನಗೆ ರಾಜಕೀಯ ಗುರುಗಳು. ದೇವೇಗೌಡಜಿಯವರೊಂದಿಗೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಪಾದಯಾತ್ರೆ ನಡೆಸಿ ಸ್ವಚ್ಛ ರಾಜಕಾರಣದಲ್ಲಿ ತೊಡಗಿದ್ದೇನೆ. ಅಂದಿನ ಪಾದಯಾತ್ರೆಯಲ್ಲಿ ಕರ್ನಾಟಕದಿಂದ ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆ. ಬಿ ಎಲ್ ಶಂಕರ್, ಪಿಜಿಆರ್ ಸಿಂಧ್ಯಾ ಅವರಂಥ ಹಿರಿಯ ರಾಜಕಾರಣಿಗಳೊಂದಿಗೆ ಪಾದಯಾತ್ರೆ ನಡೆಸಿ ದೇಶದಾದ್ಯಂತ ಬಸವರಾಜ ಪಾದಯಾತ್ರೆಯೆಂಬ ಹೆಸರುಗಳಿಸಿದ್ದಾಗಿ ತಿಳಿಸಿದರು. ಅಲ್ಲದೆ ಖಾದಿ ಗ್ರಾಮೋದ್ಯೋಗ, ಸೋಲಾರ್ ಮತ್ತು ಪರಿಸರ ಮಾಲಿನ್ಯದ ಬಗ್ಗೆ ಈಗಾಗಲೇ ಹಲವು ಬಾರಿ ಸೇವೆ ಸಲ್ಲಿಸುತ್ತಾ ಬಂದಿದ್ದು, ಈ ನಿಗಮಗಳಿಗೆ ಅಧ್ಯಕ್ಷರನ್ನಾಗಿ ಅಥವಾ ಕೇಂದ್ರ ಸರ್ಕಾರದ ನಿಗಮದ ನಿರ್ದೇಶಕರನ್ನಾಗಿ ಆಯ್ಕೆ ಮಾಡಿದ್ದೇ ಆದಲ್ಲಿ ಮನಃಪೂರ್ವಕವಾಗಿ ಸೇವೆ ಸಲ್ಲಿಸಲು ಸಿದ್ಧನಿದ್ದೇನೆ ಎಂದು ಉದಯವಾಹಿನಿ ಪತ್ರಿಕೆಯೊಂದಿಗೆ ಜೆಡಿಎಸ್ ಸೇವಾದಳ ರಾಜ್ಯ ಅಧ್ಯಕ್ಷ ಬಸವರಾಜ್ ಪಾದಯಾತ್ರೆ ತಿಳಿಸಿದರು



### ಸ್ಥಾನ ಕಲ್ಪಿಸಲು ಟಿ.ಹೊಂಬೇಗೌಡರ ಒತ್ತಾಯ

ಕರ್ನಾಟಕ ರಾಜ್ಯ ಪ್ರದೇಶ ಜನತಾದಳದ ಜಾತ್ಯತೀತ ಸೇವಾದಳ ಪಕ್ಷದ ರಾಜ್ಯ ಹಿರಿಯ ಉಪಾಧ್ಯಕ್ಷರಾದ ಟಿ.ಹೊಂಬೇಗೌಡರು ಮಾತನಾಡಿ, ಬಸವರಾಜ್ ಪಾದಯಾತ್ರೆಯವರು 1983ನೇ ಸಾಲಿನಿಂದಲೂ ನಿರಂತರವಾಗಿ ಜೆಡಿಎಸ್ ಪಕ್ಷಕ್ಕೆ ಶಕ್ತಿ ತುಂಬುತ್ತಾ ಬಂದಿದ್ದಾರೆ. ರಾಜ್ಯದ ಮೂಲೆ ಮೂಲೆಗಳಿಂದಲೂ ಸಹ ಸೇವಾದಳ ವಿಭಾಗವನ್ನು ಸಂಘಟಿಸಿ, ತಮ್ಮದೇ ಆದ ನಿಷ್ಠೆ ರಾಜಕಾರಣದಿಂದ ತಮ್ಮ ನಿರಂತರ ರಾಜಕೀಯ ಜೀವನದಲ್ಲಿ ಎಂದಿಗೂ ಪಕ್ಷ ಬದಲಾಯಿಸದೆ ದೇವೇಗೌಡಜಿರವರ ಮಾರ್ಗದರ್ಶನದಲ್ಲಿ ನಿಷ್ಠೆ ಮತ್ತು ಪ್ರಚಾರಕ್ಕೆ ರಾಜಕಾರಣ ಮಾಡಿಕೊಂಡು ಬಂದಿದ್ದಾರೆ. ಅದಕಾರಣ, ಇವರಿಗೆ ನಿಗಮ ಮಂಡಳಿಯಲ್ಲಿ ಅವಕಾಶ ಕಲ್ಪಿಸುವಂತೆ ಶೀಘ್ರದಲ್ಲಿಯೇ ರಾಜ್ಯದ ಎಲ್ಲಾ ಜಿಲ್ಲೆಗಳ ಸೇವಾದಳ ವಿಭಾಗದ ಜಿಲ್ಲಾಧ್ಯಕ್ಷರು, ತಾಲ್ಲೂಕು ಅಧ್ಯಕ್ಷರೊಂದಿಗೆ ಮಾಜಿ ಪ್ರಧಾನ ಮಂತ್ರಿಗಳು ಹಾಗೂ ಜೆಡಿಎಸ್ ವರಿಷ್ಠರಾದ ದೇವೇಗೌಡಜಿರವರನ್ನು ಮತ್ತು ಮಾಜಿ ಮುಖ್ಯಮಂತ್ರಿಗಳು ಹಾಗೂ ಹಾಲಿ ಕೇಂದ್ರದ ಉಕ್ಕು ಮತ್ತು ಕೈಗಾರಿಕೆ ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಒತ್ತಾಯ ಮಾಡಲಾಗುವುದೆಂದು ಕರ್ನಾಟಕ ಪ್ರದೇಶ ಜನತಾದಳ ಜಾತ್ಯಾತೀತ ಸೇವಾದಳದ ರಾಜ್ಯ ಹಿರಿಯ ಉಪಾಧ್ಯಕ್ಷರಾದ ಟಿ. ಹೊಂಬೇಗೌಡ ತಿಳಿಸಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,513/Gram24ct ₹8,720/Gram22ct ಬೆಳ್ಳಿ: ₹97.00/Gram

# ಜೂನ್ 1ರಿಂದ ಮಂಗಳೂರು-ಬೆಂಗಳೂರು ಹಗಲು ರೈಲುಗಳು ರದ್ದು

• ಉದಯವಾಹಿನಿ, ಬೆಂಗಳೂರು

ಸಕಲೇಶಪುರ-ಸುಬ್ರಹ್ಮಣ್ಯ ರೋಡ್ ಸೆಕ್ಷನ್ ಮಧ್ಯೆ ರೈಲು ಮಾರ್ಗದ ವಿದ್ಯುದ್ದೀಕರಣ ಕಾಮಗಾರಿ ಹಿನ್ನೆಲೆಯಲ್ಲಿ ಮಂಗಳೂರು-ಬೆಂಗಳೂರು ನಡುವೆ ಜೂ.1ರಿಂದ ನವೆಂಬರ್ 1ರ ವರೆಗೆ ಸುಮಾರು 154 ದಿನಗಳ ಕಾಲ ಹಗಲು ರೈಲುಗಳ ಸಂಚಾರ ತಾತ್ಕಾಲಿಕವಾಗಿ ರದ್ದುಪಡಿಸಲಾಗಿದೆ ಎಂದು ನೈರುತ್ಯ ರೈಲ್ವೆಯ ಪ್ರಕಟಣೆ ತಿಳಿಸಿದೆ.

ಮೇ 31 ರಿಂದ ನವೆಂಬರ್ 1 ರವರೆಗೆ ಪ್ರತಿ ಶನಿವಾರದಂದು ಸಂಚರಿಸುವ ಯಶವಂತಪುರ ಟು ಮಂಗಳೂರು ಜಂಕ್ಷನ್ ಸಾಪ್ತಾಹಿಕ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16539) ರದ್ದಾಗಲಿದೆ. ಅದೇ ರೀತಿ, ಜೂನ್ 1 ರಿಂದ ನವೆಂಬರ್ 2 ರವರೆಗೆ ಪ್ರತಿ ಭಾನುವಾರದಂದು ಸಂಚರಿಸುವ ಮಂಗಳೂರು ಜಂಕ್ಷನ್ ಟು ಯಶವಂತಪುರ ಸಾಪ್ತಾಹಿಕ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16540) ಸಂಚಾರ ರದ್ದಾಗಲಿದೆ. ಇದಲ್ಲದೆ, ಜೂನ್ 2 ರಿಂದ ಅಕ್ಟೋಬರ್ 31 ರವರೆಗೆ ಸೋಮವಾರ, ಬುಧವಾರ ಮತ್ತು ಶುಕ್ರವಾರದಂದು ಸಂಚರಿಸುವ ಯಶವಂತಪುರ ಟು ಕಾರವಾರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16515) ಹಾಗೂ ಜೂನ್ 3ರಿಂದ ನವೆಂಬರ್ 1 ರವರೆಗೆ ಮಂಗಳವಾರ, ಗುರುವಾರ, ಶನಿವಾರದಂದು ಸಂಚರಿಸುವ ಕಾರವಾರ ಟು ಯಶವಂತಪುರ ಟ್ರೈ-ವೀಕ್ಲಿ ಎಕ್ಸ್‌ಪ್ರೆಸ್ (ರೈಲು ಸಂಖ್ಯೆ 16516) ರೈಲುಗಳ ಸಂಚಾರವನ್ನು ಸಹ ರದ್ದುಗೊಳಿಸಲಾಗಿದೆ ಎಂದು ನೈರುತ್ಯ ರೈಲ್ವೆ ಮಾಹಿತಿ ತಿಳಿಸಿದೆ.

# ಹೋಟೆಲ್ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲೆ

• ಉದಯವಾಹಿನಿ, ಬೆಂಗಳೂರು

ಕನ್ನಡ ಜನರ ವಿರುದ್ಧ ಪ್ರದರ್ಶನ ಫಲಕದಲ್ಲಿ ಅವಹೇಳನಕಾರಿ ಬರಹ ಪ್ರದರ್ಶಿಸಿದ್ದಕ್ಕಾಗಿ ಹೋಟೆಲ್ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ರಾತ್ರಿ ಸಂಭವಿಸಿದ ಘಟನೆಯ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ನಂತರ, ಪೊಲೀಸರು ಕಾರ್ಯಪ್ರವೃತ್ತರಾಗಿದ್ದು ಪ್ರದರ್ಶನ ಫಲಕದಲ್ಲಿದ್ದ ಬರಹವನ್ನು ತೆಗೆದುಹಾಕಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಮಡಿವಾಳ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕನ್ನಡ ಜನರ ವಿರುದ್ಧ ಅವಹೇಳನಕಾರಿ ಸಂದೇಶ ವೇರಿಯಬಲ್ ಸಂದೇಶ ವ್ಯವಸ್ಥೆಯ ಫಲಕದಲ್ಲಿ ಕಂಡುಬಂದಿದೆ ಮತ್ತು ಸಾಮಾಜಿಕ ಮಾಧ್ಯಮವನ್ನು ಮೇಲ್ವಿಚಾರಣೆ ಮಾಡುವ ಸಬ್-ಇನ್ಸ್‌ಪೆಕ್ಟರ್ ಅವರು ಸ್ವಯಂ ಪ್ರೇರಿತವಾಗಿ ಪ್ರಕರಣವನ್ನು ನೋಂದಾಯಿಸಿದ್ದಾರೆ ಎಂದು ಪೊಲೀಸ್ ಪೊಲೀಸ್ ಆಯುಕ್ತ (ಆಗ್ನೇಯ) ಸಾರಾ ಫಾಥಿಮಾ ಹೇಳಿದ್ದಾರೆ. ಜಿಎಸ್ ಸೂಟ್‌ಗಳನ್ನು ನಡೆಸುತ್ತಿದ್ದ ಹೋಟೆಲ್ ಮಾಲೀಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ತನಿಖೆ ನಡೆಯುತ್ತಿದೆ. ಅಲ್ಲಿ ಕೆಲಸ ಮಾಡುತ್ತಿರುವ ಐದು ಜನರನ್ನು ಪ್ರಶ್ನಿಸಲಾಗುತ್ತದೆ. ಮಾಲೀಕರು ವಿದೇಶದಲ್ಲಿದ್ದಾರೆ ಎಂದು ಹೇಳಲಾಗುತ್ತಿದೆ. ಘಟನೆಗೆ ಸಂಬಂಧಿಸಿದ ಎಲ್ಲರಿಗೂ ನೋಟಿಸ್ ನೀಡಲಾಗುತ್ತದೆ ಮತ್ತು ವಿಚಾರಣೆ ನಡೆಸಲಾಗುತ್ತದೆ ಎಂದು ಫಾಥಿಮಾ ಹೇಳಿದ್ದಾರೆ.

# ಮದ್ಯ ಪರವಾನಗಿ ನವೀಕರಣ ಶುಲ್ಕ ಶೇ.100ರಷ್ಟು ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ಸಂತೋಷದ ಸಮಯಗಳು ಮುಗಿದಿವೆ. ಕಳೆದ ಎರಡು ವರ್ಷಗಳಲ್ಲಿ ಮೂರು ಬಾರಿ ಮದ್ಯದ ಬೆಲೆಯನ್ನು ಹೆಚ್ಚಿಸಿದ ನಂತರ, ರಾಜ್ಯ ಸರ್ಕಾರವು ಈಗ ಡಿಸ್ಟಿಲರಿಗಳು, ಬ್ರೂವರೀಸ್, ಮದ್ಯದ ಅಂಗಡಿಗಳು, ಬಾರ್‌ಗಳು ಮತ್ತು ರೆಸ್ಟೋರೆಂಟ್‌ಗಳು ಮತ್ತು ಮದ್ಯ ಪೂರೈಸುವ ಕ್ಲಬ್‌ಗಳ ವಾರ್ಷಿಕ ಪರವಾನಗಿ ನವೀಕರಣ ಶುಲ್ಕವನ್ನು ಶೇಕಡ 100ರಷ್ಟು ಹೆಚ್ಚಿಸಲು ಪ್ರಸ್ತಾಪಿಸಿದೆ. ಪ್ರಸ್ತುತ ವಾರ್ಷಿಕ ಶುಲ್ಕದ ಮೂಲಕ ರೂ. 700 ಕೋಟಿ ಸಂಗ್ರಹಿಸುತ್ತಿರುವ ಸರ್ಕಾರವು ಸುಮಾರು 12,000 ವಿವಿಧ ರೀತಿಯ ಪರವಾನಗಿಗಳಿಂದ ರೂ. 1,400 ಕೋಟಿ ಸಂಗ್ರಹಿಸಲಿದೆ. ಪರವಾನಗಿ ಶುಲ್ಕವನ್ನು ಕೊನೆಯದಾಗಿ 2016-17ರ ಅವಧಿಯಲ್ಲಿ ಪರಿಷ್ಕರಿಸಲಾಗಿತ್ತು.

**ಹೊಸ ಪ್ರಸ್ತಾವನೆಗಳು ಜುಲೈ 1ರಿಂದ ಜಾರಿಗೆ ಬರುವ ಸಾಧ್ಯತೆ:** ಬ್ರೂವರೀಸ್‌ಗಳ ವಾರ್ಷಿಕ ಪರವಾನಗಿ ನವೀಕರಣ ಶುಲ್ಕವನ್ನು ಈಗಿರುವ 27 ಲಕ್ಷದಿಂದ ರೂ. 54 ಲಕ್ಷಕ್ಕೆ ಹೆಚ್ಚಿಸಲಾಗಿದೆ, ಡಿಸ್ಟಿಲರಿಗಳ ವಾರ್ಷಿಕ ಪರವಾನಗಿ ನವೀಕರಣ ಶುಲ್ಕವನ್ನು ರೂ. 45 ಲಕ್ಷದಿಂದ ರೂ. 90 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಅದೇ ರೀತಿ, ಡಿಸ್ಟಿಲರಿಗಳು, ಬ್ರೂವರೀಸ್‌ಗಳ ಬಾಟ್ಲಿಂಗ್ ಘಟಕಗಳ ವಾರ್ಷಿಕ ಪರವಾನಗಿ ನವೀಕರಣ ಶುಲ್ಕವನ್ನು ರೂ. 1 ಲಕ್ಷದಿಂದ ರೂ. 2 ಲಕ್ಷಕ್ಕೆ ಹೆಚ್ಚಿಸಲಾಗಿದೆ.

ಬೃಹತ್ ಬಿಯರ್‌ಗಳ ಚಿಲ್ಲರೆ ಮಾರಾಟದ ವಾರ್ಷಿಕ ಗುತ್ತಿಗೆ ಮೊತ್ತವನ್ನು ರೂ. 3 ಲಕ್ಷಕ್ಕೆ ಮತ್ತು ಕ್ಲಬ್‌ಗಳು, ಬಾರ್, ರೆಸ್ಟೋರೆಂಟ್‌ಗಳು, ಮದ್ಯವನ್ನು ಪೂರೈಸುವ ವಸತಿಗೃಹಗಳನ್ನು ಹೊಂದಿರುವ ಬಾರ್‌ಗಳ ಗುತ್ತಿಗೆ ಮೊತ್ತವನ್ನು ರೂ. 2 ಲಕ್ಷಕ್ಕೆ ಹೆಚ್ಚಿಸಲಾಗಿದೆ.

# ಇಂದಿನಿಂದ 5 ದಿನ 3 ಗಂಟೆಗಳ ಕಾಲ ಹೆಬ್ಬಾಳ ಫ್ಲೈಓವರ್ ಬಂದ್

• ಉದಯವಾಹಿನಿ, ಬೆಂಗಳೂರು

ಕೆಆರ್ ಪುರ ಕಡೆಯಿಂದ ಮೇಖ್ರಿ ವೃತ್ತದ ಕಡೆಗೆ ತೆರಳುವ ಹೆಬ್ಬಾಳ ಮೇಲ್ಸೇತುವೆಗೆ ಹೆಚ್ಚುವರಿ ರಯಾಂಪ್ ಅಳವಡಿಕೆ ಹಿನ್ನೆಲೆ ಇಂದಿನಿಂದ 5 ದಿನ ನಿತ್ಯ 3 ಗಂಟೆಗಳ ಕಾಲ ಹೆಬ್ಬಾಳ ಮೇಲ್ಸೇತುವೆ ಬಂದ್ ಆಗಲಿದೆ. ಕಾಮಗಾರಿಯ ಭಾಗವಾಗಿ ರೈಲ್ವೆ



ಹಳಿಗಳ ಮೇಲೆ 33.5 ಮೀಟರ್ ಉದ್ದದ 7 ಉಕ್ಕಿನ ಗಾರ್ಡರ್‌ಗಳನ್ನು ಅಳವಡಿಕೆ ಮಾಡಲಾಗುತ್ತದೆ. ಈ ಹಿನ್ನೆಲೆ ಇಂದಿನಿಂದ ಮೇ 21ರವರೆಗೆ ಪ್ರತಿದಿನ 3 ಗಂಟೆಗಳ ಕಾಲ ಹೆಬ್ಬಾಳ ಮೇಲ್ಸೇತುವೆ ಬಂದ್ ಆಗಲಿದೆ. ರಾತ್ರಿ 12 ರಿಂದ ಬೆಳಗಿನ ಜಾವ 3 ಗಂಟೆಯವರೆಗೆ ಕಾಮಗಾರಿ ನಡೆಯಲಿದೆ. ಈ ಸಮಯದಲ್ಲಿ ಎಸ್ಟೀಮ್ ಮಾಲ್‌ನಿಂದ ಮೇಖ್ರಿ ವೃತ್ತದ ಕಡೆಗೆ ವಾಹನ ಸಂಚಾರ ಬಂದ್ ಆಗಲಿದೆ. ಏರ್ಪೋರ್ಟ್‌ನಿಂದ ಮೇಖ್ರಿ ವೃತ್ತದ ಕಡೆಗೆ ತೆರಳುವವರಿಗೆ ಪರ್ಯಾಯ ಮಾರ್ಗ ಸೂಚಿಸಲಾಗಿದೆ.

# ಮೊದಲ ಬಾರಿಗೆ ದಾಖಲೆಯ ಲಾಭಗಳಿಸಿದ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ!

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣವು ಆರಂಭವಾದಾಗಿನಿಂದ ಮೊದಲ ಬಾರಿಗೆ ದಾಖಲೆಯ ಲಾಭವನ್ನುಗಳಿಸಿದೆ ಎಂದು ಬಿಐಎಎಲ್ ಮೂಲಗಳು ತಿಳಿಸಿವೆ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಮೇ 16ರಂದು ತನ್ನ ಮಂಡಳಿಯ ಸಭೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಅಧ್ಯಕ್ಷೆ ಶಾಲಿನಿ ರಜನೀಶ್ ಅಧ್ಯಕ್ಷತೆಯಲ್ಲಿ ನಡೆಸಿತು.



ಉದಯವಾಹಿನಿ ಚಿತ್ರ

ಬೆಂಗಳೂರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಬಿಎಲ್‌ಆರ್ ವಿಮಾನ ನಿಲ್ದಾಣ) ಆರಂಭವಾದಾಗಿನಿಂದ ಮೊದಲ ಬಾರಿಗೆ ದಾಖಲೆಯ ಲಾಭ ಗಳಿಸಿದ್ದು ಇದು ಐತಿಹಾಸಿಕ ಮೈಲಿಗಲ್ಲಾಗಿದೆ. ಇದು ದೃಢವಾದ ಆರ್ಥಿಕ ತಿರುವು ಮತ್ತು ವಿಮಾನ ನಿಲ್ದಾಣದ ಕಾರ್ಯತಂತ್ರದ ಬೆಳವಣಿಗೆ, ಸುಸ್ಥಿರತೆಯ ಉಪಕ್ರಮಗಳು ಮತ್ತು ಕಾರ್ಯಾಚರಣೆಯ ಶ್ರೇಷ್ಠತೆಗೆ ಸಾಕ್ಷಿಯಾಗಿದೆ ಎಂದು ಬಿಐಎಎಲ್ ಹೇಳಿಕೆಯಲ್ಲಿ ಸೇರಿಸಿದೆ.

ಬಲವಾದ ಆರ್ಥಿಕ ಕಾರ್ಯಕ್ಷಮತೆಯ ಜೊತೆಗೆ, ಬಿಎಲ್‌ಆರ್ ವಿಮಾನ ನಿಲ್ದಾಣವು 2025ರಲ್ಲಿ ಅನೇಕ ಪ್ರತಿಷ್ಠಿತ ಜಾಗತಿಕ ಮನ್ನಣೆಗಳನ್ನು ಗಳಿಸಿದೆ. ಇದು ವಿಶ್ವಾದ್ಯಂತ ಸುಸ್ಥಿರ ಮತ್ತು ಸುರಕ್ಷಿತ ವಿಮಾನ ನಿಲ್ದಾಣ ಕಾರ್ಯಾಚರಣೆಗಳಲ್ಲಿ ನಾಯಕನಾಗಿ ತನ್ನ ಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿದೆ ಎಂದು ಅದು ಹೇಳಿದೆ. 2024ರ ಮೇ 5ರಿಂದ ಜಾರಿಗೆ ಬರುವಂತೆ ACIಯ ವಿಮಾನ ನಿಲ್ದಾಣ ಕಾರ್ಬನ್ ಮಾನ್ಯತೆ ಕಾರ್ಯಕ್ರಮದ ಅಡಿಯಲ್ಲಿ ಲೆವೆಲ್ 5 ಮಾನ್ಯತೆಯನ್ನು ಸಾಧಿಸಿದ ಏಷ್ಯಾದ ಮೊದಲ ವಿಮಾನ ನಿಲ್ದಾಣ BLR ವಿಮಾನ ನಿಲ್ದಾಣವಾಗಿದೆ.

# ಪರಿಕಲ್ಪನೆಯ ಕ್ರೆಡಿಟ್‌ಅನ್ನು ಬಿಜೆಪಿಗೆ ಕೊಟ್ಟ ಸಿಎಂ!

## ಗ್ರೇಟರ್ ಬೆಂಗಳೂರು ಬಗ್ಗೆ ಸರ್ವಪಕ್ಷ ಸಭೆ ನಡೆಸಲಾಗುವುದು ಎಂದ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ನಾಲ್ಕೂ ಭಾಗಗಳಲ್ಲಿ ರಾಜಧಾನಿ ವಿಸ್ತರಿಸುತ್ತಿದ್ದರಿಂದ ಗ್ರೇಟರ್ ಬೆಂಗಳೂರು ಪರಿಕಲ್ಪನೆಯನ್ನು ಹುಟ್ಟು ಹಾಕಿದ್ದೇ ಬಿಜೆಪಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ. ಆ ಮೂಲಕ, ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರಿಗೆ ತಿರುಗೇಟು ನೀಡಿದ್ದಾರೆ.



ಉದಯವಾಹಿನಿ ಚಿತ್ರ

**ನಾಯಕ ಆರ್.ಶೋಕ್ ಅವರಿಗೆ ತಿರುಗೇಟು**

ಗ್ರೇಟರ್ ಬೆಂಗಳೂರು ಬಗ್ಗೆ ಸರ್ವ ಪಕ್ಷ ಸಭೆ ನಡೆಸಲಾಗುವುದು. ಯಾವ ರೀತಿ ವಿಭಾಗಗಳನ್ನು ಮಾಡಬೇಕು ಎಂದು ಅವರ ಬಳಿಯೂ ಸಲಹೆ ಕೇಳಲಾಗುವುದು. ಸದನದಲ್ಲಿಈ ಬಗ್ಗೆ ಎಲ್ಲರೂ ತಮ್ಮ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಕ್ಯಾಬಿನೆಟ್ ಉಪ ಸಮಿತಿ ರಚನೆ ಮಾಡಲಾಗಿತ್ತು ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದ್ದರು. ಆಡಳಿತಾತ್ಮಕ ದೃಷ್ಟಿಯಿಂದ ಬೆಂಗಳೂರು ಮಹಾನಗರಕ್ಕೆ ಮೂರು ಅಥವಾ ಹೆಚ್ಚು ಮಹಾ ನಗರ ಪಾಲಿಕೆಗಳನ್ನು ರಚಿಸಬೇಕೆಂಬ ಚಿಂತನೆಯಿಂದ ನನ್ನ ಹಿಂದಿನ ಮುಖ್ಯ ಮಂತ್ರಿಯ ಅವಧಿಯಲ್ಲಿ ಬಿ.ಎಸ್ ಪಾಟೀಲ್, ಸಿದ್ದಯ್ಯ ಅವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿತ್ತು. ಆದ್ದರಿಂದ ನಮ್ಮ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದಿರುವುದರಿಂದ, ಈ ಚಿಂತನೆಯನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು. ಆ ಮೂಲಕ, ಗ್ರೇಟರ್ ಬೆಂಗಳೂರು ಪರಿಕಲ್ಪನೆ ಹುಟ್ಟು ಹಾಕಿದ್ದೇ ಬಿಜೆಪಿ ಎಂದು ಅವರ ಆರೋಪವನ್ನು ಅವರಿಗೇ ತಿರುಗಿಸುವ ಕೆಲಸವನ್ನು ಮುಖ್ಯಮಂತ್ರಿಗಳು ಮಾಡಿದ್ದಾರೆ. ಅಶೋಕ್ ಅವರಿಗೆ ಕ್ವಾರ್ಟರ್ ಅಭ್ಯಾಸವಿದೆ, ಹಾಗಾಗಿ ಆ ಪದವನ್ನು ಬಳಸಿದ್ದಾರೆ ಎಂದು ಸಿಎಂ ಸಿದ್ದರಾಮಯ್ಯ ವ್ಯಂಗ್ಯವಾಡಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ತಮ್ಮ ಲಾಭಕ್ಕೆ ಎಲ್ಲವನ್ನೂ ಮಾಡುತ್ತಿದ್ದಾರೆ. ಬಿಡಿಎ ಲೇಔಟ್‌ಗಳು ಇನ್ನೂ ಖಾಲಿ ಇದ್ದು, ಅಲ್ಲಿಗೆ ನೀರು, ವಿದ್ಯುತ್ ಕೊಡಲು ಆಗುತ್ತಿಲ್ಲ. ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಈ ಯೋಜನೆ ಮಾಡಿದ್ದಾರೆ. ನಗರದಲ್ಲಿ ಎಲ್ಲಾ ಕಡೆ ಕಸದ ರಾಶಿ ಇದೆ, ಮೇಕೆದಾಟು ಯೋಜನೆ ಜಾರಿ ಮಾಡಿಲ್ಲ, ನಗರದ ಆಡಳಿತ ನಡೆಸಲು ಆಗುತ್ತಿಲ್ಲ. ಇಂತಹ ವಿಫಲತೆಯನ್ನು ಒಪ್ಪಿಕೊಳ್ಳದೆ ಇಂತಹ ಯೋಜನೆ ತಂದಿದ್ದಾರೆ ಎಂದು ಅಶೋಕ್ ಆರೋಪಿಸಿದ್ದರು.

> **ಮುಖ್ಯಮಂತ್ರಿಗಳು ಪಾಲಿಕೆಯಿಂದ ಆಯ್ಕೆಯಾಗುವುದಿಲ್ಲ ಎಂದಾದ ಮೇಲೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಅವರನ್ನು ಹೇಗೆ ಅಧ್ಯಕ್ಷರನ್ನಾಗಿ ಮಾಡುತ್ತಾರೆ? ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲಿಕೆ ಸಭೆಯಲ್ಲಿ ಬಂದು ಕೂರಲು ಸಾಧ್ಯವಿಲ್ಲ. ಬೆಂಗಳೂರು ಭಾಗ ಆಗಬಾರದು ಎಂಬುದು ಬಿಜೆಪಿಯ ಅಭಿಪ್ರಾಯ. ಮುಂದೆ ನಮ್ಮ ಸರ್ಕಾರ ಬಂದರೆ ಬೆಂಗಳೂರನ್ನು ಒಂದು ಮಾಡುವ ಕೆಲಸ ಮಾಡುತ್ತೇವೆ. ಗ್ರೇಟರ್ ಬೆಂಗಳೂರಿಗೆ ವಿರುದ್ಧವಾಗಿ ಕಾನೂನು ಹೋರಾಟ ಮಾಡಲಿದ್ದೇವೆ ಎಂದು ಆರ್. ಅಶೋಕ್ ಹೇಳಿದ್ದರು.**

# ಕುಡಿದ ಮತ್ತಿನಲ್ಲಿ ಕಾರು ಗುದ್ದಿಸಿ ಸಾಫ್ಟ್‌ವೇರ್ ಎಂಜಿನೀಯರ್ ಕೊಲೆ

• ಉದಯವಾಹಿನಿ, ಬೆಂಗಳೂರು

ಸಿಗರೇಟ್ ವಿಚಾರಕ್ಕೆ ಕಿರಿಕ್ ತೆಗೆದು ಕಾರು ಗುದ್ದಿಸಿ ಸಾಫ್ಟ್‌ವೇರ್ ಉದ್ಯೋಗಿಯನ್ನು ಹತ್ಯೆ ಮಾಡಿರುವ ಘಟನೆ ಬೆಂಗಳೂರಿನಲ್ಲಿ ನಡೆದಿದೆ. 29 ವರ್ಷದ ಟೆಕ್ಕಿ ಸಂಜಯ್ ಕೊಲೆಯಾದ ದುರ್ದೈವಿ. ಆರ್ ಆರ್ ನಗರದ ಪ್ರತೀಕ್ ಎಂಬಾತ ಕಾರು ಗುದ್ದಿಸಿ ಕೊಲೆ ಮಾಡಿದ್ದಾನೆ. ಕನಕಪುರ ರಸ್ತೆಯ ವಸಂತಪುರ ಕ್ರಾಸ್‌ನಲ್ಲಿ ಘಟನೆ ನಡೆದಿದೆ. ಸಾಫ್ಟ್‌ವೇರ್ ಉದ್ಯೋಗಿಗಳಾಗಿದ್ದ ಸಂಜಯ್, ಕಾರ್ತಿಕ್ ಸಿಗರೇಟ್ ಸೇದಲು ಕಚೇರಿಯಿಂದ ಹೊರಬಂದಿದ್ದರು. ಇಲ್ಲಿನ ರಸ್ತೆ ಬದಿಯ ಸೈಕಲ್‌ನಲ್ಲಿ ಸಿಗರೇಟ್ ತೆಗೆದುಕೊಂಡಿದ್ದರು. ಅಲ್ಲೇ ನಿಂತು ಇಬ್ಬರು ಟೆಕ್ಕಿಗಳು ಸಿಗರೇಟ್ ಸೇದುತ್ತಿದ್ದರು. ಈ ವೇಳೆ ಕಾರಿನಲ್ಲಿ ಬಂದ ಪ್ರತೀಕ್ ಕಾರಿನಿಂದ ಇಳಿಯದೇ, ಸಂಜಯ್‌ಗೆ ಸಿಗರೇಟ್ ತಂದುಕೊಡುವಂತೆ ಹೇಳಿದ್ದ. ಇದರಿಂದ ಕೋಪಗೊಂಡ ಸಂಜಯ್ ಮತ್ತು ಕಾರ್ತಿಕ್ ಕಾರಿನಲ್ಲಿದ್ದ ಪ್ರತೀಕ್ ನಡುವೆ ಗಲಾಟೆ ನಡೆದಿತ್ತು. ಪ್ರತೀಕ್ ಆರ್ ಆರ್ ನಗರ ನಿವಾಸಿಯಾಗಿದ್ದ.

ಗಲಾಟೆ ಜೋರಾಗಿ ಅಂಗಡಿ ಯವರು ಬಿಡಿಸಿ ಕಳುಹಿಸಿದ್ದರು. ಕೋಪಗೊಂಡ ಪ್ರತೀಕ್ ಕಾರಿನಲ್ಲಿ ಮುಂದೆ ಹೋಗಿ ರಸ್ತೆ ಪಕ್ಕದಲ್ಲೇ ನಿಲ್ಲಿಸಿಕೊಂಡಿದ್ದ. ಸಿಗರೇಟ್ ಸೇದಿ ಇಬ್ಬರೂ ಬೈಕ್‌ನಲ್ಲಿ ಮುಂದೆ ಬರುತ್ತಿದ್ದಂತೆ. ವೇಗವಾಗಿ ಬಂದು ಇಬ್ಬರು ಹೋಗುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದಿದ್ದಾನೆ. ಪರಿಣಾಮ, ಸಂಜಯ್ ಸ್ಥಳದಲ್ಲೇ ಸಾವನ್ನಪ್ಪಿ ಕಾರ್ತಿಕ್ ಗಂಭೀರ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಆರಂಭದಲ್ಲಿ ಇದು ಅಪಘಾತ ಎಂದು ತಿಳಿದಿದ್ದ ಪೊಲೀಸರಿಗೆ ಸ್ಥಳದಲ್ಲಿದ್ದ ಸಿಸಿಟಿವಿ ಪರಿಶೀಲನೆ ವೇಳೆ ಅಸಲಿ ವಿಚಾರ ಬಯಲಿಗೆ ಬಂದಿದೆ. ಸುಬ್ರಮಣ್ಯಪುರ ಪೊಲೀಸರಿಂದ ಆರೋಪಿ ಪ್ರತೀಕ್ ಬಂಧನವಾಗಿದೆ.

# 18 ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲು ಲೋಕಾಯುಕ್ತ ಆದೇಶ!



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಕೋಲಾರ ಜಿಲ್ಲೆಯ ಮಾಲೂರಿನ ಟೇಕಲ್ ಹೋಬಳಿಯ ಹಳ್ಳಿಗಳಿಗೆ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಇತ್ತೀಚೆಗೆ ಭೇಟಿ ನೀಡಿದ್ದು ಸುಮಾರು ಒಂದು ಡಜನ್‌ಗೂ ಹೆಚ್ಚು ಕಲ್ಲು ಗಣಿಗಾರಿಕೆ ಘಟಕಗಳು 300 ಅಡಿಗಳಿಗಿಂತ ಹೆಚ್ಚು ಆಳದಲ್ಲಿ ಅಗೆಯುತ್ತಿರುವುದು ಆಘಾತಕಾರಿ ವಿಚಾರ ಬಯಲಾಗಿದೆ. ಅನುಮತಿಸಲಾದ ಮಿತಿಗಳನ್ನು ಮೀರಿದ ಅಗೆಯುವಿಕೆ, ಸುರಕ್ಷತಾ ಕ್ರಮಗಳ ಕೊರತೆ, ಗಡಿ ಕಲ್ಲುಗಳು ಬೇಲಿ ಹಾಕುವುದು ಸೇರಿದಂತೆ ನಿಯಮಗಳನ್ನು ಉಲ್ಲಂಘಿಸಲಾಗಿದೆ.

ಗಣಿ, ಭೂವಿಜ್ಞಾನ, ಸಾರ್ವಜನಿಕ ಕಾರ್ಯಗಳು, ಕಂದಾಯ, ಸರ್ವೇ, ಕಾರ್ಮಿಕ ಇಲಾಖೆಗಳು, ಬೆಸ್ಕಾಂ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಪರಿಸರ ಅಧಿಕಾರಿ ಮತ್ತು ಜಿಲ್ಲೆಯ ಇತರ 18 ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲು ನ್ಯಾಯಮೂರ್ತಿ ವೀರಪ್ಪ ಆದೇಶಿಸಿದ್ದು ಅವರಿಗೆ ನೋಟಿಸ್ ನೀಡಿದ್ದಾರೆ. ಇತರ ಉಲ್ಲಂಘನೆಗಳ ಪೈಕಿ, ಸದರಿ ಕಲ್ಲು ಗಣಿಗಾರಿಕೆ ಘಟಕವು ಸದರಿ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಕರಹಳ್ಳಿ 186 ಘಟಕದ ಗುತ್ತಿಗೆ ಅವಧಿ 2021ರಲ್ಲಿ ಮುಗಿದಿದ್ದರೂ ಇಂದಿಗೂ ಕಾರ್ಯನಿರ್ವಹಿಸುತ್ತಿದೆ.

ನ್ಯಾಯಮೂರ್ತಿ ವೀರಪ್ಪ ಅವರು ಎಷ್ಟು ಕಲ್ಲು ಕ್ವಾರಿಗಳು ಮತ್ತು ಕ್ರಷರ್‌ಗಳಿಗೆ ಪರವಾನಗಿ ನೀಡಲಾಗಿದೆ. ಎಷ್ಟು ಪರವಾನಗಿಗಳಿಲ್ಲದೆ ಕಾರ್ಯನಿರ್ವಹಿಸುತ್ತಿವೆ. ಅಕ್ರಮ ಗಣಿಗಾರಿಕೆ, ಮರಳು ಸಾಗಣೆ ಮುಂತಾದ ವಿವರಗಳನ್ನು ಕೋರಿದ್ದಾರೆ. ಇದರ ಹೊರತಾಗಿ, ಕೆಎಂಸಿಸಿ ನಿಯಮಗಳ ನಿಯಮ 42(1) ರ ಅಡಿಯಲ್ಲಿ ಖನಿಜ ರವಾನೆ ಪರವಾನಗಿಯನ್ನು ನೀಡಲಾಗಿದೆಯೇ ಮತ್ತು ಅದನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಲಾಗುತ್ತಿದೆಯೇ; ಉಲ್ಲಂಘನೆಗಳಿದ್ದರೆ, ಎಷ್ಟು ಪ್ರಕರಣಗಳನ್ನು ನೋಂದಾಯಿಸಲಾಗಿದೆ; ಸಣ್ಣ ಖನಿಜಗಳ ಸಾಗಣೆಗೆ ಎಲ್ಲಾ ವಾಹನಗಳನ್ನು ಆ ಉದ್ದೇಶಕ್ಕಾಗಿ ನೋಂದಾಯಿಸಲಾಗಿದೆಯೇ; ಮತ್ತು ಜಿಪಿಎಸ್ ಅಳವಡಿಸದಿರುವುದು ಸಣ್ಣ ಖನಿಜಗಳ ಸಾಗಣೆಗೆ ನಿಗದಿತ ಮಾರ್ಗಗಳ ಉಲ್ಲಂಘನೆಗಾಗಿ ನೋಂದಾಯಿಸಲಾದ ಪ್ರಕರಣಗಳು ನೀಡುವಂತೆ ಸೂಚಿಸಿದ್ದಾರೆ.

ಇದಲ್ಲದೆ, ಗುತ್ತಿಗೆ ಗಣಿಗಾರಿಕೆ ಪ್ರದೇಶವನ್ನು ಬೇಲಿಯಿಂದ ರಕ್ಷಿಸಲಾಗಿದೆಯೇ ಮತ್ತು 7.5 ಮೀಟರ್ ಬಫರ್ ವಲಯವನ್ನು ಹೊಂದಿದೆಯೇ, ಪರವಾನಗಿ ಮತ್ತು ಪರವಾನಗಿಗಳ ಷರತ್ತುಗಳ ಉಲ್ಲಂಘನೆಗಾಗಿ ಎಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ. ಅದರ ವಿರುದ್ಧ ತೆಗೆದುಕೊಂಡ ಕ್ರಮವನ್ನು ವಿವರಿಸಲು ಅಧಿಕಾರಿಗಳಿಗೆ ನಿರ್ದೇಶಿಸಿದರು. ಗಣಿ, ಭೂವಿಜ್ಞಾನ ಇಲಾಖೆ ಮತ್ತು ಗಣಿಗಾರಿಕೆ ಕಾಯ್ದೆ 1952ರ ಮಾನದಂಡಗಳ ಪ್ರಕಾರ, 6 ಮೀಟರ್ (19.5 ಅಡಿ) ಆಳದ ಕಲ್ಲು ಗಣಿಗಾರಿಕೆಗೆ ಮಾತ್ರ ಅನುಮತಿ ನೀಡಬಹುದು. ಈ ಮಿತಿಗಿಂತ ಹೆಚ್ಚಿನದಕ್ಕೆ, ಭಾರತ ಸರ್ಕಾರದ ಗಣಿ ಸುರಕ್ಷತಾ ಮಹಾನಿರ್ದೇಶಕರಿಂದ ಅನುಮೋದನೆ ಪಡೆಯಬೇಕು ಎಂದು ಸ್ಥಳದಲ್ಲಿದ್ದ ಭೂವಿಜ್ಞಾನಿ ಎಂ.ಕೆ. ವಿಶ್ವನಾಥ್ ಅವರು ಉಪ ಲೋಕಾಯುಕ್ತರಿಗೆ ಮಾಹಿತಿ ನೀಡಿದರು. ಆದಾಗ್ಯೂ, ಕೇಂದ್ರ ಸರ್ಕಾರದಿಂದ ಯಾವುದೇ ಅನುಮೋದನೆ ಇಲ್ಲದೆ ಕಲ್ಲು ಗಣಿಗಾರಿಕೆ ಮಾಲೀಕರು 200 ಅಡಿಗಿಂತ ಹೆಚ್ಚು ಆಳಕ್ಕೆ ಕಲ್ಲು ಗಣಿಗಾರಿಕೆಯಲ್ಲಿ ತೊಡಗಿದ್ದಾರೆ ಮತ್ತು ಅವರು ಯಾವುದೇ ಕ್ವಾರಿ ಯೋಜನೆ ಅಥವಾ ದಾಖಲೆಗಳನ್ನು ಸಹ ನೀಡಿಲ್ಲ ಎಂದು ಉಪ ಲೋಕಾಯುಕ್ತರು ಗಮನಿಸಿದರು.

# ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದ್ದು

• ಉದಯವಾಹಿನಿ, ಬೆಂಗಳೂರು

ರಾಮನಗರ ಜಿಲ್ಲೆಯ ಬಾಲಕಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ರಾಜ್ಯ ಸರ್ಕಾರದ ವಿರುದ್ಧ ಶುಕ್ರವಾರ ತೀವ್ರವಾಗಿ ಕಿಡಿಕಾರಿದ್ದಾರೆ.

ಬಾಲಕಿಯ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲೆಡೆ ವಿರೋಧ ಹಾಗೂ ಟೀಕೆಗಳು ವ್ಯಕ್ತವಾಗುತ್ತಿದ್ದು, ಇದರ ನಡುವಲ್ಲೇ ಆರ್.ಅಶೋಕ್ ಅವರು ಶುಕ್ರವಾರ ರಾಮನಗರ ಎಸ್ಪಿಯನ್ನು ಭೇಟಿ ಮಾಡಿ, ಮಾತುಕತೆ ನಡೆಸಿದರು. ಬಳಿಕ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದೆ. ಪ್ರತಿದಿನ ರಾಜ್ಯದಲ್ಲಿ ಕೊಲೆ, ಅತ್ಯಾಚಾರ ಪ್ರಕರಣಗಳು ವರದಿಯಾಗುತ್ತಿವೆ ಎಂದು ಹೇಳಿದರು. ಪ್ರಕರಣ



ಸಂಬಂಧ ಹಲವಾರು ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಆದರೆ, ವಿಧಿವಿಜ್ಞಾನ ವರದಿಯು ಹೆಚ್ಚು ಮುಖ್ಯವಾಗಿದೆ. ಏಕೆಂದರೆ ವರದಿನ್ನು ತಿರುಚಲು ಸಾಧ್ಯವಾಗುವುದಿಲ್ಲ. ಸೂಕ್ಷ್ಮ ತನಿಖೆ ಮತ್ತು ಸಂತ್ರಸ್ತ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವಂತೆ ನಾನು ಎಸ್ಪಿಗೆ ನಿರ್ದೇಶನ ನೀಡಿದ್ದೇನೆ. ಕುಟುಂಬಕ್ಕೆ ನ್ಯಾಯ ಸಿಗದಿದ್ದರೆ ಸರ್ಕಾರವನ್ನು ನಂಬುವುದಾದರೂ ಹೇಗೆ ರಾಜ್ಯದ ಗೃಹ ಸಚಿವರು ಯಾರೆಂದು ಯಾರಿಗೂ ತಿಳಿದಿಲ್ಲ.

> **ಬಾಲಕಿಯ ಕುಟುಂಬಸ್ಥರು ಆಕೆಯನ್ನು ಕೊಲೆ ಮಾಡಲಾಗಿದೆ ಎಂದು ಖಚಿತವಾಗಿ ಹೇಳುತ್ತಿದ್ದಾರೆ. ಆಕೆಯ ಮೇಲೆ ಅತ್ಯಾಚಾರ ನಡೆದಿರಬಹುದು ಎಂಬ ವರದಿಗಳೂ ಇವೆ. ಕೆಲವು ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದೇವೆ ಎಂದು ಪೊಲೀಸರು ನನಗೆ ಮಾಹಿತಿ ನೀಡಿದ್ದಾರೆ. ಅಮಾಯಕ ಬಡ ಹುಡುಗಿಯ ಕೊಲೆಯಾಗಿದೆ, ಆದರೆ, ಪೊಲೀಸರು ಇನ್ನೂ ಸಾವಿನ ಕಾರಣದ ಕುರಿತು ಗೊಂದಲದಲ್ಲಿದ್ದಾರೆ. ವಿಧಿವಿಜ್ಞಾನ ವರದಿಗಳಿಗಾಗಿ ಕಾಯುತ್ತಿದ್ದಾರೆ. ಸಮಗ್ರ ತನಿಖೆ ನಡೆಸುವಂತೆ ಅವರಿಗೆ ಸೂಚಿಸಿದ್ದೇನೆಂದು ಹೇಳಿದರು.**

ಪರಿಸ್ಥಿತಿ ಹೀಗಿರುವಾಗ, ವಿರೋಧ ಪಕ್ಷವು ಮುಂದೆ ಬಂದು ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಬೇಕಾಗುತ್ತದೆ ಎಂದು ತಿಳಿಸಿದರು.

# ಪರಿಸರ ಸ್ನೇಹಿ ಅಭಿಯಾನ ಯೋಗ ಮಹತ್ವದ ಸಾರಿದ ಹರಿತ್ ಯೋಗ

## ಪ್ರಕೃತಿ ಮಡಿಲಲ್ಲಿ ಹಸಿರು ಯೋಗ ದಿನಾಚರಣೆ, ಹಸಿರು ಉಸಿರು, ಯೋಗ ,ಆರೋಗ್ಯ

• ಉದಯವಾಹಿನಿ, ಬೆಂಗಳೂರು

ನಂದಿಬೆಟ್ಟದ ಜೆ.ಎಂ.ಮ್ಯಾರೀಯಟ್ ಗ್ಯಾಲ್ ಶೇರ್ ಕ್ಲಬ್ ನಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆ ಪ್ರಯುಕ್ತ ಹರಿತ್ ಯೋಗ ವತಿಯಿಂದ ಆಧ್ಯಾತ್ಮಕವಾಗಿ ಮಹತ್ವದ ತಾಣವಾದ, ಪರಿಸರ ನಿಧಿಯಾದ ನಂದಿಬೆಟ್ಟದಲ್ಲಿ ಯೋಗ ದಿನಾಚರಣೆ ಆಚರಣೆ. ಮಾಜಿ ಸಚಿವರಾದ ಪ್ರಮೋದ್ ಮಧ್ವರಾಜ್ ರವರು, ಅಂತರಾಷ್ಟ್ರೀಯ ಮಾನವತಾವಾದಿ ಡಾ.ಸಂಜನಾ ಜಾನ್, ಮಾಜಿ ಕುಲಪತಿಗಳಾದ ಡಾ.ವೇಣುಗೋಪಾಲ್ ಅಂತರಾಷ್ಟ್ರೀಯ ಕ್ರೀಡಾಪಟು ಮಂಜುನಾಥ್‌ಹೆಗ್ಡೆ, ರವರು, ಯು ಹೆಚ್.ಆರ್. ಎಸ್.ಎಫ್ ಅಧ್ಯಕ್ಷರಾದ ಸಿ.ಡಿ.ಕಿರಣ್ ರವರು ಯೋಗ ದಿನಾಚರಣೆಗೆ ಚಾಲನೆ ನೀಡಿದರು, ನೂರಾರು ಯೋಗಪಟುಗಳು ಭಾಗವಹಿಸಿದ್ದರು. ಮಾಜಿ ಸಚಿವ ಪ್ರಮೋದ್ ಮದ್ವರಾಜ್ ರವರು ಮಾತನಾಡಿ ನಮ್ಮ ಋಷಿ,ಮುನಿಗಳು ಸಾವಿರಾರು ವರ್ಷಗಳ ಹಿಂದೆ ಇಡೀ ಪ್ರಪಂಚಕ್ಕೆ ಕೊಡುಗೆಯಾಗಿ ಆಯುರ್ವೇದ ಮತ್ತು ಯೋಗ ನೀಡಿದ್ದಾರೆ.

ನಮ್ಮ ದೇಶ ಆಧ್ಯಾತ್ಮಿಕ, ಆರ್ಯವೇದ, ಯೋಗದಲ್ಲಿ ಇಡಿ ಪ್ರಪಂಚಕ್ಕೆ ವಿಶ್ವಗುರುವಾಗಿದ್ದೇವೆ. ಋಷಿ ಸಮಾನವಾಗಿರುವ ಪ್ರಧಾನಿ ನರೇಂದ್ರ ಮೋದಿ ರವರು ಇಡಿ ವಿಶ್ವಕ್ಕೆ ಯೋಗದ ಮಹತ್ವ ಸಾರಿದರು. ಸಿ .ಡಿ.ಕಿರಣ್ ರವರು ಮಾತನಾಡಿ ಪ್ರಧಾನಿ ನರೇಂದ್ರಮೋದಿರವರು ನೇತೃತ್ವದಲ್ಲಿ ಯೋಗ ದಿನಾಚರಣೆಯನ್ನು ಇಡಿ ವಿಶ್ವವು ಆಚರಿಸುವಂತೆ ಮತ್ತು ಯೋಗದ ಮಹತ್ವವನ್ನು ಸಾರಿದರು ಇದರ ಪ್ರಯುಕ್ತ ಪರಿಸರದ ಜೊತೆಯಲ್ಲಿ ಯೋಗದ ಮಹತ್ವ ತಿಳಿಸಲು ಹರಿತ್ ಯೋಗ ಆಚರಿಸಲಾಗುತ್ತಿದೆ.

ಹಸಿರು ಯೋಗದ ಪ್ರಯುಕ್ತ ತಾಯಿಯ ಹೆಸರಿನಲ್ಲಿ ಸಸಿ ನೆಟ್ಟು ಪೋಷಿಸುವ ಕಾರ್ಯಕ್ಕೆ ಚಾಲನೆ ನೀಡಲಾಯಿತು. ಶ್ಯಾನ ತ್ಯಾಜ್ಯ ನಿರ್ವಹಣೆ ಕುರಿತು ಅರಿವು ಮೂಡಿಸಲಾಯಿತು. ಕೇಂದ್ರ ಸರ್ಕಾರದ ಆಯುಷ್ ಇಲಾಖೆ, ಬಿಸ್ಲೇರಿ, ಎಫ್. ಹೆಚ್.ಆಂಡ್ ಆರ್ .ಎ.ಇಂಡಿಯಾದಾವೋಸ್ ಮೀಡಿಯಾಕಮ್, ಪ್ರಸ್ಟೀಜ್ ಗ್ರೂಪ್ ಸಹಕಾರ ನೀಡಿದರು.



ಉದಯವಾಹಿನಿ ಚಿತ್ರ

> **ಹರಿತ್ ಯೋಗ ಎಂದರೆ ಹಸಿರು ಯೋಗ ಎಂದರ್ಥ. ಯೋಗ ದೇಹ ಮತ್ತು ಮನಸ್ಸಿಗೆ, ಹಸಿರು ಬೆಳದು ಉಸಿರಾಗಿ ಬಳಸಿಕೊಂಡು ಆರೋಗ್ಯವಂತರಾಗಿ ಬಾಳುವುದು. ಹಸಿರುಯೋಗದ ಉದ್ದೇಶವೆಂದರೆ ಭೂಮಿಯ ಫಲವತ್ತತೆ ಉಳಿಸಿಕೊಳ್ಳುವುದು ಮತ್ತು ಸಸಿ ನೆಟ್ಟು ಹಸಿರು ಪರಿಸರ ಉಳಿಸಿಕೊಳ್ಳವುದು. ಪ್ರಕೃತಿ ಉಳಿಸಿಕೊಳ್ಳುವುದು, ಆರೋಗ್ಯವನ್ನು ಕಾಪಾಡಿಕೊಳ್ಳುವುದು ಹಸಿರು ಯೋಗದ ಉದ್ದೇಶ ಎಂದು ಹೇಳಿದರು.**

# ಕುಮಾರಸ್ವಾಮಿ ಆಶಯದಂತೆ ಕೆಲಸ ಮುಂದುವರಿಸಿಕೊಂಡು ಹೋಗುತ್ತಿದ್ದೇವೆ

## ಬೆಂಗಳೂರು ಹಾಲು ಒಕ್ಕೂಟಕ್ಕೆ ಸೇರುವ ಎಲ್ಲಾ ತಾಲ್ಲೂಕುಗಳು ಹಾಲು ಉತ್ಪಾದನೆಯಲ್ಲಿ ಸಾಕಷ್ಟು ಸಾಧನೆ

• ಉದಯವಾಹಿನಿ, ಬೆಂಗಳೂರು

ವಿರೋಧ ಪಕ್ಷಗಳು ಟೀಕೆ ಮಾಡಿದರೆ ಮಾತ್ರ ಗೌರವ ಬರುತ್ತದೆ. ಅವರ ಎಲ್ಲಾ ಟೀಕೆಗಳನ್ನು, ವಿಚಾರಗಳನ್ನು, ಸಲಹೆಗಳನ್ನು ಗಮನದಲ್ಲಿಟ್ಟು ಕೊಂಡು ಉತ್ತಮವಾದ ಸುಂದರ ನಗರ ನಿರ್ಮಾಣ ಮಾಡುತ್ತೇವೆ ಎಂದು ಕಾಂಗ್ರೆಸ್ ನಾಯಕ ಮತ್ತು ಮಾಜಿ ಸಂಸದ ಡಿಕೆ ಸುರೇಶ್ ಅಭಿಪ್ರಾಯ ಪಟ್ಟಿದ್ದಾರೆ.

ನಾವು ಯಾವುದೇ ಭೂಸ್ವಾಧೀನ ಪ್ರಕ್ರಿಯೆ ನಡೆಸಿಲ್ಲ. ಈ ಹಿಂದೆ ಕುಮಾರಸ್ವಾಮಿ ಅವರು ಮಾಡಿದ್ದನ್ನು ಮುಂದುವರೆಸಲಾಗಿದೆ. ಕುಮಾರಸ್ವಾಮಿ ಅವರ ಆಶಯದಂತೆ ಉಪನಗರಗಳು ರಚನೆಯಾಗಬೇಕು ಎಂದು ಅವರದೇ ಸರ್ಕಾರದ ಅವಧಿಯಲ್ಲಿ ತೀರ್ಮಾನವಾಗಿತ್ತು ಎಂದು ಬಿಡದಿ ಟೌನ್ ಶಿಪ್ ವಿಚಾರದಲ್ಲಿ ಡಿಕೆ ಸುರೇಶ್ ಮಾತನಾಡಿದ್ದಾರೆ. ಆರ್.ಅಶೋಕ್ ಅವರು ವಿರೋಧ ಪಕ್ಷದ ನಾಯಕರು. ಅವರಿಗೆ ಎಲ್ಲಾ ಮಾಹಿತಿಯನ್ನು ಪಡೆಯಲು ಯೋಗ್ಯತೆ ಮತ್ತು ಅರ್ಹತೆಯಿದೆ. ಒಂದು ವೇಳೆ ಇಲ್ಲ ಎಂದರೆ ನಾನು ಅವರಿಗೆ ಮಾಹಿತಿ ನೀಡುತ್ತೇನೆ. ಕಬಳಿಕೆ ಕುರಿತು ನಾನು ಮಾತನಾಡಬೇಕು ಎಂದರೆ ಉತ್ತರಹಳ್ಳಿಯ ಬಗ್ಗೆ ಮಾತನಾಡಬೇಕಾಗುತ್ತದೆ ಎಂದು ಡಿಕೆ ಸುರೇಶ್ ವ್ಯಂಗ್ಯವಾಡಿದ್ದಾರೆ. ಕುಮಾರಸ್ವಾಮಿಯವರ ನಿರ್ಧಾರ ಏನಿತ್ತೋ ಅದನ್ನು ನಾವು ಮುಂದುವರೆಸುತ್ತಿದ್ದೇವೆ. ರೈತರಿಗೆ ಯಾವುದೇ ರೀತಿಯ ತೊಂದರೆಯಾಗಬಾರದು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಹಾಗೂ ನಮ್ಮ ಪಕ್ಷದ ಉದ್ದೇಶ ಕೂಡ ಇದಾಗಿದೆ ಎಂದು ಡಿಕೆ ಸುರೇಶ್, ಕೇಂದ್ರ ಭಾರೀ ಕೈಗಾರಿಕೆ ಖಾತೆಯ ಸಚಿವ ಎಚ್.ಡಿ.ಕುಮಾರಸ್ವಾಮಿಯವರ ಕಾಲೆಳೆದರು.

ಹಾಲಿನ ವ್ಯವಸ್ಥೆಯಲ್ಲಿ ರಾಜಕೀಯ ಪ್ರವೇಶವಾದರೆ ರೈತರ ಬದುಕಿಗೆ ಪೆಟ್ಟು ನೀಡುತ್ತದೆ. ಹೀಗಾಗಿ ಇಲ್ಲಿ ರಾಜಕೀಯ ಬೆರೆಸದೆ ಸರ್ಕಾರದ ಜತೆ ಹೊಂದಾಣಿಕೆ ಮಾಡಿಕೊಂಡು ರೈತರ ಪರವಾಗಿ ಕೆಲಸ ಮಾಡಬೇಕಾಗುತ್ತದೆ. ಈ ನಿಟ್ಟಿನಲ್ಲಿ ಚುನಾವಣೆ ಗೆದ್ದ ಬಳಿಕ ನಮ್ಮ ಆಡಳಿತ ಮಂಡಳಿ ನಿರ್ದೇಶಕರು ಕೆಲಸ ಮಾಡಲಿದ್ದಾರೆ ಎಂದು ಡಿಕೆ ಸುರೇಶ್ ಹೇಳಿದ್ದಾರೆ.



ಉದಯವಾಹಿನಿ ಚಿತ್ರ

**ಮಾಜಿ ಸಂಸದ ಡಿಕೆ ಸುರೇಶ್ ಅಭಿಪ್ರಾಯ**

ಕ್ಯಾಬಿನೆಟ್ ಉಪ ಸಮಿತಿ ರಚನೆ ಮಾಡಲಾಗಿತ್ತು. ಅವರ ಶೇ 90 ರಷ್ಟು ಅಭಿಪ್ರಾಯಗಳನ್ನು ಪರಿ ಗಣಿಸಲಾಗಿದೆ. ಎಲ್ಲರನ್ನು ವಿಶ್ವಾಸಕ್ಕೆ ಪಡೆದು ಚುನಾವಣೆ ನಡೆಸಲಾಗುವುದು. ಹೊಸ ಪ್ರದೇಶಗಳನ್ನು ಸೇರಿಸಲು ವಿಳಂಬವಾಗುತ್ತದೆ. ಈಗ ಹೇಗಿದೆಯೋ ಅದೇ ರೀತಿ ಮುಂದುವರೆಯಲಾಗುವುದು ಎಂದು ಗ್ರೇಟರ್ ಬೆಂಗಳೂರು ರಚನೆಯ ಬಗ್ಗೆ ಡಿಸಿಎಂ ಡಿಕೆ ಶಿವಕುಮಾರ್ ಅಭಿಪ್ರಾಯ ಪಟ್ಟಿದ್ದರು.

ಉಪಮುಖ್ಯಮಂತ್ರಿಯವರು ಆ ಭಾಗದ ರೈತರಿಗೆ ಖಂಡಿತವಾಗಿ ನ್ಯಾಯ ಒದಗಿಸಿಕೊಡುತ್ತಾರೆ. ಇದು ನಮ್ಮ ಜವಾಬ್ದಾರಿ ಕೂಡ. ಒಕ್ಕೂಟದ ಅಧ್ಯಕ್ಷ ಸ್ಥಾನ, ಚುನಾವಣೆ ಹಾಗೂ ಮತದಾನದ ಆಧಾರದ ಮೇಲೆ ನಡೆಯುತ್ತದೆ. ಅದರ ಆಧಾರದ ಮೇಲೆ ಜೆಡಿಎಸ್, ಬಿಜೆಪಿ, ಕಾಂಗ್ರೆಸ್‌ನಲ್ಲಿ ಯಾರ ಬೆಂಬಲಿಗರು ಮುಂದಿದ್ದಾರೆ ಎಂದು ತೀರ್ಮಾನ ಮಾಡಲಾಗುವುದು ಎಂದು ಡಿಕೆ ಸುರೇಶ್ ಹೇಳಿದ್ದಾರೆ.

ಬೆಂಗಳೂರು ಸಹಕಾರ ಹಾಲು ಒಕ್ಕೂಟದ (ಬಮೂಲ್) ಕನಕಪುರ ನಿರ್ದೇಶಕ ಸ್ಥಾನಕ್ಕೆ ಡಿಕೆ ಸುರೇಶ್ ಅಭ್ಯರ್ಥಿಯಾಗಿ ನಾಮಪತ್ರವನ್ನು ಸಲ್ಲಿಸಿದ್ದಾರೆ. ಆ ಮೂಲಕ, ಕೆಎಂಎಫ್ ಹಾಲು ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಕಣ್ಣಿಟ್ಟಿದ್ದಾರೆ ಎನ್ನುವ ಸುದ್ದಿಗೆ ಪುಷ್ಟಿ ಕೊಟ್ಟಂತಾಗಿದೆ.

> **ನಿಮ್ಮ ಸ್ಪರ್ಧೆಯಿಂದ ಡಿ.ಕೆ ಸಹೋದರರು ಹಾಗೂ ದೇವೇಗೌಡರ ಕುಟುಂಬದ ನಡುವಣ ಹೋರಾಟ ಎಂದು ಬಿಂಬಿತವಾಗುತ್ತಿದೆ ಎಂದು ಕೇಳಿದಾಗ, ಚರ್ಚೆ ಮಾಡುವವರು ಯಾವ ರೀತಿ ಬೇಕಾದರೂ ಚರ್ಚೆ ಮಾಡುತ್ತಾರೆ. ನಮ್ಮ ಉದ್ದೇಶ ರೈತರ ಹಿತ ಕಾಪಾಡುವುದು. ಕ್ಷೀರ ಕ್ಷೇತ್ರದಲ್ಲಿ ಗಣನೀಯ ಬದಲಾವಣೆ ತರಬೇಕು ಎಂಬ ರೈತರ ಇಚ್ಚೆಗೆ ಕೆಲಸ ಮಾಡಬೇಕು. ಅದನ್ನು ಪಾಲಿಸಲು ನಾನು ಬದ್ಧನಾಗಿದ್ದೇನೆ ಎಂದು ಡಿಕೆ ಸುರೇಶ್ ಹೇಳಿದ್ದಾರೆ.**

ಉದಯ ವಾಹಿನಿ
ಪ್ರಾದೇಶಿಕ
ಭಾನುವಾರ 18 ಮೇ 2025 | 03

# ಮೇಲೇಳದ ಟೊಮೆಟೊ ಧಾರಣೆ: ರೈತರ ಸಂಕಷ್ಟ

• ಉದಯವಾಹಿನಿ, ಬೇತಮಂಗಲ

ಬೇಸಿಗೆ ಕಾಲದಲ್ಲಿ ಬಿಸಿಲಿನ ಬೇಗೆಯನ್ನು ಲೆಕ್ಕಿಸದೆ ಅಲ್ಪ ಸ್ವಲ್ಪ ನೀರನ್ನು ಬಳಸಿಕೊಂಡು ಬೆಳೆದಿರುವಂತಹ ಟೊಮೆಟೊ ಬೆಳೆಯ ಬೆಲೆ ನೆಲ ಬಿಟ್ಟು ಮೇಲೇಳದ ಕಾರಣ ಟೊಮೆಟೊ ರೈತ ಸಂಕಷ್ಟಕ್ಕೆ ಸಿಲುಕಿದಂತಾಗಿದೆ. ಬೇಸಿಗೆಯಲ್ಲಿ ಟೊಮೆಟೊ ಬೆಳೆಗೆ ನೀರಿನ ಸಮಸ್ಯೆ ಒಂದೆಡೆಯಾದರೆ, ಮತ್ತೊಂದು ಕಡೆ ಗಿಡಗಳಿಗೆ ಔಷಧಿ ಸಿಂಪಡಣೆ, ರಸಗೊಬ್ಬರ, ಕೂಲಿ ಕಾರ್ಮಿಕರ ವೆಚ್ಚಗಳೂ ಸೇರಿ

> ಪ್ರತಿ ವರ್ಷ ಈ ಸಮಯದಲ್ಲಿ ಟೊಮೆಟೊ ಬೆಳೆಗೆ ಉತ್ತಮ ಬೆಲೆ ಸಿಗುತ್ತಿತ್ತು. ಈ ವರ್ಷ ಬೆಲೆ ಕುಸಿತದಿಂದ ಅಪಾರ ನಷ್ಟ ಸಂಭವಿಸಿದೆ. ಬಂಡವಾಳ ಸಹ ಕೈ ಸೇರದೆ ಸಂಕಷ್ಟದಲ್ಲಿದ್ದೇವೆ
> –ಸುಭಾಷ್ ತೊಂಗಲಕುಪ್ಪ ರೈತ



ಅರ್ಧದಷ್ಟು ಬಂಡವಾಳವೂ ಕೈಸೇರದ ಸಂಕಷ್ಟ ರೈತರನ್ನು ಹೈರಾಣು ಮಾಡಿದೆ. 50ರಿಂದ 100ಕ್ಕೆ 15 ಕೇಜಿಯ ಒಂದು ಬಾಕ್ಸ್ ಮಾರಾಟವಾಗುತ್ತಿದೆ. 3 ತಿಂಗಳ ಕಾಲ ಪೋಷಣೆ ಮಾಡಿ ಬೆಳೆದ ಟೊಮೆಟೊವನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ಕಾರ್ಮಿಕರ ಕೂಲಿ ಹಣವು ಸಹ ಬರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

**ರಫ್ತು ಕಡಿಮೆ:** ಕರ್ನಾಟಕದಲ್ಲಿ ಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಬೆಳೆಯುವ ಟೊಮೆಟೊ ಬೆಳೆಗೆ ನೆರೆಹೊರೆಯ ರಾಜ್ಯ, ರಾಷ್ಟ್ರಗಳಿಂದ ವ್ಯಾಪಾರಸ್ಥರು ಬಂದು ಟೊಮೆಟೊ ಕೊಂಡುಕೊಳ್ಳುವುದು ನಡೆದುಕೊಂಡು ಬಂದಿದೆ. ಈ ವರ್ಷ ಹೊರ ರಾಜ್ಯಗಳ ರಫ್ತು ಸಹ ಕಡಿಮೆಯಾಗಿರುವುದು ಬೆಲೆ ಕುಸಿತಕ್ಕೆ ಕಾರಣವಾಗಿದೆ ಎಂದು ವ್ಯಾಪಾರಸ್ಥರು ಅಳಲು ತೋಡಿಕೊಳ್ಳುತ್ತಿದ್ದಾರೆ.

**ಮಳೆಯಿಂದ ಹಾನಿ:** ಬೇಸಿಗೆಯ ಬೇಗೆಯನ್ನು ಹೇಗೊ ನೀಗಿ, ಅಷ್ಟಿಷ್ಟು ನೀರಿನ ವ್ಯವಸ್ಥೆ ಮಾಡಿಕೊಂಡು ತಕ್ಕಮಟ್ಟಿಗೆ ಚೆನ್ನಾಗಿಯೇ ಟೊಮೆಟೊ ಬೆಳೆ ತೆಗೆಯಲಾಗಿತ್ತು. ಆದರೆ, ಇತ್ತೀಚಿಗೆ ಸುರಿಯುತ್ತಿರುವ ಗಾಳಿ ಮಳೆಯಿಂದ ಟೊಮೆಟೊ ಬೆಳೆ ಮತ್ತೊಂದು ರೀತಿಯ ಹೊಡೆತಕ್ಕೆ ಸಿಲುಕಿದಂತಾಗಿದೆ. ಇದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

## ಮೋದಿ ಬಗ್ಗೆ ಮಾತನಾಡದೇ ಇದ್ದರೆ ಸಂತೋಷ್ ಲಾಡ್‌ಗೆ ತಿಂದಿದ್ದು ಅರಗಲ್ಲ

# ನೀವೇನು ಬಹಳ ಮೇಧಾವಿನಾ ಅಲ್ಲ ಒಬ್ಬ ತಿಳಿಗೇಡಿ

• ಉದಯವಾಹಿನಿ, ಮೈಸೂರು

ಭಾರತ ಪಾಕಿಸ್ತಾನದ ನಡುವಿನ ಕದನ ವಿರಾಮದ ಹಿನ್ನೆಲೆಯಲ್ಲಿ ಕಾಂಗ್ರೆಸ್, ಬಿಜೆಪಿ ನಡುವೆ ಆರೋಪ ಪ್ರತ್ಯಾರೋಪ ಶುರುವಾಗಿದೆ. ಬಿಜೆಪಿ ತಿರಂಗಾ ಯಾತ್ರೆ ಮಾಡುವುದು ಬೇಡ,



ಬದಲಾಗಿ ಡೊನಾಲ್ಡ್ ಟ್ರಂಪ್ ಪರವಾದ ಯಾತ್ರೆ ಮಾಡಲಿ ಎಂದು ಸಲಹೆ ನೀಡಿದ್ದರು. ಇದೀಗ ಇದಕ್ಕೆ ಬಿಜೆಪಿಯ ಮಾಜಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ ನಡೆಸಿದ್ದಾರೆ. ಪಾಕಿಸ್ತಾನದ ಮೇಲೆ ಬಗ್ಗು ಬಡಿಯುವಂತಹ ಹಂತಕ್ಕೆ ಬಂದ ನಂತರ ದೇಶವೇ ಭಾರತ

> ಪಾಕಿಸ್ತಾನದ ಮೇಲೆ ಬಗ್ಗುಬಡಿಯುವಂತಹ ಹಂತಕ್ಕೆ ಬಂದ ನಂತರ ದೇಶವೇ ಭಾರತ ಸೇನೆ, ಆಪರೇಷನ್ ಸಿಂಧೂರ್ ಬಗ್ಗೆ ಹಾಡಿ ಹೊಗಳುತ್ತಿದೆ. ಆದರೆ, ಕಾಂಗ್ರೆಸ್‌ಗೆ ಇದನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ. ಇಲ್ಲ ಸಲ್ಲದ ಆರೋಪಗಳನ್ನು ಪ್ರಧಾನಿ ಮೇಲೆ ಮಾತನಾಡ್ತಾರೆ
> –ಪ್ರತಾಪ್ ಸಿಂಹ, ಮಾಜಿ ಸಂಸದ

**ಕಾಗೆ ತರಹ ಕಾಕಾ ಕಾಕಾ ಅಂತಾರೆ**

ಸೇನೆ, ಆಪರೇಷನ್ ಸಿಂಧೂರ್ ಬಗ್ಗೆ ಹಾಡಿ ಹೊಗಳುತ್ತಿದೆ. ಆದರೆ, ಕಾಂಗ್ರೆಸ್‌ಗೆ ಇದನ್ನು ಸಹಿಸಿಕೊಳ್ಳಲು ಆಗುತ್ತಿಲ್ಲ. ಇಲ್ಲ ಸಲ್ಲದ ಆರೋಪಗಳನ್ನು ಪ್ರಧಾನಿ ಮೇಲೆ ಮಾತನಾಡ್ತಾರೆ. ಕರ್ನಾಟಕದಲ್ಲಿ ಇಬ್ಬರು ಸಚಿವರು ದಿನ ಬೆಳಗಾದರೆ ಕಾಗೆಯ ತರಹ ಕಾಕಾ ಕಾಕಾ ಅಂತಾ ಮಾತ ನಾಡುತ್ತಾರೆ.

### ಲಾಡ್‌ಗೆ ಮೈತುಂಬಾ ಮೈನಿಂಗ್ ದುಡ್ಡು ಅಂಟಿಕೊಂಡಿದೆ

**ಸಂತೋಷ್ ಲಾಡ್‌ಗೆ ಮೈತುಂಬಾ ಮೈನಿಂಗ್ ದುಡ್ಡು ಅಂಟಿಕೊಂಡಿದೆ. ಹೊರಗಡೆ ಮಾತ್ರ ತಾನು ಬಹಳ ಸಾಚಾ ಎನ್ನುವ ರೀತಿ ಪೋಸ್ ಕೊಡುತ್ತಿದ್ದಾರೆ. ಸಿದ್ದರಾಮಯ್ಯ ಮುಡಾ ಹಗರಣಕ್ಕೆ ಸಿಲುಕಿದ ಕಾರಣ ಸಂತೋಷ್ ಲಾಡ್ ಕಾರ್ಮಿಕ ಕಿಟ್ ಹಗರಣದಿಂದ ಬಚಾವ್ ಆದರು. ಇಲ್ಲದಿದ್ದರೆ ಎರಡನೇ ಬಾರಿ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುಬೇಕಿತ್ತು. ದುಡ್ಡಿನ ಕೊಬ್ಬಿನಿಂದ ಸಂತೋಷ್ ಲಾಡ್ ಮಾತನಾಡ್ತಿದ್ದಾರೆ. ನಿಮಗೆ ದುಡ್ಡು ಇರಬಹುದು, ಪತ್ರಕರ್ತರಿಗೆ ನೈತಿಕತೆ ಇದೆ. ನೆನಪಿಟ್ಟು ಕೊಳ್ಳಿ**

**ಅಬ್ಜುಲ್ ಖಾನ್ ರೀತಿಯ ಸಂತೋಷ್ ಲಾಡ್ ಮಾತು**

ಪ್ರಧಾನಿ ಮೋದಿ ಬಗ್ಗೆ ಮಾತನಾಡದೇ ಇದ್ದರೆ ಲಾಡ್ ಗೆ ತಿಂದಿದ್ದು ಅರಗುವುದಿಲ್ಲ.ನೀವು ಏನು ಮಾತನಾಡ್ತಿದ್ದೀರಿ ಎನ್ನುವ ಜ್ಞಾನ ನಿಮಗೆ ಇದೆಯಾ?. ಮರಾಠ ಸಮುದಾಯದ ಸಂತೋಷ್ ಲಾಡ್ ಬಾಯಲ್ಲಿ ಶಿವಾಜಿ ರೀತಿಯ ಮಾತು ಬರುತ್ತಿಲ್ಲ. ಅಬ್ಜುಲ್ ಖಾನ್ ರೀತಿಯ ಮಾತು ಬರುತ್ತಿದೆ. ನೀವೇನು ಬಹಳ ಮೇಧಾವಿನಾ. ಸಂತೋಷ್ ಲಾಡ್ ಒಬ್ಬ ತಿಳಿಗೇಡಿ. ಮೋದಿಗೆ ಹೇಳಿ ಕೊಡುವಷ್ಟು ನೀವು ಬುದ್ದಿವಂತರಾ? ಎಂದು ವಾಗ್ದಾಳಿ ನಡೆಸಿದರು. **1971ರಲ್ಲಿ ಇಂದಿರಾಗಾಂಧಿ ಏನು ಕಡಿದು ಕಟ್ಟೆ ಹಾಕಿದ್ರು** ಅವತ್ತಿನ ಯುದ್ದದ ಗೆಲುವನ್ನು ಹಾಳು ಮಾಡಿದ್ದು ನಿಮ್ಮ ಇಂದಿರಾಗಾಂಧಿ, ಅದು ನೆನಪಿರಲಿ. ಕನಿಷ್ಠ ಪರಿಜ್ಞಾನ ಇಟ್ಟುಕೊಂಡು ಮಾತನಾಡಿ. ಪಹಲ್ಗಾಮ್‌ನಿಂದ ಕನ್ನಡಿ



ಗರನ್ನು ಕರೆದುಕೊಂಡು ಬರಲು ಅವಕಾಶ ಮಾಡಿಕೊಟ್ಟಿದ್ದು ಮೋದಿ. ಅದರಲ್ಲಿ ನಿಮ್ಮ ಸಾಧನೆ ಏನಿದೆ. ನಿಮ್ಮ ಅನಿಷ್ಟಕ್ಕೆಲ್ಲಾ ಮೋದಿಯೇ ಕಾರಣ ಎನ್ನುವ ರೀತಿ ಯಾಕೆ ಮಾತನಾಡ್ತೀರಿ? ಪಾಕಿಸ್ತಾನ ಮಾತ್ರ ಶತ್ರು ಅಲ್ಲ. ನಮ್ಮ ಜೊತೆಯಲ್ಲೇ ಇಂತಹ ಹಿತಶತ್ರುಗಳು ಟೈಂ ಬಾಂಬ್ ತರಹ ಇದ್ದಾರೆ ಎಂದು ಸಿಡಿಮಿಡಿಗೊಂಡಿದ್ದಾರೆ. ಪಾಕಿಸ್ತಾನವೇ ತನ್ನ ಮೇಲೆ ದಾಳಿ ಆಗಿರುವುದಕ್ಕೆ ಸಾಕ್ಷಿಗಳನ್ನು ಕೊಟ್ಟಿದೆ. ಆದರೂ ಭಾರತದಲ್ಲಿ ಕೆಲವರ ತಕರಾರು ನಿಲ್ಲುತ್ತಿಲ್ಲ. ಕಾಂಗ್ರೆಸ್‌ಗೆ ಪಾಕಿಸ್ತಾನದ ಮೇಲೆ ಸದಾ ಪ್ರೀತಿ. ಕಾಂಗ್ರೆಸ್ ಪಾಕಿಸ್ತಾನದ ಪಿತಾಮಹ, ಅದಕ್ಕೆ ಪಾಕಿಸ್ಥಾನದ ಮೇಲೆ ಅತಿಯಾದ ಪ್ರೀತಿ ಮಾಜಿ ಸಂಸದ ಪ್ರತಾಪ್ ಸಿಂಹ ಮೈಸೂರಿನಲ್ಲಿ ಹೇಳಿಕೆ ನೀಡಿದ್ದಾರೆ.

## ಮಿನಿ ನ್ಯೂಸ್

### ತುರುವೇಕೆರೆ: ಕೆಆರ್‌ಎಸ್ ಪಕ್ಷದ ಕಾರ್ಯಕರ್ತರ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ತುರುವೇಕೆರೆ

ಕರ್ನಾಟಕ ರಾಷ್ಟ್ರ ಪಕ್ಷದ ಕಾರ್ಯಕರ್ತರು ಪಟ್ಟಣದ ತಾಲ್ಲೂಕು ಪಂಚಾಯಿತಿ ಮುಂಭಾಗ ಇ.ಒ ವಿರುದ್ಧ ಪ್ರತಿಭಟನೆ ನಡೆಸಿದರು. ಪಟ್ಟಣದ ಪ್ರವಾಸಿ ಮಂದಿರದಿಂದ ತಾಲ್ಲೂಕು ಪಂಚಾಯಿತಿವರೆಗೆ ಮೆರವಣಿಗೆಯಲ್ಲಿ ಬಂದ ಕಾರ್ಯಕರ್ತರು ಇ.ಒ ವಿರುದ್ಧ ಘೋಷಣೆ ಕೂಗಿದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಲ್ಲಿಕಾರ್ಜುನ ಬಿ.ಎಸ್ ಮಾತನಾಡಿ, ಇ.ಒ. ಶಿವರಾಜಯ್ಯ ಸರ್ಕಾರಿ ವಾಹನ ದುರ್ಬಳಕೆ ಮಾಡಿಕೊಂಡಿದ್ದು, ಇದನ್ನು ಪ್ರಶ್ನಿಸಿದ ಕೆ.ಆರ್.ಎಸ್ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿಸಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇ.ಒ ಅವರ ಮೇಲೆ ಸೂಕ್ತ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಇ.ಒ ಅವರ ಅವರ ಕುರ್ಚಿಗೆ ಪೇಟ, ಹಾರವಿಟ್ಟು ಘೋಷಣೆ ಕೂಗಿದರು.

### ಉಳುಮೆ ಮಾಡಿ ಕೃಷಿ ಚಟುವಟಿಕೆಗೆ ಚಾಲನೆ ನೀಡಿದ ಶಾಸಕ ಸುರೇಶ್


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಕ್ಕನಾಯಕನಹಳ್ಳಿ

ತಾಲ್ಲೂಕಿನ ಪಾಪನಾಕೋಣ ಗ್ರಾಮದಲ್ಲಿ ಶನಿವಾರ ಕೃಷಿ ಇಲಾಖೆಯಿಂದ ರಾಷ್ಟ್ರೀಯ ಆಹಾರ ಮತ್ತು ಪೌಷ್ಟಿಕ ಭದ್ರತಾ ಕಾರ್ಯಕ್ರಮದಡಿ ಶಾಸಕ ಸುರೇಶ್ ಬಾಬು ನೇಗಿಲ ಹಿಡಿದು ಉಳುಮೆ ಮಾಡಿ, ಬಿತ್ತನೆ ಮಾಡುವುದರ ಮೂಲಕ ಕೃಷಿ ಚಟುವಟಿಕೆಗಳಿಗೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ಬಿತ್ತನೆ ಬೀಜ ಹಾಗೂ ಗೊಬ್ಬರ ಬೇಡಿಕೆಗೆ ತಕ್ಕಂತೆ ಪೂರೈಕೆ ಆಗುತ್ತಿದೆ. ಇಲಾಖೆಯ ಗುಣಮಟ್ಟದ ಬಿತ್ತನೆ ಬೀಜ ಪಡೆದು ಕೃಷಿಯಲ್ಲಿ ಉತ್ತಮ ಬೆಳೆ ಪಡೆಯಿರಿ. ಈಗಾಗಲೇ ಪಾಪನಕೋಣ ಗ್ರಾಮದಲ್ಲಿ ಪ್ರಾಯೋಗಿಕವಾಗಿ ವಿತರಣೆ ಮಾಡುತ್ತಿದ್ದು, ರೈತರು ಸದ್ಬಳಕೆ ಮಾಡಿಕೊಳ್ಳಬೇಕಿದೆ ಎಂದು ತಿಳಿಸಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶಿವರಾಜ್ ಮಾತನಾಡಿ, ಬಿತ್ತನೆ ಕಾಲ ಇದಾಗಿದ್ದು ಬಿತ್ತನೆ ಬೀಜ, ರಸಗೊಬ್ಬರವನ್ನು ನೀಡಬೇಕಾಗಿರುವುದು ನಮ್ಮ ಜವಾಬ್ದಾರಿ. ನಮ್ಮಲ್ಲಿ ಅಲಸಂದೆ, ತೊಗರಿ, ಹೆಸರುಕಾಳು ಬಿತ್ತನೆ ಬೀಜಗಳ ದಸ್ತಾನು ಇದೆ ಎಂದರು.

### ಬೆಳೆ ವಿಫಲ ರೈತ ಆತ್ಮಹತ್ಯೆ

• ಉದಯವಾಹಿನಿ, ಪಿರಿಯಾಪಟ್ಟಣ

ತಾಲ್ಲೂಕಿನ ಹಬಟೂರು ಗ್ರಾಮದಲ್ಲಿ ರೈತ ರಾಮೇಗೌಡ (62) ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಜಮೀನಿನಲ್ಲಿ ವಿಷ ಸೇವಿಸಿದ್ದ ಇವರನ್ನು ಪಿರಿಯಾಪಟ್ಟಣ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ 4 ದಿನಗಳಿಂದ ಚಿಕಿತ್ಸೆಯಲ್ಲಿದ್ದರು. ಬ್ಯಾಂಕ್ ಹಾಗೂ ಕೈಸಾಲ ಸೇರಿದಂತೆ ಒಟ್ಟು 15 ಲಕ್ಷ ಸಾಲ ಮಾಡಿಕೊಂಡಿದ್ದು, ಮೂರು- ವರ್ಷಗಳಿಂದ ತನ್ನ ಜಮೀನಿನಲ್ಲಿ ಬೆಳೆದ ಬೆಳೆ ಹಾನಿಯಾಗಿತ್ತು. ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಸಂಬಂಧಿಕರು ಇಲ್ಲಿನ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ, ಪ್ರಕರಣ ದಾಖಲಾಗಿದೆ.

### ರಕ್ತದೊತ್ತಡ ಸದ್ದಿಲ್ಲದ ಕೊಲೆಗಾರ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಶ್ರೀರಂಗಪಟ್ಟಣ

ಅಧಿಕ ರಕ್ತದೊತ್ತಡ ಸದ್ದಿಲ್ಲದ ಕೊಲೆಗಾರನಾಗಿದ್ದು ವರ್ಷದಲ್ಲಿ ಎರಡು ಬಾರಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ. ಬೆನ್ನೂರ ಸಲಹೆ ನೀಡಿದರು. ತಾಲ್ಲೂಕಿನ ನಗುವನಹಳ್ಳಿಯಲ್ಲಿ, ತಾಲ್ಲೂಕು ಆರೋಗ್ಯಾಧಿಕಾರಿಯವರ ಕಚೇರಿ ಮತ್ತು ಆಯುಷ್ಮಾನ್ ಆರೋಗ್ಯ ಮಂದಿರದ ವತಿಯಿಂದ ಶನಿವಾರ ಏರ್ಪಡಿಸಿದ್ದ ವಿಶ್ವ ಅಧಿಕ ರಕ್ತದೊತ್ತಡ ದಿನಾಚರಣೆ'ಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮದ್ಯಪಾನ, ಧೂಮಪಾನ ಮತ್ತು ಕರಿದ ಆಹಾರ ಪದಾರ್ಥಗಳ ಸೇವನೆ ಅಧಿಕ ರಕ್ತದೊತ್ತಡಕ್ಕೆ ಕಾರಣ. ಒಮ್ಮೆ ಈ ಕಾಯಿಲೆ ಕಾಣಿಸಿಕೊಂಡರೆ ಜೀವನ ಪರ್ಯಂತ ಕಾಡುತ್ತದೆ. ಸಮತೋಲಿತ ಆಹಾರ ಸೇವನೆ, ಧ್ಯಾನ, ಯೋಗಾಭ್ಯಾಸದಿಂದ ಈ ಕಾಯಿಲೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು ಎಂದು ಅವರು ತಿಳಿಸಿದರು. ಸಾಂಕ್ರಾಮಿಕ ರೋಗಶಾಸ್ತ್ರಜ್ಞೆ ಮೇಘನಾ ಮಾತನಾಡಿ, ಅಧಿಕ ರಕ್ತದೊತ್ತಡದಿಂದ ಬಳಲುವವರಲ್ಲಿ ಇತರ ಆರೋಗ್ಯ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತವೆ. ಹಾಗಾಗಿ ಮುನ್ನೆಚ್ಚರಿಕೆ ವಹಿಸಬೇಕು ಎಂದರು.

### ದೇಶ ರಕ್ಷಿಸಿದರೆ ಎಲ್ಲರೂ ಸುರಕ್ಷಿತ

• ಉದಯವಾಹಿನಿ, ಕಿಕ್ಕೇರಿ


ಉದಯವಾಹಿನಿ ಚಿತ್ರ

ದೇಶ ರಕ್ಷಣೆಗೆ ನಾವಿಲ್ಲಿ ಪ್ರಾರ್ಥಿಸಿದರೆ ಅಲ್ಲಿ ಯೋಧರು ಕ್ಷೇಮದಿಂದಿರಲು ಭಗವಂತನ ಶಕ್ತಿ ಸಿಗಲಿದೆ ಎಂದು ಅರ್ಚಕ ಆದಿತ್ಯ ಭಾರಧ್ವಾಜ್ ಹೇಳಿದರು. ಪಟ್ಟಣದ ಬ್ರಹ್ಮೇಶ್ವರ ದೇಗುಲದಲ್ಲಿರುವ ವಿಶ್ವೇಶ್ವರನಿಗೆ ಸಂಕಷ್ಟಹರ ವಿಶೇಷ ಪೂಜೆ ಸಲ್ಲಿಸಿ ಮಾತನಾಡಿದರು. ವಿಘ್ನ, ಆತಂಕ ದೂರಮಾಡುವ ಗಣಪತಿ ಆರಾಧನೆ ಮಾಡದ ಮನಸ್ಸುಗಳು ಇಲ್ಲ. ನಮ್ಮ ದೇಶ ಧರ್ಮ, ಅಧ್ಯಾತ್ಮ, ಭಗವಂತನ ನಂಬಿರುವ ನಾಡು ಆಗಿದೆ. ಮೌಢ್ಯ ಇಲ್ಲದೆ ಭಕ್ತಿ ಶ್ರದ್ದೆಯಿಂದ ಪೂಜಿಸಬೇಕಿದೆ. ನಮ್ಮ ಒಳಿತಿಗಾಗಿ ಪ್ರಾರ್ಥಿಸುವ ನಾವು ನಮ್ಮ ದೇಶ ರಕ್ಷಣೆ, ದೇಶ ಕಾಯುವ ಯೋಧರ ರಕ್ಷಣೆ, ಕ್ಷೇಮಕ್ಕೆ ಪ್ರಾರ್ಥಿಸಿದರೆ ಒಳಿತಾಗಲಿದೆ ಎಂದರು.

# ಶಿಕ್ಷಣದಿಂದಲೇ ಜೀವನ ಎಂಬುದು ಅರಿಯಿರಿ: ನರೇಂದ್ರಸ್ವಾಮಿ

• ಉದಯವಾಹಿನಿ, ಮಳವಳ್ಳಿ

ಕೆಲ ತಪ್ಪುಗಳಿಂದ ಅನುತ್ತೀರ್ಣರಾಗಿರುವುದು ಸಹಜ. ತಪ್ಪನ್ನು ತಿದ್ದುಕೊಂಡು ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ ಸಲಹೆ ನೀಡಿದರು.

ಪಟ್ಟಣ ಬಾಯ್ಸ್ ಹೋಂ ಶಾಲಾ ಆವರಣದಲ್ಲಿ ಶಾಲಾ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸಹಯೋಗದಲ್ಲಿ ನಡೆಯುತ್ತಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ- 1ರಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಉಚಿತ ಸನಿವಾಸ ತರಬೇತಿ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಶನಿವಾರ


ಉದಯವಾಹಿನಿ ಚಿತ್ರ

ಕಲಿಕಾ ಸಾಮಗ್ರಿಗಳನ್ನು ವಿತರಿಸಿ ಅವರು ಮಾತನಾಡಿದರು. ಶಿಕ್ಷಣ ಕ್ಷೇತ್ರದ ಬುದ್ದಿವಂತಿಕೆಯ ಮೊದಲ ಪರೀಕ್ಷೆಯೇ ಎಸ್‌ಎಸ್‌ಎಲ್‌ಸಿಯಾಗಿದ್ದು, ಮಕ್ಕಳ ಭವಿಷ್ಯವನ್ನು ಉತ್ತಮಪಡಿಸುವ ಕನಸು ಕಂಡಿರುವ ಪೋಷಕರ ಆಸೆಗೆ ಶಕ್ತಿ ತುಂಬುವ ಕೆಲಸ ಮಾಡಲು ವಿದ್ಯಾರ್ಥಿಗಳು ಮುಂದಾಗಬೇಕು. ಶಿಕ್ಷಣ ಇಲ್ಲದೇ ಜೀವನದಲ್ಲಿ ಏನೇ ಸಾಧಿಸಲು ಕಷ್ಟವಾಗುತ್ತದೆ. ಹೀಗಾಗಿ ಮುಂದಿನ ದಿನಗಳಲ್ಲಿ ನಾನು ಓದಬೇಕಿತ್ತು ಎಂದು ನೊಂದುಕೊಳ್ಳುವ ಮುನ್ನ ಇರುವ ಅವಕಾಶ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

ಶಿಕ್ಷಣದ ಆಧಾರದ ಮೇಲೆ ಉದ್ಯೋಗವನ್ನು ಪಡೆದು ಜೀವನವನ್ನು ಕಟ್ಟಿಕೊಳ್ಳಬೇಕಾಗಿರುವುದರಿಂದ ವಿದ್ಯಾರ್ಥಿಗಳು ನಿರ್ಲಕ್ಷ್ಯ ವಹಿಸದೇ ಓದಿನ ಗಮನಹರಿಸಬೇಕು.

ಅನುತ್ತೀರ್ಣಗೊಂಡ ವಿದ್ಯಾರ್ಥಿಗಳ ಬದುಕನ್ನು ಹಸನು ಮಾಡುವ ಉದ್ದೇಶದಿಂದ ವಿದ್ಯಾರ್ಥಿಗಳ ತರಬೇತಿ ಕೊಡಿಸಲು ಸಂಪೂರ್ಣ ಬೆಂಬಲ ನೀಡಿದ್ದೇನೆ. ಉಚಿತ ಸನಿವಾಸ ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿರುವವರು ಉತ್ತೀರ್ಣಗೊಂಡರೇ ಬಹುಮಾನ ನೀಡಲಾಗುವುದು ಎಂದು ಆತ್ಮಸ್ಥೈರ್ಯ ತುಂಬಿದರು.

# ಅತ್ಯಾಚಾರ ಆರೋಪಿಗಳ ಬಂಧನಕ್ಕೆ ಆಗ್ರಹ

• ಉದಯವಾಹಿನಿ, ಮಂಡ್ಯ

ರಾಮನಗರ ಜಿಲ್ಲೆಯಲ್ಲಿ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವ ಆರೋಪಿಗಳನ್ನು ಬಂಧಿಸಬೇಕು. ಜೊತೆಗೆ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಮಹಿಳಾ ಕೃಷಿ ಕೂಲಿಕಾರರ ಉಪ ಸಮಿತಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಡಿಸಿ ಕಚೇರಿ ಎದುರು ಶನಿವಾರ ಪ್ರತಿಭಟನೆ ನಡೆಸಿದರು.

ಆ ಬಾಲಕಿಯನ್ನ ಅಮಾನುಷವಾಗಿ ಕೊಲೆ ಮಾಡಿರುವ ಘಟನೆ ಇಡೀ ದೇಶವೇ ತಲೆತಗ್ಗಿಸುವಂತಿದೆ. ಇದರಲ್ಲಿ ಪೊಲೀಸ್ ಇಲಾಖೆಯ ವೈಫಲ್ಯವೂ ಎದ್ದು ಕಾಣುತ್ತಿದೆ. ನ್ಯಾಯ ಕೇಳಲು ಹೋದ ಪ್ರತಿಭಟನಾಕಾರರ ಮೇಲೆ ಹಲ್ಲೆ ನಡೆಸಲು ಮುಂದಾಗುವುದು ಏಕೆ, ಇದು ಹೀಗೆ



ಉದಯವಾಹಿನಿ ಚಿತ್ರ

ಮುಂದುವರಿದರೆ ಪ್ರತಿಭಟನೆ ತೀವ್ರಗೊಳಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಆ ನೊಂದ ಕುಟುಂಬಕ್ಕೆ ಪರಿಹಾರ ನೀಡುವ ಮೂಲಕ ಸರ್ಕಾರ ಸಾಂತ್ವನ ಹೇಳಬೇಕು. ಪೊಲೀಸರು ನಡೆಸಿರುವ ದೌರ್ಜನ್ಯದ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

# ಕೊತ್ತೂರು ಮಂಜುನಾಥ್ ಅಬ್‌ನಾರ್ಮಲ್ ಪರ್ಸನ್, ಕಾಂಗ್ರೆಸ್ ಸಸ್ಪೆಂಡ್ ಮಾಡ್ಬೇಕು: ಮಹೇಶ್ ಆಗ್ರಹ

• ಉದಯವಾಹಿನಿ, ಚಾಮರಾಜನಗರ

ಕೊತ್ತೂರು ಮಂಜುನಾಥ್ ಒಬ್ಬ ಅಬ್‌ನಾರ್ಮಲ್ ಪರ್ಸನ್ ಅಂತ ಅನಿಸುತ್ತೆ ಎಂದು ಬಿಜೆಪಿ ನಾಯಕ ಎನ್.ಮಹೇಶ್ ಗುಡುಗಿದರು. ಮಂಜುನಾಥ್‌ಗೆ ತಲೆ ನೆಟ್ಟಗಿಲ್ಲ. ಒಂದು ಬಾರಿ ನಿಮ್ಹಾನ್ಸ್‌ಗೆ ಹೋಗಿ ತಲೆ ರಿಪೇರಿ ಮಾಡಿಸಿಕೊಂಡು ಬರ್ಲೇಕು. ಇದು ದೇಶದ ಸಂಕಷ್ಟ ಸಂದರ್ಭ. 147 ಕೋಟಿ ಜನರು ಪಕ್ಷಬೇಧ, ಜಾತಿಬೇಧ, ಧರ್ಮಬೇಧ ಮರೆತು ಸೈನಿಕರ ಜೊತೆ ನಿಲ್ಲಬೇಕು, ಆತ್ಮ ವಿಶ್ವಾಸ ತುಂಬಬೇಕು ಎಂದು ತಿಳಿಸಿದರು. ಓರ್ವ ಶಾಸಕನಾಗಿದ್ದು, ಆ ಸ್ಥಾನಕ್ಕೆ ಅವಮಾನವಿದು. ಎಐಸಿಸಿ, ಕೆಪಿಸಿಸಿ ಅಧ್ಯಕ್ಷರಿಗೆ ಮನವಿ ಮಾಡ್ತೀನಿ. ಕೊತ್ತೂರು ಮಂಜುನಾಥ್‌ನ ಅಮಾನತು ಮಾಡ್ಬೇಕು. ಆತ ಓರ್ವ ಲೂಸ್.. ಲೂಸ್ ಟಾಕ್ ಮಾತನಾಡಿದ್ದಾರೆ ಎಂದು ಕಿಡಿಕಾರಿದರು.


ಉದಯವಾಹಿನಿ ಚಿತ್ರ

ಬಿಜೆಪಿ ಸಚಿವರೊಬ್ಬರು ಸೋಫಿಯಾ ಖುರೇಷಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ವಿಚಾರಕ್ಕೆ ಸಂಬಂಧಿಸಿದಂತೆ, ಈಗಾಗ್ಲೆ ನಾವು ಅವರನ್ನು ಅಮಾನತು ಮಾಡಿದ್ದೇವೆ. ನಾವು ಅವರ ಮಾತನ್ನ ಖಂಡಿಸಿದ್ದೇವೆ. ದೇಶದ ಸೈನಿಕರ ವಿರುದ್ಧ ಯಾರೇ ಮಾತನಾಡಿದ್ರು, ನಾನು ಅದನ್ನ ಖಂಡಿಸುತ್ತೇನೆ ಎಂದರು.

# ಸರ್ಕಾರಿ ರಸ್ತೆ ಜಾಗ ಒತ್ತುವರಿ: ಚರಂಡಿ ಮೇಲೆ ಮನೆ ನಿರ್ಮಾಣ

• ಉದಯವಾಹಿನಿ, ಹನೂರು

ಸರ್ಕಾರಿ ರಸ್ತೆಯ ಜಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಚರಂಡಿ ಮೇಲೆ ಮನೆ ನಿರ್ಮಾಣ ಮಾಡಿಕೊಂಡಿದ್ದು ಈ ಬಗ್ಗೆ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಚರಂಡಿ ಮೇಲೆ ನಿರ್ಮಾಣವಾಗಿರುವ ಮನೆಯನ್ನು ತೆರವು ಮಾಡಲು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಪಾಲಿಮೇಡು ಗ್ರಾಮದ ಜಾನ್ ವಿನ್ಸೆಂಟ್ ಆರೋಪ ಮಾಡಿದ್ದಾರೆ. ತಾಲ್ಲೂಕಿನ ಮಾರ್ಟಳ್ಳಿ ಗ್ರಾಮ ಪಂ. ಪಾಲಿಮೇಡು ಕಾಲೇಜು ದಾರಿಯಿಂದ ಬೆಂಜಮಿನ್ ಮನೆಯಿಂದ ಜೇಮ್ಸ್ ಮನೆವರೆಗೂ ಸುಮಾರು 200 ಮೀಟರ್ ಉದ್ದದ ಚರಂಡಿ ನಿರ್ಮಾಣ ಕಾಮಗಾರಿ ಮಾಡಲಾಗುತ್ತಿದೆ. ಈ ಮಧ್ಯೆ ಮದಲೈ ಮತ್ತು ಎಂಬುವರು 10 ಮೀಟರ್ ಚರಂಡಿಯ ಮೇಲೆ ಮನೆ ನಿರ್ಮಾಣ ಮಾಡಿದ್ದಾರೆ.

ಸರ್ಕಾರಿ ರಸ್ತೆಯ ಜಾಗವನ್ನು ಒತ್ತುವರಿ ಮಾಡಿ



ಕೊಂಡು ಅಕ್ರಮವಾಗಿ ಚರಂಡಿಯ ಮೇಲೆ ಮನೆ ನಿರ್ಮಾಣ ಮಾಡಿರುವ ಬಗ್ಗೆ ವಾರ್ಡ್ ಸದಸ್ಯ ರಾಮಲಿಂಗಂ ಅವರಿಗೆ ಪ್ರಶ್ನೆ ಮಾಡಿದ್ದರು ಅವರು ಸರಿಯಾಗಿ ಮಾಹಿತಿ ನೀಡುತ್ತಿಲ್ಲ.

ಒತ್ತುವರೆ ಮಾಡಿಕೊಂಡಿರುವ ಜಾಗವನ್ನು ತೆರವು ಮಾಡಲು ತಾರತಮ್ಯ ಮಾಡುತ್ತಿದ್ದಾರೆ. ರಸ್ತೆ ಅಗಲೀಕರಣ ಚರಂಡಿ ನಿರ್ಮಾಣಕ್ಕೆ ತೊಂದರೆಯಾಗುತ್ತಿದೆ. ಚರಂಡಿ ನಿರ್ಮಾಣ ಕಾಮಗಾರಿಯನ್ನು ಕಳಪೆಯಿಂದ ಮಾಡಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಪಿ.ಡಿ.ಓ ಅವರಿಗೆ ಲಿಖಿತ ದೂರು ನೀಡಿದ್ದು, ಸಾರ್ವಜನಿಕರ ವಿರೋಧವಿದ್ದರು ಸಹಾ ತಿಳಿಸಿದ್ದರು ಯಾವುದೇ ಕ್ರಮ ಕೈಗೊಳ್ಳಲು ಮುಂದಾಗದೆ ತಾರತಮ್ಯ ಮಾಡುತ್ತಿದ್ದಾರೆ ಎಂದು ಆರೋಪ ಮಾಡಿದ್ದಾರೆ.

> **ಮಾರ್ಟಳ್ಳಿ ಗ್ರಾಮ ಪಂ. 2025/26ನೇ ಸಾಲಿನಲ್ಲಿ ನರೇಗಾ ಯೋಜನೆಡಿ ಚರಂಡಿ ನಿರ್ಮಾಣ ಕಾಮಗಾರಿ ಮಾಡಲಾಗುತ್ತಿದ್ದು. ರಸ್ತೆ ಅಗಲೀಕರಣದ ಸಮಯ ಕೆಲವು ಅಂಗಡಿ ಮನೆ ತೆರವು ಮಾಡಿ , ಇನ್ನು ರಸ್ತೆ ಜಾಗ ಒತ್ತುವರಿ ಮಾಡಿ ಚರಂಡಿ ಮೇಲೆ ಮನೆ ನಿರ್ಮಾಣವಾಗಿರುವ ಮನೆಯನ್ನು ತೆರವು ಗೊಳಿಸದೇ ಕಾಮಗಾರಿ ಮಾಡುವ ವೇಳೆ ಸರ್ಕಾರಿ ಜಾಗ ಒತ್ತುವರಿ ಆಗಿರುವುದು ಬಳಕೆಗೆ ಬಂದಿದೆ. ಇದರಲ್ಲಿ ಚರಂಡಿಯ ಮೇಲೆ ಮನೆ ಕಟ್ಟಿರುವುದು ಕಂಡು ಬಂದಿದೆ.**

# ಬಾಲಕಿ ಶವ ಪತ್ತೆ ಪ್ರಕರಣ: ಅತ್ಯಾಚಾರ ನಡೆದಿಲ್ಲ ಎಂದ ಎಸ್‌ಪಿ

• ಉದಯವಾಹಿನಿ, ಬಿಡದಿ

ತಾಲ್ಲೂಕಿನ ಬಿಡದಿ ಹೋಬಳಿಯ ಭದ್ರಾಪುರದ ಹಕ್ಕಿಪಿಕ್ಕಿ ಕಾಲೊನಿಯಲ್ಲಿ ವಾರದ ಹಿಂದೆ ಶವವಾಗಿ ಪತ್ತೆಯಾಗಿದ್ದ ಮಾತು ಬಾರದ, ಕಿವಿ ಕೇಳಿಸದ ಬಾಲಕಿ ಖುಷಿ (15) ಮೇಲೆ ಅತ್ಯಾಚಾರ ನಡೆದಿಲ್ಲ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ದೃಢಪಟ್ಟಿದೆ. ಪ್ರಕರಣಕ್ಕೆ ಸಂಬಂಧಿಸಿದ ಎಫ್‌ಎಸ್‌ಎಲ್ ವರದಿ ಶನಿವಾರ ಸಂಜೆ ಕೈ ಸೇರುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಶ್ರೀನಿವಾಸ ಗೌಡ ಅವರು, ಬಿಡದಿ ಪೊಲೀಸ್ ಠಾಣೆಯಲ್ಲಿ ರಾತ್ರಿ ಸುದ್ದಿಗೋಷ್ಠಿ ನಡೆಸಿದರು. ಪುತ್ರಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂದು ತಾಯಿ ಸೇರಿದಂತೆ ಕುಟುಂಬದವರು ಆರೋಪಿಸಿದ್ದರು. ಹಾಗಾಗಿ, ಮರಣೋತ್ತರ ಪರೀಕ್ಷೆ ಸಂದರ್ಭದಲ್ಲಿ ಬಾಲಕಿ ದೇಹದ 32 ಮಾದರಿಗಳನ್ನು ಸಂಗ್ರಹಿಸಿ ಎಫ್‌ಎಲ್‌ಗೆ ಕಳಿಸಲಾಗಿತ್ತು. ಶನಿವಾರ ಸಂಜೆ ಕೈ ಸೇರಿದ ವರದಿಯಲ್ಲಿ ಅತ್ಯಾಚಾರ ನಡೆದಿಲ್ಲ ಎಂಬುದು ಗೊತ್ತಾಗಿದೆ ಎಂದರು.

ಬಾಲಕಿ ತಲೆಗೆ ಗಂಭೀರವಾದ ಪೆಟ್ಟು ಬಿದ್ದಿರುವ ಗುರುತುಗಳಿವೆ. ಸಾಮಾಜಿಕ ಮಾಧ್ಯಮಗಳಲ್ಲಿ ಹಬ್ಬಿಸಿರುವಂತೆ ಮೈ ಮೇಲೆ ಸಿಗರೇಟಿನಿಂದ ಸುಟ್ಟ ಗಾಯದಂತಹ ಯಾವುದೇ ಗುರುತುಗಳಿಲ್ಲ. ಸದ್ಯದಲ್ಲೇ ಮರಣೋತ್ತರ ಪರೀಕ್ಷೆ ವರದಿಯೂ ಕೈ ಸೇರಲಿದ್ದು, ಆಗ ಸಾವಿಗೆ ನಿಖರ ಕಾರಣ ಗೊತ್ತಾಗಲಿದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಾಲಕಿ ರೈಲಿಗೆ ಸಿಲುಕಿ ಮೃತಪಟ್ಟಿದ್ದಾಳೆ ಎಂಬ ಮಾತುಗಳ ಕುರಿತ ಪ್ರಶ್ನೆಗೆ, ಇದುವರೆಗಿನ ತನಿಖೆ, ವಿವಿಧ ಸಾಕ್ಷಾಧಾರಗಳನ್ನು ಪರಿಶೀಲಿಸಿದಾಗ ಬಾಲಕಿ ರೈಲಿಗೆ ಸಿಲುಕಿ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ 10 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತೇ ಹೊರತು, ಯಾರನ್ನೂ ಬಂಧಿಸಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

8ನೇ ತರಗತಿ ಓದುತ್ತಿದ್ದ ಹಕ್ಕಿಪಿಕ್ಕಿ ಸಮುದಾಯದ ಖುಷಿ, ಮೇ 11ರಂದು ರಾತ್ರಿ ನಾಪತ್ತೆಯಾಗಿದ್ದಳು. ಬೆಳಿಗ್ಗೆ 7.45ರ ಸುಮಾರಿಗೆ ಗ್ರಾಮಕ್ಕೆ ಹೊಂದಿಕೊಂಡಂತಿರುವ ರೈಲು ಹಳಿ ಪಕ್ಕ ಆಕೆ ಶವ ಅರೆ ನಗ್ನಾವಸ್ಥೆಯಲ್ಲಿ ಪತ್ತೆಯಾಗಿತ್ತು. ಇದರ ಬೆನ್ನಲ್ಲೇ ಸಾಮಾಜಿಕ ಜಾಲತಾಣಗಳಲ್ಲಿ ಶವದ ಚಿತ್ರವನ್ನು ಹಂಚಿಕೊಂಡಿದ್ದ ಹಲವರು, ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗಿದೆ ಎಂದು ಆರೋಪಿಸಿದ್ದರು. ಖುಷಿ ಸಾವಿಗೆ ನ್ಯಾಯ ಸಿಗಬೇಕು ಎಂದು ಅಭಿಯಾನ ಆರಂಭಿಸಿದ್ದರು. ಬಿಡದಿ ಪೊಲೀಸರು ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದರು.

# ಕೊತ್ತೂರು ಮಂಜುನಾಥ್ ಅನುಮಾನ ಸೇನೆ ಬಗ್ಗೆ ಅಲ್ಲ ಬಿಜೆಪಿ ನಾಯಕರ ಬಗ್ಗೆ: ರಾಮಲಿಂಗಾ ರೆಡ್ಡಿ

• ಉದಯವಾಹಿನಿ, ರಾಮನಗರ


ಮಂಜುನಾಥ್‌ಗೆ ಸೈನ್ಯದ ಬಗ್ಗೆ ವಿಶ್ವಾಸ ಇದೆ. ಸೈನ್ಯಕ್ಕೆ ಇನ್ನೂ ಫ್ರೀಹ್ಯಾಂಡ್ ಕೊಟ್ಟಿದ್ರೆ ಪಾಕಿಸ್ತಾನಕ್ಕೆ ಮತ್ತಷ್ಟು ಬುದ್ದಿ ಕಲಿಸಬಹುದಿತ್ತು ಎನ್ನುವುದು ಅವರ ಅಭಿಪ್ರಾಯ. ಅವರು ಬಿಜೆಪಿ ನಾಯಕರ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ ಹೊರತು ಸೈನ್ಯದ ಬಗ್ಗೆ ಅಲ್ಲ ಎಂದು ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಹೇಳಿದ್ದಾರೆ. ಆಪರೇಷನ್ ಸಿಂಧೂರ ಬಗ್ಗೆ ಶಾಸಕ ಕೊತ್ತೂರು ಮಂಜುನಾಥ್ ಅನುಮಾನ ವ್ಯಕ್ತಪಡಿಸಿದ ವಿಚಾರದ ಕುರಿತು ರಾಮನಗರದಲ್ಲಿ ಮಾತನಾಡಿದ ಅವರು, ಕೊತ್ತೂರು ಮಂಜುನಾಥ್ ಪಕ್ಕಾ ದೇಶಾಭಿಮಾನಿ. ಸೈನ್ಯದ ಬಗ್ಗೆ ಅವರು ತಪ್ಪು ಮಾತನಾಡಿಲ್ಲ. ಸೈನಿಕರ ಬಗ್ಗೆ ಕಾಂಗ್ರೆಸ್ ಯಾವತ್ತೂ ಅಪಮಾನ ಮಾಡಲ್ಲ. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಹೋರಾಟ ಮಾಡಿದ ಪಕ್ಷ. ಬಿಜೆಪಿಯವರು ಬೇಕಾದರೆ



ಸೈನಿಕರಿಗೆ ಅಪಮಾನ ಮಾಡಬಹುದು ಆದರೆ ಕಾಂಗ್ರೆಸ್ ಮಾಡಲ್ಲ. ಸೇನಾ ಮುಖ್ಯಸ್ಥರು ಹೇಳಿರೋದನ್ನ ನಾವು ನಂಬುತ್ತೇವೆ ಹೊರತು ಬಿಜೆಪಿಗರ ಮಾತು ನಂಬಲ್ಲ ಎಂದು ಕೊತ್ತೂರು ಮಂಜುನಾಥ್ ಹೇಳಿಕೆಯನ್ನ ಸಮರ್ಥನೆ ಮಾಡಿಕೊಂಡರು. ಬಮೂಲ್ ನಿರ್ದೇಶಕ ಸ್ಥಾನಕ್ಕೆ ಮಾಜಿ ಸಂಸದ ಡಿ.ಕೆ.ಸುರೇಶ್ ಸ್ಪರ್ಧೆ ಮಾಡಿರುವ ವಿಚಾರದ ಕುರಿತು ಮಾತನಾಡಿದ ಅವರು, ಶನಿವಾರ ಡಿ.ಕೆ ಸುರೇಶ್ ನಾಮ ಪತ್ರ ಸಲ್ಲಿಕೆ ಮಾಡಿದ್ದಾರೆ.

ಅವರು ಎಲ್ಲಾ ಸ್ಥಾನಕ್ಕೂ ಅರ್ಹವಾಗಿದ್ದಾರೆ. ಲೋಕಸಭಾ ಸದಸ್ಯರಾಗಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ. ಅವರು ಬಯಸಿದರೆ ಯಾವ ಸ್ಥಾನ ಬೇಕಾದರೂ ಅವರಿಗೆ ಸಿಗುತ್ತಿತ್ತು. ಆದರೆ ಅವರು ಯಾವ ಸ್ಥಾನವನ್ನೂ ಕೇಳಿರಲಿಲ್ಲ. ಈಗ ಬಮೂಲ್‌ಗೆ ಸ್ಪರ್ಧೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

# ರಸ್ತೆ ಅಭಿವೃದ್ಧಿ ಕಾಮಗಾರಿ ವಿಳಂಬ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಚಿಂತಾಮಣಿ

ತಾಲ್ಲೂಕಿನ ಮುರುಗಮಲೆಯಲ್ಲಿ ಲೋಕೋಪಯೋಗಿ ಇಲಾಖೆ ಅನುದಾನದಿಂದ ನಡೆಯುತ್ತಿರುವ ರಸ್ತೆ ಅಭಿವೃದ್ಧಿ ಕಾಮಗಾರಿ ವಿಳಂಬವಾಗಿದ್ದು ಭಕ್ತರಿಗೆ ತೊಂದರೆಯಾಗಿದೆ ಎಂದು ಗ್ರಾಮ ಪಂಚಾಯಿತಿ ಅಧ್ಯಕ್ಷ ಹಾಜಿ ಅನ್ಸರ್ ಖಾನ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ರಸ್ತೆ ಅಗಲೀಕರಣ ಕಾಮಗಾರಿಗೆ ಸಚಿವ ಡಾ.ಎಂ.ಸಿ.ಸುಧಾಕರ್ ಚಾಲನೆ ನೀಡಿ 4–5 ತಿಂಗಳಾಗಿದೆ. ಮುರುಗಮಲೆ ಯಾತ್ರಾಸ್ಥಳವಾಗಿದ್ದು ಪ್ರತಿನಿತ್ಯ ನೂರಾರು ಜನರು ಬರುತ್ತಾರೆ. ರಸ್ತೆ ಕಾಮಗಾರಿಗೆ ಅಗತ್ಯವಾದ ಜಲ್ಲಿ ಮತ್ತಿತರ ವಸ್ತುಗಳನ್ನು ಗುಡ್ಡೆ ಹಾಕಿದ್ದಾರೆ. ಕಸಕಡ್ಡಿ ಮಳೆ ನೀರು ನಿಂತಿದೆ. ಖಾಸಗಿ ನಿವೇಶನಗಳ ಮುಂದೆ ನರೇಗಾ ಮೂಲಕ ಮಾಡಿದ್ದ ಚರಂಡಿಗಳನ್ನು ಕಿತ್ತು ಹಾಕಿದ್ದಾರೆ. ಆ ನೀರು ರಸ್ತೆಗೆ ಹರಿಯುತ್ತಿದೆ. ಕೊಚ್ಚೆ ನೀರಿನಿಂದ ಸೊಳ್ಳೆಗಳ ಆವಾಸಸ್ಥಾನವಾಗಿ ಸಾಂಕ್ರಾಮಿಕ ರೋಗಗಳು ಹರಡುವ ಭೀತಿ ಎದುರಾಗಿದೆ ಎಂದು ತಿಳಿಸಿದರು.

ಲೋಕೋಪಯೋಗಿ ಇಲಾಖೆ ಎಂಜಿನಿಯರ್‌ಗೆ ಪರಿಸ್ಥಿತಿ ವಿವರಿಸಿ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಕಾಮಗಾರಿ ತಡವಾಗುತ್ತಿರುವುದರಿಂದ ಭಕ್ತರಿಗೆ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಬೇಕು ಎಂದು ಆಗ್ರಹಪಡಿಸಿದರು.

ದರ್ಗಾ ಆವರಣದಲ್ಲಿ ಇತ್ತೀಚೆಗೆ ಅನಧಿಕೃತ ಅಂಗಡಿಗಳು ತಲೆ ಎತ್ತುತ್ತಿವೆ. ದರ್ಗಾ ಅಧಿಕಾರಿಗಳ ನಿರ್ಲಕ್ಷ್ಯದ ವಿರುದ್ಧ ರಾಜ್ಯ, ಜಿಲ್ಲಾ ಮಟ್ಟದ ವಕ್ಸ್ ಬೋರ್ಡ್ ಅಧಿಕಾರಿಗಳು ಗಮನಹರಿಸಿ ಸೂಕ್ತ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಕಾನೂನು ಹೋರಾಟ ಮಾಡುವುದಾಗಿ ಎಚ್ಚರಿಸಿದರು.

# ರೈತರಿಗೆ ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ

## ಸಾಲ ಮಾಡಿ, ಐಸ್‌ಕ್ರೀಂ ಘಟಕ ನಿರ್ಮಾಣಕ್ಕೆ ಸಂಪೂರ್ಣ ವಿರೋಧ: ವೈ.ಎನ್. ನಾಗೇಂದ್ರ

• ಉದಯವಾಹಿನಿ, ಚಾಮರಾಜನಗರ

ಈಗಾಗಲೇ ಸಾಲದಲ್ಲಿರುವ ಹಾಲು ಒಕ್ಕೂಟವು ರೈತರು ನೀಡುತ್ತಿರುವ ಹಾಲಿನಲ್ಲಿ ಬರುವ ಲಾಭದಲ್ಲಿ ಸಾಲ ಮತ್ತು ಬಡ್ಡಿ ಪಾವತಿಸುತ್ತಾ ಬಂದಿದೆ. ಇನ್ನು ಮೂಲ ಬಂಡವಾಳವೇ ಇಲ್ಲದೇ ಐಸ್‌ಕ್ರೀಂ ಘಟಕ ಸ್ಥಾಪನೆಯಿಂದ ಮತ್ತಷ್ಟು ಸಾಲದ ಕೂಪಕ್ಕೆ ರೈತರನ್ನು ದೂಡಿದಂತಾಗುತ್ತದೆ. ಹೀಗಾಗಿ ಐಸ್‌ಕ್ರೀಂ ಘಟಕ ಸ್ಥಾಪನೆಗೆ ನನ್ನ ಸಂಪೂರ್ಣ ವಿರೋಧ ಇದೆ ಎಂದು ಚಾಮುಲ್ ಮಾಜಿ ಅಧ್ಯಕ್ಷ ವೈ.ಸಿ. ನಾಗೇಂದ್ರ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲೆಗೆ ಪ್ರತ್ಯೇಕ ಹಾಲು ಒಕ್ಕುಟ ನಿರ್ಮಾಣ ಮಾಡಬೇಕೆಂಬುದು ದಿ. ಎಚ್.ಎಸ್. ಮಹದೇವಪ್ರಸಾದ್ ಅವರ ಕನಸಾಗಿದ್ದು, ಅವರ ಆಶಯದಂತೆ ಘಟಕ ಕಾರ್ಯನಿರ್ವಹಣೆ ಮಾಡುತ್ತಿದೆ. ನಾನು ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಕೆಎಂಎಫ್, ಕೇಂದ್ರ ಸರ್ಕಾರದ ಸಹಾಯಧನ ಸೇರಿ ಬ್ಯಾಂಕಿನಿಂದ ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದು ಘಟಕ ನಿರ್ಮಿಸಲು ಅನುಮೋದನೆ ಕೊಟ್ಟಿದ್ದು ನಿಜ.

ಆದರೆ, ಬಳಿಕ ನಾವು ಕೆಎಂಎಫ್ ಹಾಗೂ ಸರ್ಕಾರದ ಮಟ್ಟದಲ್ಲಿ ಚರ್ಚೆ ಮಾಡಿದಾಗ ಬಂದಂತಹ ಪ್ರತಿಕ್ರಿಯೆಗಳು ಬೇರೆಯಾಗಿದ್ದು, ಕೇಂದ್ರ ಸರ್ಕಾರ ಸಬ್ಸಿಡಿ 5 ಕೋಟಿಗೆ ಇಳಿಕೆಯಾಗಿತ್ತು.ಕೆಎಂಎಫ್ ಅಧಿಕಾರಿಗಳು ನಮ್ಮ ಮನವಿಗೆ ಸ್ಪಂದಿಸಲಿಲ್ಲ. ಹೀಗಾಗಿ ಘಟಕ ಸ್ಥಾಪನೆಯಿಂದ ಲಾಭಕ್ಕಿಂತ ನಷ್ಟ ಹೆಚ್ಚು ಎಂದು ಅರಿತು ವಿಳಂಬ ಮಾಡಿದ್ದೇವೆ. ಆದರೆ, ಈಗಿನ ಅಧ್ಯಕ್ಷರು ಇದನ್ನೇ ಮಾನದಂಡವಾಗಿಟ್ಟು ನನ್ನ ಅವಧಿಯಲ್ಲಿ


ಉದಯವಾಹಿನಿ ಚಿತ್ರ

ಐಸ್‌ಕ್ರೀಂ ಘಟಕ ನಿರ್ಮಾಣಕ್ಕೆ ಅನುಮೋದನೆಯಾಗಿತ್ತು ಎಂದು ಸುಳ್ಳು ಹೇಳಿಕೆಯನ್ನು ನೀಡಿ, ಹಾಲು ಉತ್ಪಾದಕ ರೈತರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ನಾನು ಯಾವುದೇ ಕಾರಣಕ್ಕೂ ಸುಳ್ಳು ಹೇಳುವುದಿಲ್ಲ.

> **ದುರುದ್ದೇಶ ಕೂಡಿದೆ**
> **ರೈತನ ಮಗನಾಗಿ, ಚಾಮುಲ್‌ನಲ್ಲಿ ಐಸ್‌ಕ್ರೀಂ ಘಟಕ ಸ್ಥಾಪನೆಯಿಂದ ಲಾಭಕ್ಕಿಂತ ನಷ್ಟವಾಗುತ್ತದೇಯೇ ಹೊರತು ರೈತರಿಗೆ ಇದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಈ ವಾಸ್ತವ ಸತ್ಯವನ್ನು ಹಾಲು ಉತ್ಪಾದಕರ ರೈತರಿಗೆ ಹಾಗೂ ರೈತ ಮುಖಂಡರಿಗೆ ಮನವರಿಕೆ ಕೊಟ್ಟ ನಂತರ ಅವರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಐಸ್‌ಕ್ರೀಂ ಘಟಕ ಸ್ಥಾಪನೆಯ ಹಿಂದೆ ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ. ರಾಜ್‌ಕುಮಾರ್ ದುರುದ್ದೇಶ ಕೂಡಿದೆ ಎಂದು ನಾಗೇಂದ್ರ ನೇರ ಆರೋಪ ಮಾಡಿದರು.**

ಹಾಲು ಒಕ್ಕೂಟದ ಅಧ್ಯಕ್ಷ ನಂಜುಂಡಸ್ವಾಮಿ, ಅಧಿಕಾರಿ ವರ್ಗ ಐಸ್‌ಕ್ರೀಂ ಘಟಕ ಸ್ಥಾಪನೆಯಿಂದ ರೈತರಿಗೆ ಭಾರಿ

> **ರೈತರ ಪ್ರತಿಭಟನೆಗೆ ಬೆಂಬಲ**
> **ಚಾಮುಲ್‌ನಲ್ಲಿ ಸ್ಥಾಪನೆ ಮಾಡಲು ಮುಂದಾಗಿರುವ ಐಸ್‌ಕ್ರೀಂ ಘಟಕವನ್ನು ನಿಲ್ಲಿಸಬೇಕೆಂದು ರೈತ ಸಂಘಟನೆಗಳು ಮೇ 27 ರಂದು ಕರೆ ನೀಡಿರುವ ಪ್ರತಿಭಟನೆಗೆ ನನ್ನ ಸಂಪೂರ್ಣ ಬೆಂಬಲ ಇದೆ ಎಂದು ಘೋಷಣೆ ಮಾಡಿದರು. ಅಲ್ಲದೇ ಹಾಲು ಉತ್ಪಾದಕರ ರೈತರು ಸಹ ಒಕ್ಕೂಟದ ಒಳವು ಮತ್ತು ನಷ್ಟವನ್ನು ತಪ್ಪಿಸಲು ರೈತರ ಸಂಘ ಹೋರಾಟಕ್ಕೆ ಹೆಚ್ಚಿನ ಬೆಂಬಲ ನೀಡಬೇಕು ಎಂದು ನಾಗೇಂದ್ರ ಮನವಿ ಮಾಡಿದರು.**

ಲಾಭ ಬರುತ್ತದೆ ಎನ್ನುತ್ತಾರೆ. ಆದರೆ, ವಾಸ್ತವವಾಗಿ, ಹಾಸನ ಒಕ್ಕೂಟ 20 ಸಾವಿರ ಸಾಮರ್ಥ್ಯದ ಐಸ್‌ಕ್ರೀಂ ಘಟಕ ಸ್ಥಾಪನೆ ಮಾಡಿ ಕೈ ಸುಟ್ಟುಕೊಂಡಿದೆ. ಕೇವಲ 7 ಸಾವಿರ ಲೀಟರ್ ಮಾತ್ರ ಬೇಸಿಗೆಯಲ್ಲಿ ಐಸ್‌ಕ್ರೀಂ ಮಾರಾಟವಾಗುತ್ತಿದೆ. ಇನ್ನು ಇತರೇ ಒಕ್ಕೂಟ, ಕೆಎಂಎಫ್‌ಗೆ ಐಸ್‌ಕ್ರೀಂ ಸರಬರಾಜು ಮಾಡುತ್ತಿದ್ದಾರೆ. ಇದೇ ರೀತಿ ರಾಜ್ಯದ ಅನೇಕ ಒಕ್ಕೂಟದಲ್ಲಿ ಐಸ್‌ಕ್ರೀಂ ಘಟಕ ಇದ್ದು, ಕೇವಲ ಮೂರು ತಿಂಗಳ ವ್ಯಾಪಾರಕ್ಕೆ ಇಷ್ಟೊಂದು ಬಂಡವಾಳ ಹೂಡುವುದು ಸರಿಯೇ ಎಂಬುವುದು ನಮ್ಮ ಪ್ರಶ್ನೆಯಾಗಿದೆ. ಇದನ್ನು ಹಾಲು ಉತ್ಪಾದಕರ ರೈತರು ಅರಿತು ಹೋರಾಟಕ್ಕೆ ಬೆಂಬಲ ನೀಡಿ, ಭಾಗವಹಿಸಬೇಕು. ಚಾಮುಲ್‌ನಲ್ಲಿರುವ ಇನ್ನು ಅನೇಕ ನಿರ್ದೇಶಕರಿಗೆ ಘಟಕ ನಿರ್ಮಾಣ ಮಾಡಲು ಇಷ್ಟವಿಲ್ಲ ಎಂದು ನಾಗೇಂದ್ರ ತಿಳಿಸಿದರು.

ಅಂತರಾಳದಿಂದ.. EDITORIAL

# ಮೂಕ ವ್ಯವಸ್ಥೆಯ ಬರ್ಬರತೆಗೆ ಬಲಿಯಾದ ಮೂಕ ಹಕ್ಕಿ

ಆದರೆ ಈ ದುರಂತಕ್ಕೆ ಯಾರನ್ನು ಹೊಣೆ ಮಾಡಬೇಕು ಎನ್ನುವುದು ತಿಳಿಯದೆ ವ್ಯವಸ್ಥೆ ಕಂಗಾಲಾಗಿದೆ. ಬಿಡದಿಯಲ್ಲಿ ಕೊಲೆಯಾದ ಬಾಲಕಿಯ ಕುಟುಂಬದ ಕತೆಯೇ ಹೃದಯವಿದ್ರಾವಕವಾದುದು, ಬಾಲಕಿಯ ತಾಯಿ ಪ್ಲಾಸ್ಟಿಕ್ ಹೂಗಳ ಮಾಲೆಗಳನ್ನು ಮಾರುತ್ತಾ, ಕ್ಲೀನಿಂಗ್ ಕೆಲಸಗಳ ಮೂಲಕ ಬದುಕು ಮುನ್ನಡೆಸುತ್ತಿದ್ದಾಕೆ. ಕೆಲವೊಮ್ಮೆ ಗಾರೆ ಕೆಲಸಕ್ಕೂ ಹೋಗುತ್ತಾಳೆ. ಆಕೆಯ ಕುಟುಂಬದಲ್ಲಿ ಐದು ಜನರು ಮಕ್ಕಳು. ಅವರಲ್ಲಿ ಮೂವರು ಹುಟ್ಟು ಮೂಗರು, ಕುರುಡ ಗಂಡ ತೀರಿ ಹೋಗಿದ್ದು, ಇದೀಗ ಮತ್ತೆ ಮದುವೆಯಾಗಿದ್ದಾಳೆ. ಈಗ ಇರುವ ಗಂಡನೂ ಕೂಲಿ ಕೆಲಸ ಮಾಡುತ್ತಾ ಕುಟುಂಬಕ್ಕೆ ಸಹಾಯವಾಗುತ್ತಿದ್ದಾನೆ. ಕೊಲೆಯಾದ ಬಾಲಕಿ ಕೂಡ ಹುಟ್ಟು ಮೂಗಿ. ಎಂಟನೇ ತರಗತಿಯಲ್ಲಿ ಕಲಿಯುವ ಮಗಳು ಅಂದು ಸೀಮಂತ ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದಳು. ಸಂಜೆ ಹೊರ ಹೋದವಳು ನಾಪತ್ತೆಯಾಗಿದ್ದಾಳೆ. ರವಿವಾರ ತಡರಾತ್ರಿಯಾದರೂ ಬರದೇ ಇದ್ದಾಗ ರಾತ್ರಿ ಒಂದು ಗಂಟೆಗೆ ಬಿಡದಿ ಪೊಲೀಸ್ ಠಾಣೆಯಲ್ಲಿ ತಾಯಿ ದೂರು ನೀಡಿದ್ದಾಳೆ.

ಪೊಲೀಸರು ಆಕೆಯ ದೂರನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಮಂಗಳವಾರದಂದು ಬಾಲಕಿಯ ಮೃತದೇಹ ರೈಲ್ವೇ ಹಳಿ ಪಕ್ಕ ಅರೆನಗ್ನಾವಸ್ಥೆಯಲ್ಲಿ ಪತ್ತೆಯಾಗಿರ ಪತ್ತೆಯಾಗಿದ್ದು, ಆಕೆಯ ಮೇಲೆ ಅತ್ಯಾಚಾರವಾಗಿದೆ ಎಂದೂ ಕುಟುಂಬ ಆರೋಪಿಸುತ್ತಿದೆ. ಬಾಲಕಿಯನ್ನು ಅತ್ಯಂತ ಬರ್ಬರವಾಗಿ ಹಿಂಸೆ ನೀಡಿ ಕೊಂದು ಹಾಕಲಾಗಿದೆ. ಬಾಲಕಿಯ ಮೇಲೆ ಅತ್ಯಾಚಾರ ನಡೆದಿದೆಯೇ ಎನ್ನುವುದನ್ನು ಪೊಲೀಸರು ಇನ್ನೂ ಸ್ಪಷ್ಟಪಡಿಸಿಲ್ಲ.




**ಎರಡು ಕೊಲೆಗಳು ರಾಜ್ಯಾದ್ಯಂತ ತೀವ್ರ ಚರ್ಚೆಯಲ್ಲಿವೆ. ಒಂದು, ಬೆಂಗಳೂರು ಸಮೀಪದ ಬಿಡದಿ ಹೋಬಳಿಯಲ್ಲಿ ಹಕ್ಕಿ ಪಿಕ್ಕಿ ಸಮುದಾಯಕ್ಕೆ ಸೇರಿದ ಮೂಕ ಬಾಲಕಿಯೊಬ್ಬಳ ಬರ್ಬರ ಹತ್ಯೆ. ಇನ್ನೊಂದು, ಹುಬ್ಬಳ್ಳಿಯಲ್ಲಿ 12 ವರ್ಷದ ಬಾಲಕನೊಬ್ಬ 14 ವರ್ಷದ ಬಾಲಕನನ್ನು ಬರ್ಬರವಾಗಿ ಇರಿದು ಕೊಂದಿದ್ದಾನೆ. ಎಲ್ಲೋ ಪಾಶ್ಚಾತ್ಯ ದೇಶಗಳಲ್ಲಿ ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಗೆ ಪಿಸ್ತೂಲ್ ತಂದು ಸಹ ವಿದ್ಯಾರ್ಥಿಗಳಿಗೆ ಗುಂಡಿಕ್ಕಿರುವುದನ್ನು ಕೇಳಿದ್ದೇವೆ. ಆದರೆ ಭಾರತದಲ್ಲಿ ಅದೂ ಕರ್ನಾಟಕದ ಗ್ರಾಮೀಣ ಪ್ರದೇಶವೊಂದರ ಶಾಲೆಯಲ್ಲಿ ಎಳೆಯ ವಿದ್ಯಾರ್ಥಿಯೊಬ್ಬ ಸಹವಿದ್ಯಾರ್ಥಿಯೊಬ್ಬನನ್ನು ಚೂರಿಯಿಂದ ಇರಿದು ಕೊಲ್ಲುವುದು ನಮಗೆ ಹೊಸತು. ಇಲ್ಲಿ ಕೊಲೆಗೈಯಲ್ಪಟ್ಟ ವಿದ್ಯಾರ್ಥಿ ಮಾತ್ರವಲ್ಲ ಕೊಂದ ವಿದ್ಯಾರ್ಥಿಯೂ ಸಂತ್ರಸ್ತನೇ ಆಗಿದ್ದಾನೆ. ಇಬ್ಬರೂ ತಮ್ಮ ಭವಿಷ್ಯವನ್ನು ಕಳೆದುಕೊಂಡಿದ್ದಾರೆ.**

ಒಂದು ಎಳೆ ಬಾಲಕಿಯನ್ನು ಇಷ್ಟೊಂದು ಭೀಕರವಾಗಿ ಕೊಂದು ಹಾಕಿದ ಅಮಾನವೀಯ ರಾಕ್ಷಸರ ವಿರುದ್ಧ ಪೊಲೀಸ್ ತನಿಖೆ ಅತ್ಯಂತ ನಿಧಾನಗತಿಯಲ್ಲಿ ನಡೆಯುತ್ತಿದೆ ಎಂಬ ಆರೋಪ ಕೇಳಿ ಬರುತ್ತಿದೆ. ಈ ಹಕ್ಕಿ ಪಿಕ್ಕಿ ಕುಟುಂಬದ ಪರವಾಗಿ ವಿವಿಧ ಸಂಘಟನೆಗಳು ಜೊತೆ ಸೇರಿದ ಬಳಿಕ ಸರಕಾರ ಎಚ್ಚೆತ್ತುಕೊಂಡು, ಸಂತ್ರಸ್ತ ಕುಟುಂಬಕ್ಕೆ ಪರಿಹಾರವನ್ನು ಘೋಷಿಸಿತು. ಆದರೆ 8ನೇ ತರಗತಿಯಲ್ಲಿ ಕಲಿಯುವ, ಬಡಕುಟುಂಬದ ಮೂಗಿ ಬಾಲಕಿಯ ಮೇಲೆ ನಡೆದ ಅನ್ಯಾಯವನ್ನು ಬರೇ ದುಡ್ಡಿನಿಂದ ಸರಿದೂಗಿಸಲು ಸಾಧ್ಯವೆ? ದೂರು ನೀಡಿದ ತಕ್ಷಣವೇ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದಿದ್ದರೆ ಆರೋಪಿಗಳನ್ನು ಬಂಧಿಸುವುದು ಕಷ್ಟವಿರುತ್ತಿರಲಿಲ್ಲ ಎನ್ನುವುದು ಸ್ಥಳೀಯರ ವಾದವಾಗಿದೆ. ಹುಬ್ಬಳ್ಳಿಯಲ್ಲಿ ಆರನೇ ತರಗತಿಯ 12ವರ್ಷದ ವಿದ್ಯಾರ್ಥಿಯೊಬ್ಬ 14 ವರ್ಷದ ವಿದ್ಯಾರ್ಥಿಗೆ ಇರಿದಿರುವ ಪ್ರಕರಣದಲ್ಲಿ ಇಡೀ ವ್ಯವಸ್ಥೆಯೇ ಆರೋಪಿ ಸ್ಥಾನದಲ್ಲಿದೆ. ಇಲ್ಲಿ ಕೊಲೆಯಾದ ವಿದ್ಯಾರ್ಥಿಯ ಜೊತೆಗೆ ಕೊಲೆಗೈದ ವಿದ್ಯಾರ್ಥಿಯ ಭವಿಷ್ಯವೂ ಕಮರಿ ಹೋಗಿದೆ. ಸಮಾಜದಲ್ಲಿ ದಿನನಿತ್ಯ ರೌಡಿಶೀಟರ್‌ಗಳ ವೈಭವೀಕರಣ, ಟಿ.ವಿ.ಗಳಲ್ಲಿ, ಮೊಬೈಲ್‌ಗಳಲ್ಲಿ ಅಪರಾಧಗಳನ್ನು ರೋಚಕಗೊಳಿಸುವುದು, ಹಿಂಸೆಯನ್ನು ಮೌಲ್ಯವೆನ್ನುವ ರೀತಿಯಲ್ಲಿ ಅಭಿವ್ಯಕ್ತಿಗೊಳಿಸುವುದು, ರೌಡಿಗಳ ಗ್ಯಾಂಗ್‌ವಾರ್‌ಗಳಲ್ಲಿ ಸತ್ತು ಹೋದವರನ್ನು ಹುತಾತ್ಮರಾಗಿಸುವುದು ಇವೆಲ್ಲವೂ ಮಕ್ಕಳ ಮನಸ್ಸಿನ ಮೇಲೆ ಋಣಾತ್ಮಕ ಪರಿಣಾಮಗಳನ್ನು ಬೀರುತ್ತಿವೆ. ಅಂತಿಮವಾಗಿ ಇದು, ಶಾಲಾಬ್ಯಾಗ್‌ನೊಳಗೆ ಮಕ್ಕಳು ಕೂಡ ಚಾಕು, ಚೂರಿಗಳನ್ನು ಒಯ್ಯುವ ಸ್ಥಿತಿಯನ್ನು ನಿರ್ಮಾಣ ಮಾಡುತ್ತವೆ. ಹುಬ್ಬಳ್ಳಿಯಲ್ಲಿ ನಡೆದ ಕೊಲೆಯಲ್ಲಿ ಸಮಾಜದ ಪಾತ್ರ ಅತಿ ದೊಡ್ಡದು. ಈ ಕೃತ್ಯ ನಾವಿಂದು ಎಂತಹ ಕರಾಳ ಭವಿಷ್ಯದ ಕಡೆಗೆ ಹೆಜ್ಜೆಯಿಡುತ್ತಿದ್ದೇವೆ ಎನ್ನುವುದನ್ನು ಹೇಳಿದೆ. ಹಿರಿಯರು ತಮ್ಮನ್ನು ತಾವು ತಿದ್ದಿಕೊಳ್ಳುವ ಮೂಲಕ ತಮ್ಮ ಮಕ್ಕಳನ್ನು ಹಿಂಸೆಯ ಬಲೆಗೆ ಬೀಳದಂತೆ ರಕ್ಷಿಸಬೇಕಾಗಿದೆ. ಇದರಲ್ಲಿ ಪೊಲೀಸರ ಪಾತ್ರಕ್ಕಿಂತಲೂ ಪೋಷಕರ, ಶಿಕ್ಷಕರ ಹಾಗೆಯೇ ನಮ್ಮನ್ನಾಳುವ ರಾಜಕೀಯ ನಾಯಕರ ಪಾತ್ರ ಬಹುದೊಡ್ಡದಿದೆ.

# ರಾಮಾಯಣ



## ಸುಮಂತ್ರನು ಕೌಸಲ್ಯಾ ದೇವಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಅಲ್ಲಲ್ಲಿ ಉಪ್ಪರಿಗೆ ಮೇಲುಮಚ್ಚುಗಳಲ್ಲಿದ್ದ ಸ್ತ್ರೀಯರು ರಥವನ್ನು ನೋಡಿ ಮೊರೆಯಿಡುತ್ತ ಒಬ್ಬರ ಮುಖವನ್ನೊಬ್ಬರು ನೋಡುತ್ತ ರೋದನವನ್ನು ಮಾಡುತ್ತಿದ್ದರು. ಮಿತ್ರರಾದವರು ಶತ್ರುಗಳಾದವರು ಉದಾಸೀನಪುರುಷರು ಯಾರು ಯಾರೆಂದು ಗೊತ್ತಾಗುವಂತಿಲ್ಲ. ಎಲ್ಲರೂ ಒಂದೇ ಪ್ರಕಾರದಲ್ಲಿ ದುಃಖಪಡುತ್ತಿದ್ದಾರೆ. ಸಂತೋಷವಿಲ್ಲದೆ ಮುಖಕಾಂತಿಗುಂದಿ ಹೀನಸ್ವರವುಳ್ಳವರಾಗಿ ನಿಟ್ಟುಸಿರುಬಿಡುತ್ತಿರುವ ಜನಗಳುಳ್ಳ ಅಯೋಧ್ಯಾಪಟ್ಟಣವು ಪುತ್ರಶೋಕದಿಂದ ಹಂಬಲಿಸುತ್ತಿರುವ ಕೌಸಲ್ಯಾದೇವಿಯಂತೆ ಗೋಳಿಡುತ್ತಿದೆ ಎಂದು ಹೇಳಿದನು. ಆ ಮಾತನ್ನು ಕೇಳಿ ದಶರಥರಾಯನು ಅತ್ಯಂತ ದುಃಖದಿಂದ ಸುಮಂತ್ರನನ್ನು ಕುರಿತು ಹೀಗೆಂದನು: ಸುಮಂತ್ರ, ಅತ್ಯಂತ ಪಾಪಿಷ್ಠೆಯಾದ ಕೈಕೇಯಿಯಿಂದ ಮರುಳಾದ ನಾನು ಮಂತ್ರಾಲೋಚನೆಯಲ್ಲಿ ಕುಶಲರೂ ವೃದ್ಧರೂ ಆದ ಮಂತಿಗಳೊಡನೆ ಆಲೋಚನೆಯನ್ನು ಮಾಡಿ ಈ ಕಾರ್ಯವನ್ನು ನಿಶ್ಚಯಿಸಲಿಲ್ಲ. ಆಪ್ತರಾದ ಸ್ನೇಹಿತರೊಡನೆಯೂ ಶಾಸ್ತ್ರಜ್ಞರಾದ ಬ್ರಾಹ್ಮಣ ರೊಡನೆಯೂ ಮಂತ್ರಾಲೋಚನೆ ಮಾಡಿ ಕಾರ್ಯವನ್ನು ನಿಶ್ಚಯಿಸದೆ ಅಜ್ಞಾನದಿಂದ ಸಾಹಸವನ್ನು ಮಾಡಿದೆನು. ನನಗೆ ಬರಬೇಕಾಗಿದ್ದ ದುಃಖವು ಬಿಟ್ಟು ಹೋಗುವುದೆ ! ನನ್ನ ಕುಲಕ್ಷಯವಾಗುವ ಸಮಯವು ದೈವಾಧೀನದಿಂದ ಪ್ರಾಪ್ತವಾಯಿತು. ಸುಮಂತ್ರ, ನಾನು ಜನ್ಮಾಂತರದಲ್ಲಿ ಅಲ್ಪಮಾತ್ರವಾದರೂ ಪುಣ್ಯವನ್ನು ಮಾಡಿದ್ದೆನಾದರೆ ಪ್ರಾಣಸಹಿತನಾಗಿ ಶ್ರೀರಾಮನನ್ನು ಕಾಣುವೆನು. ನನ್ನನ್ನು ಆತನಿರುವ ಎಡೆಗೆ ಕರೆದುಕೊಂಡುಹೋಗು. ಅಲ್ಲದಿದ್ದರೆ ಆತನನ್ನು ಪುನಃ ಕರೆದುಕೊಂಡು ಬಾ. ಆತನಿಲ್ಲದೆ ನಾನು ಕ್ಷಣಮಾತ್ರವಾದರೂ ಜೀವಿಸಲಾರೆನು. ನೀನು ಆಲಸ್ಯಮಾಡಿದರೆ ಆತನು ಬಹುದೂರ ಹೊರಟುಹೋಗುವನು. ನನ್ನನ್ನು ರಥವನ್ನು ಹತ್ತಿಸಿಕೊಂಡು ಶ್ರೀರಾಮನಿರುವ ಬಳಿಗೆ ಕರೆದುಕೊಂಡುಹೋಗಿ ಸೀತಾಲಕ್ಷ್ಮಣಸಮೇತನಾದ ನನ್ನ ಮಗನನ್ನು ತೋರಿಸಿದೆಯಾದರೆ ನಾನು ಜೀವಿಸುವೆನು. ಪುಂಡರೀಕಾಕ್ಷನಾಗಿಯೂ ಆಜಾನುಬಾಹುವಾಗಿಯೂ ರತ್ನ ಕುಂಡಲಗಳನ್ನು ಧರಿಸಿಕೊಂಡಿರುವವನಾಗಿಯೂ ಇರುವ ಶ್ರೀರಾಮನನ್ನು ಕಾಣದಿದ್ದರೆ ಯಮನ ಸಮೀಪವನ್ನೈದುವೆನು. ಆತನನ್ನು ಕಾಣದಿರುವ ಅವಸ್ಥೆಯನ್ನು ಪಡೆದ ನನಗೆ ಇದಕ್ಕಿಂತಲೂ ವೆಗ್ಗಳವಾದ ದುಃಖವಿಲ್ಲ. ಹೀಗೆ ನುಡಿದು, ಹಾ ರಾಮ ಹಾ ಸೀತೆ ಹಾ ಲಕ್ಷ್ಮಣ ನಿಮ್ಮ ಅಗಲಿಕೆಯಿಂದುಂಟಾದ ದುಃಖದಿಂದ ಪ್ರಾಣಗಳನ್ನು ಬಿಡುವ ನನ್ನನ್ನು ಅನಾಥನಂತೆ ಏಕೆ ಬಿಟ್ಟಿರಿ ! ಎಂದು ಹಂಬಲಿಸಿ ದುಃಖವೆಂಬ ಸಾಗರದಲ್ಲಿ ಮುಳುಗಿಹೋದನು. ಆಮೇಲೆ ಕೌಸಲ್ಯಾದೇವಿಯನ್ನು ನೋಡಿ ಕೌಸ, ನಾನು ಈ ಶೋಕವೆಂಬ ಸಮುದ್ರದಲ್ಲಿ ಮುಳುಗಿಹೋದೆ. ಇದರಲ್ಲಿ ಕೈಕೇಯಿಯೇ ಬಡಬಾಗ್ನಿ : ಕುಬ್ಜೆಯೇ ಮೊಸಳೆ, ಈ ಶೋಕಸಮುದ್ರದಲ್ಲಿ ಮುಳುಗಿದ ನಾನು ಶ್ರೀರಾಮಲಕ್ಷ್ಮಣರನ್ನು ಕಾಣದಿದ್ದರೆ ಬಹಳ ಕೆಡುಕು ಸಂಭವಿಸುತ್ತದೆ. ಸಂಶಯವಿಲ್ಲ ಎಂದು ಹಂಬಲಿಸುತ್ತ ಮೂರ್ಛಿತನಾಗಿ ಹಾಸಿಗೆಯಲ್ಲಿ ಬಿದ್ದನು. ದಶರಥರಾಯನು ಈ ಪ್ರಕಾರದಲ್ಲಿ ಅತ್ಯಂತ ದೈನ್ಯದಿಂದ ಹಂಬಲಿಸುತ್ತಿದ್ದುದರಿಂದಲೂ ಶ್ರೀರಾಮನ ಅಗಲಿಕೆಯಿಂದಲೂ ಕೌಸಲ್ಯಾದೇವಿಯು ಇಮ್ಮಡಿಯಾದ ದುಃಖವುಳ್ಳವಳಾಗಿ ಅತ್ಯಂತ ಭಯವನ್ನೈದಿದಳು. ಆಮೇಲೆ ಕೌಸಲಾದೇವಿಯು ಸೆರೆಯಲ್ಲಿ ಸಿಕ್ಕಿದ ಸರ್ಪದಂತೆ ಮುಂದುಗಾಣದೆ ಕಂಗೆಡುತ್ತ ಸುಮಂತ್ರನನ್ನು ನೋಡಿ ಸುಮಂತ್ರ, ಸೀತಾಲಕ್ಷ್ಮಣಸಮೇತನಾದ ಶ್ರೀರಾಮನು ಯಾವ ಳದಲ್ಲಿದ್ದಾನೆಯೋ ಅಲ್ಲಿಗೆ ನನ್ನನ್ನು ಕರೆದುಕೊಂಡುಹೋಗು. **ಮುಂದುವರಿಯುವುದು...**

# ಅ.ನ. ಕೃಷ್ಣರಾಯರು



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ಅನಕೃ ಎಂದೇ ಸಾಹಿತ್ಯ ಲೋಕದಲ್ಲಿ ಚಿರಪರಿಚಿತ ರಾಗಿದ್ದ ಅರಕಲಗೂಡು ನರಸಿಂಗರಾವ್ ಕೃಷ್ಣರಾವ್ ಅವರು ಹೆಸರಾಂತ ಕಾದಂಬರಿಕಾರರು. 'ಕಾದಂಬರಿ ಸಾರ್ವಭೌಮ' ಎನಿಸಿಕೊಂಡಿದ್ದ ಅವರು ಕನ್ನಡದ ಜನಪ್ರಿಯ ಕಾದಂಬರಿಕಾರರು. ಪ್ರಗತಿಶೀಲ ಸಾಹಿತ್ಯದ ಪ್ರಮುಖ ಲೇಖಕರು. ತಂದೆ ನರಸಿಂಗರಾವ್, ತಾಯಿ ಅನ್ನಪೂರ್ಣಮ್ಮ. 1908 ರ ಮೇ 9 ರಂದು ಜನಿಸಿದ ಅವರು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಣವನ್ನು ಕೋಲಾರದಲ್ಲಿ ಮುಗಿಸಿದರು. ಬೆಂಗಳೂರಿನಲ್ಲಿ ಪ್ರೌಢಶಾಲಾ ಶಿಕ್ಷಣವನ್ನು ದೇಶೀಯ ವಿದ್ಯಾಶಾಲೆಯಲ್ಲಿ ಪಡೆದರು. ಮೆಟ್ರಿಕ್ ಓದುತ್ತಿದ್ದಾಗ ಶಾಂತಿನಿಕೇತನಕ್ಕೆ ಹೋಗಿ ಬಂದರು.

ಬರಹ ಮಾಡಿಯೇ ಬದುಕಿದವರು ಅನಕೃ. ಅನಕೃ ಹುಟ್ಟಿದ್ದು ಕೋಲಾರ ಜಿಲ್ಲೆ, ಕುಟುಂಬದ ಮೂಲ ಹಾಸನ ಜಿಲ್ಲೆಯ ಅರಕಲಗೂಡು, ತಂದೆ ನರಸಿಂಗರಾಯರು ಮತ್ತು ತಾಯಿ ಅನ್ನಪೂರ್ಣಮ್ಮನವರು. ಅನಕೃ ಮಹಾನ್ ಕನ್ನಡಾಭಿಮಾನಿಯಾಗಿದ್ದರು. ಕರ್ನಾಟಕದಲ್ಲಿ ಎಲ್ಲಾ ಭಾಷೆಯ ಜನರೂ ಇರಲಿ, ಆದರೆ ಅವರು ನಮ್ಮೊಂದಿಗೆ ಹೊಂದಿಕೊಂಡು ಹೋಗಲಿ, ಮಾತೃ ಭಾಷೆಯನ್ನು ಮೆಟ್ಟಿ ಮುನ್ನುಗ್ಗುವುದು ಸರಿಯಲ್ಲ ಎಂಬುದು ಅವರ ಮೂಲತತ್ವವಾಗಿತ್ತು. ತಮ್ಮ ಜೀವಮಾನದುದ್ದಕ್ಕೂ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಹೋರಾಡಿದರು.

ಅದಕ್ಕಾಗಿ ಕರ್ನಾಟಕದಲ್ಲೆಲ್ಲಾ ಸುತ್ತಾಡಿದರು. ತಮ್ಮ ಚಳುವಳಿ, ಭಾಷಣಗಳ ಮೂಲಕ ಕನ್ನಡಿಗರನ್ನು ಹುರಿದುಂಬಿಸಿದರು. ಚಿ ಕನ್ನಡಿಗರಲ್ಲಿ ಸುಪ್ತವಾಗಿದ್ದ ಸ್ವಾಭಿಮಾನವನ್ನು ಜಾಗೃತಗೊಳಿಸಿದರು. ಕನ್ನಡ ಚಿತ್ರಗಳಿಗೆ ಚಿತ್ರಮಂದಿರಗಳು ಸಿಗದಿದ್ದ ಕಾಲದಲ್ಲಿ ಅನಕೃ ಅದಕ್ಕಾಗಿ ಹೋರಾಟ ನಡೆಸಿದರು. ಅನಕೃ ಅವರ ಚಳುವಳಿಯಿಂದ ಬೆಂಗಳೂರಿನ ಅಲಂಕಾರ್ ಚಿತ್ರಮಂದಿರದಲ್ಲಿ ಮೊತ್ತ ಮೊದಲ ಬಾರಿಗೆ ಕನ್ನಡ ಚಿತ್ರ ಪ್ರದರ್ಶನಗೊಂಡಿತು. ಹೀಗೆ ಪ್ರದರ್ಶಿತವಾದ ಮೊದಲ ಚಿತ್ರ 1963 ರಲ್ಲಿ ತೆರೆಕಂಡ ಜಿ.ವಿ.ಅಯ್ಯರ್ ನಿರ್ದೇಶನದ ಬಂಗಾರಿ. ವಿಶೇಷವೆಂದರೆ ತುಂಬಿದ ಕೊಡ ಚಿತ್ರದಲ್ಲಿ ಸಾಹಿತಿ ಅ.ನ.ಕೃ. ಸಣ್ಣ ಪಾತ್ರವೊಂದರಲ್ಲಿ ಅಭಿನಯಿಸಿದ್ದರು.

ಇವರು ಪತ್ರಿಕಾ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಕಥಾಂಜಲಿ, ಬಾಂಬೆ ಕ್ರಾನಿಕಲ್, ವಿಶ್ವವಾಣಿ ಪತ್ರಿಕೆಗಳನ್ನು ನಡೆಸಿದರು. ಪ್ರಗತಿಶೀಲ ಸಾಹಿತ್ಯದ ಚಳವಳಿ (1943-44) ಯಲ್ಲಿ ನಿರತರಾದರು. ಬಿಎಂಶ್ರೀ ಅವರ ಕಾಲದಲ್ಲಿ ಕನ್ನಡ ನುಡಿ ಸಂಪಾದಕರಾಗಿದ್ದ ಅವರು ಕೇಂದ್ರ ಸಚಿವ ದಿವಾಕರರ ಹಿಂದಿ ಪ್ರತಿಪಾದನೆಯನ್ನು ವಿರೋಧಿಸಿ ಪತ್ರಿಕೆಯನ್ನು ತೊರೆದರು.

ಕನ್ನಡ ಚಳವಳಿ ನೇತಾರರಾಗಿ ರಾಮಮೂರ್ತಿ ಅವರೊಡನೆ ಸೇರಿ ಕನ್ನಡಿಗರಲ್ಲಿ ಜನಜಾಗೃತಿ ಮೂಡಿಸಿ ಕನ್ನಡಾಭಿಮಾನ ಬೆಳೆಸಿದರು. ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿದ್ದರು.

ತಮ್ಮ ಅದ್ಭುತ ವಾಗ್ವೈಖರಿಯಿಂದ ನಾಡಿನಲ್ಲೆಲ್ಲಾ ಜನಪ್ರಿಯರಾಗಿದ್ದ ಅವರ ಮೊದಲ ಕಾದಂಬರಿ ಗೃಹಲಕ್ಷ್ಮೀ. ತಮ್ಮ ಕಾದಂಬರಿಗಳ ಮೂಲಕ ಕನ್ನಡ ಓದುಗರನ್ನು ಹೆಚ್ಚಿಸಿದ್ದು ಇವರ ಹೆಗ್ಗಳಿಕೆ.

ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ (1970) ನೀಡಿ ಸನ್ಮಾನಿಸಿತು. ಸಾಹಿತ್ಯ ಪರಿಷತ್ತು ಮಣಿಪಾಲದಲ್ಲಿ ನಡೆದ 42 ನೇ ಕನ್ನಡ ಸಾಹಿತ್ಯ ಸಮ್ಮೇಳನದ (1960) ಅಧ್ಯಕ್ಷರನ್ನಾಗಿ ಆಯ್ಕೆಮಾಡಿತ್ತು. ಸಾಹಿತ್ಯ, ಸಂಗೀತ, ಚಿತ್ರಕಲೆ, ನಾಟ್ಯ, ನಾಟಕ ಕಲೆಗಳಲ್ಲಿ ಅಪಾರ ಒಲವು, ವಿಮರ್ಶಾ ಶಕ್ತಿ ಇದ್ದ ಅನಕೃ ಅವರು ಅವೆಲ್ಲ ವಿಷಯಗಳ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. 1971 ರ ಜುಲೈ 4 ರಂದು ಅವರು ನಿಧನರಾದರು. ಕನ್ನಡ ಕುಲರಸಿಕರು (ಜೀವನ ಚರಿತ್ರೆ), ಬರಹಗಾರನ ಬದುಕು (ಆತ್ಮಕಥೆ), ಬಣ್ಣದ ಬೀಸಣಿಗೆ, ಮದುವೆಯೋ ಮನೆಹಾಳೋ (ನಾಟಕಗಳು), ಗಾರ್ಕಿಯ ಕಥೆಗಳು, ಸ್ಟೋರಿ ಆಫ್ ಇಂಡಿಯಾ (ಅನುವಾದಗಳು), ಕರ್ನಾಟಕ ಕಲಾವಿದರು, 100 ಕಾದಂಬರಿ ಸೇರಿದಂತೆ 200 ಕ್ಕೂ ಹೆಚ್ಚು ಕೃತಿಗಳನ್ನೂ ರಚಿಸಿದ್ದಾರೆ.

## ಸಾಮಾಜಿಕ ಕಳಕಳಿ



ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

### ದಿನಕ್ಕೊಂದು ಮುಕ್ತಕ -89

ಮನೆಯದುವೆ ಇರುವುದದು ನನ್ನದದು ಆಗಿರಲಿ
ಸನಿಹದಲಿ ಆಸೆಗಳ ಬುಟ್ಟಿಯಿರಲು
ದನಿಕನನು ಗಮನಿಸುತ ಒಳ್ಳೆಯದೆ ಬಯಸುತಲಿ
ಹನಿಯಾಗಿ ಬಯಕೆಗಳು ಲಕ್ಷ್ಮಿದೇವಿ.......



ಹೆಣ್ಣಾಗಿ ಹುಟ್ಟಿದ ಮೇಲೆ ಹೆಣ್ಣಿನ ಮನೆ ಯಾವುದಿದೆ. ಒಂದು ಹುಟ್ಟಿದ ಮನೆಯಾದರೆ, ಮದುವೆ ನಂತರದಲ್ಲೇ ಗಂಡನ ಮನೆ. ಹೆಣ್ಣಿನ ಮನೆ ಮನೆ ಎಂಬುದು ಶಾಶ್ವತವಾಗಿ ಯಾವುದು ಇಲ್ಲ ಎಂಬುದಾಗಿ ಹೇಳುವ ಹಲವರಿದ್ದಾರೆ. ಅಂತಹದರಲ್ಲಿ ಹೆಣ್ಣಿನ ಸ್ವಂತ ದುಡಿಮೆಯಲ್ಲಿ ಯಾರ ಹಂಗಿಲ್ಲದೆ ಪುಟ್ಟ ಗೂಡನ್ನು ಮಾಡಿಕೊಂಡರು ಸಹ ಅದು ಆಕೆಗೆ ಅರಮನೆ.

ಸಮಯದಲ್ಲಿ ಆಸೆಗಳ ಬುತ್ತಿಯನ್ನು ಇಟ್ಟುಕೊಂಡು ದನಿಕನನ್ನು ನೋಡುತ್ತ ಒಳ್ಳೆಯದನ್ನು ಬಯಸುತ್ತಾ ಸಾಗುತ್ತಿರುತ್ತಾಳೆ. ಬಯಕೆಗಳೆಲ್ಲ ಯಾವುದೋ ದೊಡ್ಡ ರೀತಿಯಲ್ಲಿ ಇರದೆ ಹನಿಯಾಗಿ ಮೂಡಿ ಬರುತ್ತಿರುತ್ತದೆ. ಇದು ಕೇವಲ ಆಕೆಯ ಆಸೆಯಾಗಿರುತ್ತದೆ, ಕನಸಾಗಿರುತ್ತದೆ, ಜೀವನದ ಪ್ರಮುಖ ಘಟ್ಟ ಹೊಂದಿರುವ ಅಪೇಕ್ಷಿಯಾಗಿರುತ್ತದೆ.

## ಕವನ ಕಾಲ..

ಶುಭ ಕಾಲ ಈ ಕಾಲ ಯಾವ ಕಾಲ
ರಾಹುಕಾಲ ಯಮಗಂಡಕಾಲ
ಗುಳಿಕಾಲ ಸಾಯುವನಿಗೇ ಗೊತ್ತಾ
ಯಾವ ಕಾಲ ಹುಟ್ಟು ಮಗುವಿಗೆ
ತಿಳಿದಿತ್ತ ಈ ಕಾಲ
ಎಲ್ಲಾವು ನಮ್ಮ
ಕಾಲ...
ಆ ವಾರ ಈ ವಾರ
ಯಾವ ವಾರ
ಹಣ ಕೊಡುವುದಕ್ಕೇ
ಈ ವಾರ ಶುಭ ಅಶುಭಕ್ಕೇ
ಯಾವ ವಾರ ಜೀವನವು ಹೀಗೆ
ನಾವು ನಡೆಯುವುದು ಹಾಗೆ
ದಿನ ಕಾಲ ಬದಲಾಗಲ್ಲಿಲ್ಲ
ಈ ಬದಲಾವಣೆಗೆ
ನಾವೇ ಕಾರಣ
ಸುಳ್ಳುಗೆ ಇದೆ ಬೆಲೆ
ಸತ್ಯಕ್ಕೆ ಇಲ್ಲ ನೆಲೆ
ಬಣ್ಣ ಬಣ್ಣದ ಮಾತಿಗೆ
ಬೆಲೆ ಜಾಸ್ತಿ
ನಾ ಹೀಗೆ ಇರುವೇ
ಸತ್ಯವೇ ಹೇಳುವೇ
ನನ್ನ ಜೀವನವೇ ಹೀಗೆ
ಈ ಮನುಷ್ಯನಿಗೆ ಗೌರವ
ಮರ್ಯಾದೆನೇ ಇಲ್ಲವೇ..



ವಿ.ಎಂ.ಎಸ್.ಗೋಪಿ
• ಉದಯವಾಹಿನಿ, ವಿಶೇಷ

# ಈಗಾಗಲೇ ಈ ಕಾಯಿಲೆಯಿಂದ ಬಳಲುತ್ತಿರುವವರು, ನೆನೆಹಾಕಿದ ವಾಲ್ನಟ್ ತಿನ್ನುವ ಅಭ್ಯಾಸ ಮಾಡಿ!

ಡ್ರೈ ಫ್ರೂಟ್ಸ್‌ಗಳಲ್ಲಿ ನಮ್ಮ ದೇಹಕ್ಕೆ ಅಗತ್ಯವಾಗಿ ಬೇಕಾದ ಸಾಕಷ್ಟು ಬಗೆಯ ಪೌಷ್ಟಿಕಾಂಶಗಳು ಕಂಡು ಬರುತ್ತದೆ. ಇದೇ ಕಾರಣಕ್ಕೆ ಇವುಗಳನ್ನು ಸೂಪರ್ ಫುಡ್ ಎಂದು ಕರೆಯುವುದು. ಇದರಲ್ಲಿ ವಾಲ್ನಟ್ಸ್‌ಗಳು ಕೂಡ ಒಂದು. ಇದರ ಸಂಪೂರ್ಣ ಪ್ರಯೋಜನಗಳನ್ನು ಪಡೆಯಲು ಪ್ರತಿದಿನ ಈ ಬೀಜಗಳನ್ನು ನೆನೆಸಿಟ್ಟು ಸೇವನೆ ಮಾಡುವ ಅಭ್ಯಾಸ ಮಾಡಿಕೊಳ್ಳಬೇಕು ಮಾರುಕಟ್ಟೆಯಲ್ಲಿ ಸಿಗುವ ಬಾದಾಮಿ ಗೋಡಂಬಿ, ಒಣದ್ರಾಕ್ಷಿ, ಒಣ ಖರ್ಜೂರ ಇತ್ಯಾದಿಗಳಂತೆ ವಾಲ್ನೆಟ್ ಅಥವಾ ಅಕ್ರೋಟು ಕೂಡ ದೇಹದ ಆರೋಗ್ಯದ ಮೇಲೆ ಸಕರಾತ್ಮಕ ಪ್ರಭಾವ ಬೀರುತ್ತದೆ. ಪ್ರಮುಖವಾಗಿ ಹಲವಾರು ಕಾಯಿಲೆಗಳನ್ನು ನಿಯಂತ್ರಣದಲ್ಲಿಡಲು ನೆರವಾಗುತ್ತದೆ. ಬೆಲೆಯಲ್ಲಿ ದುಬಾರಿ ಎನ್ನುವ ಒಂದೇ ಕಾರಣ ಬಿಟ್ಟರೆ, ಆರೋಗ್ಯದ ವಿಚಾರದಲ್ಲಿ, ಈ ಒಣಫಲವನ್ನು ಎಷ್ಟು ಹೊಗಳಿದರೂ ಕೂಡ ಸಾಲದು

ಹೌದು ನಮಗೆಲ್ಲಾ ಗೊತ್ತೇ ಇರುವ ಹಾಗೆ ಮಾರುಕಟ್ಟೆಯಲ್ಲಿ ಸ್ವಲ್ಪ ದುಬಾರಿ ಎನಿಸುತ್ತದೆ ಅಂತಹ ಆಹಾರ



ಪದಾರ್ಥದಿಂದ ಆರೋಗ್ಯದ ಲಾಭಗಳು ಸ್ವಲ್ಪ ಹೆಚ್ಚು ಎಂದು ಹೇಳ ಬಹುದು. ಇದಕ್ಕೆ ವಾಲ್ನಟ್ ಬೀಜಗಳು ಸಹ ಹೊರತಲ್ಲ! ಹೃದಯಕ್ಕೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳಿಂದ ಹಿಡಿದು ದೇಹದಲ್ಲಿ ಉಂಟಾಗುವ ಇನ್ನಿತರ ಹಲವಾರು ಆರೋಗ್ಯ ಸಮಸ್ಯೆಗಳಿಗೆ ವಾಲ್ನಟ್ ಸೇವನೆಯಿಂದ ಮುಕ್ಕಾಲು ಪಾಲು ಪರಿಹಾರ ಸಿಗುತ್ತದೆ ಎಂಬ ನಂಬಿಕೆಯಿದೆ! ಹೀಗಾಗಿ ಈ ಒಣ ಬೀಜಗಳ ಸಂಪೂರ್ಣ ಲಾಭಪಡೆಯಲು ಪ್ರತಿದಿನ ಮೂರು-ನಾಲ್ಕು ವಾಲ್ನೆಟ್ ಬೀಜಗಳನ್ನು ದಿನಾ ಮಲಗುವ ಮುನ್ನ ಒಂದು ಲೋಟ ನೀರಿನಲ್ಲಿ ನೆನೆಸಿಟ್ಟು ಸೇವನೆ ಮಾಡುವ ಅಭ್ಯಾಸ ಮಾಡಿಕೊಂಡರೆ ಬಹಳ ಒಳ್ಳೆಯದು ಎನ್ನುತ್ತಾರೆ ಆರೋಗ್ಯ ತಜ್ಞರು

**ಹೃದಯದ ಆರೋಗ್ಯಕ್ಕೆ ಒಳ್ಳೆಯದು:** ವಾಲ್ನಟ್ ಬೀಜಗಳು ತಮ್ಮಲ್ಲಿ ಆರೋಗ್ಯಕರವಾದ ಕೊಬ್ಬು ಹಾಗೂ ಆಂಟಿ ಆಕ್ಸಿಡೆಂಟ್ ಅಂಶಗಗಳು ಅಪಾರ ಪ್ರಮಾಣದಲ್ಲಿ ಕಂಡು ಬರುತ್ತದೆ. ಇವು ಎರಡೂ ಆರೋಗ್ಯಕಾರಿ ಅಂಶಗಳು ರಕ್ತನಾಗಳಲ್ಲಿ ಸೇರಿ ಕೊಂಡಿರುವ ಕೆಟ್ಟ ಕೊಲೆಸ್ಟ್ರಾಲ್ ಪ್ರಮಾಣವನ್ನು ನಿಯಂತ್ರಣ ಮಾಡುವುದರ ಜೊತೆಗೆ ರಕ್ತದೊತ್ತಡದಲ್ಲಿ ಏರುಪೇರಾಗದಂತೆ ನೋಡಿಕೊಳ್ಳುತ್ತದೆ ಹಾಗೂ ಹೃದಯದ ರಕ್ತನಾಳಕ್ಕೆ ಸರಿಯಾಗಿ ರಕ್ತ ಸಂಚಾರ ಆಗುವಂತೆ ನೋಡಿಕೊಂಡು ಹೃದಯಕ್ಕೆ ಯಾವುದೇ ತೊಂದರೆ ಉಂಟಾಗದಂತೆ ನೋಡಿಕೊಳ್ಳುತ್ತದೆ. ಇನ್ನು ಈ ಬಗ್ಗೆ ಸಂಶೋಧಕರು ಹೇಳುವಂತೆ ದಿನಾ ಎರಡು ಮೂರು ವಾಲ್ನಟ್ ಬೀಜಗಳನ್ನು ನೆನೆಸಿಟ್ಟು ಸೇವನೆ ಮಾಡುವ ಜನರಿಗೆ ಹೃದಯಕ್ಕೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ಕಂಡು ಬರುವ ಸನ್ನಿವೇಶ ಶೇಕಡ 10 ಪ್ರತಿಶತದಷ್ಟು ಕಡಿಮೆಯಾಗು ತ್ತದೆಯಂತೆ!

**ಮೂಳೆಗಳ ಆರೋಗ್ಯಕ್ಕೆ ಒಳ್ಳೆಯದು:** ದೇಹದ ಮೂಳೆಗಳು ಯಾವಾಗಲೂ ಕೂಡ ಸದೃಢವಾಗಿ ಹಾಗೂ ಆರೋಗ್ಯಯುತವಾಗಿ ಇರಬೇಕು ಎಂದರೆ, ಮೊದಲಿಗೆ ನಮ್ಮ ಆಹಾರ ಪದ್ಧತಿಯಲ್ಲಿ ಕ್ಯಾಲ್ಸಿಯಂ ಅಂಶ ಹೆಚ್ಚಿರುವ ಆಹಾರ ಪದಾರ್ಥಗಳನ್ನು ಸೇರಿಸಿಕೊಳ್ಳಬೇಕು.

ಕ್ಯಾಲ್ಸಿಯಂ ಪ್ರಮಾಣ ಕಡಿಮೆ ಆದರೆ, ಮೂಳೆ ಸಂಬಂಧಿ ಆರೋಗ್ಯ ಸಮಸ್ಯೆಗಳು ಕಂಡು ಬರುವ ಸಾಧ್ಯತೆ ಇರುತ್ತದೆ. ಈ ನಿಟ್ಟಿನಲ್ಲಿ ನೋಡುವುದಾದರೆ ವಾಲ್ನಟ್ ಬೀಜಗಳು ತುಂಬಾನಾ ನೆರವಿಗೆ ಬರುತ್ತವೆ ಯಾಕೆಂದ್ರೆ, ಮೂಳೆಗಳ ಆರೋಗ್ಯಕ್ಕೆ ಪ್ರಮುಖವಾಗಿ ಬೇಕಾಗಿರುವ ಮೆಗ್ನೀಷಿಯಮ್, ಕ್ಯಾಲ್ಸಿಯಂ ಮತ್ತು ಫಾಸ್ಫರಸ್ ಪ್ರಮಾಣ ಹೇರಳವಾಗಿದ್ದು ಆರೋಗ್ಯಕರವಾದ ಮೂಳೆಗಳು ನಮ್ಮದಾಗುವ ಹಾಗೆ ಮಾಡುತ್ತದೆ.

# ನಿತ್ಯ ಉಪ್ಪಿನಕಾಯಿ ಸವಿದರೆ ಆಗುವ ಲಾಭವೇನು?

ಭಾರತೀಯ ಸಂಸ್ಕೃತಿಯಲ್ಲಿ ಹಲವು ಆಹಾರಗಳು ಜನರ ನಡುವೆ ಬೆರೆತು ಹೋಗಿವೆ. ಅದರಲ್ಲೂ ಉಪ್ಪಿನಕಾಯಿ ಎಲ್ಲರ ಮನೆಯ ಖಾದ್ಯ ಎನ್ನಬಹುದು. ಹಳ್ಳಿಯಿಂದ ಹಿಡಿದು ನಗರವಾಸಿಗಳ ಅಚ್ಚುಮೆಚ್ಚಿನ ಆಹಾರದಲ್ಲಿ ಈ ಉಪ್ಪಿನಕಾಯಿಯೂ ಒಂದಾಗಿರಲಿದೆ. ಹಾಗೆ ಉಪ್ಪಿನ ಕಾಯಿ ಬಳಸದೆ ಯಾವುದೇ ಶುಭ ಕಾರ್ಯದ ಊಟ ಮುಕ್ತಾಯ ಆಗುವುದೇ ಇಲ್ಲ. ಎಲ್ಲಾ ಶುಭ ಸಮಾರಂಭ ಸೇರಿದಂತೆ ಭೋಜನ ಕೂಟದಲ್ಲಿ ಉಪ್ಪಿನಕಾಯಿ ಬಳಸಿಯೇ ಬಳಸುತ್ತಾರೆ ಅದರಲ್ಲೂ ಈಗಂತು ಮಾರುಕಟ್ಟೆಯಲ್ಲಿ ಹಲವು ಬಗೆಯ ಉಪ್ಪಿನ ಕಾಯಿಗಳನ್ನು ನಾವು ನೋಡ ಬಹುದು. ಉಪ್ಪಿನ'ಕಾಯಿಯಲ್ಲಿ ಹಲವು ರೀತಿಯ ಮಸಾಲೆಗಳು, ಆರೋಗ್ಯಕರ ಅಂಶಗಳು ಸೇರಿರುತ್ತವೆ. ಉಪ್ಪಿನಕಾಯಿಗಳು ಪ್ರೋಬಯಾಟಿಕ್‌ಗಳು, ವಿಟಮಿನ್‌ಗಳು, ಉತ್ಕರ್ಷಣ ನಿರೋಧಕಗಳಲ್ಲಿ ಸಮೃದ್ಧವಾಗಿವೆ, ಇದು ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ, ರೋಗನಿರೋಧಕ ಶಕ್ತಿಯನ್ನು ಸಹ ಹೆಚ್ಚಿಸುತ್ತದೆ. ಆದ್ರೆ ಮಾರುಕಟ್ಟೆಯಲ್ಲಿ ಸಿಗುವ ಕೆಲವು ಉಪ್ಪಿನಕಾಯಿಯಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಸೋಡಿಯಂ ಹಾಗೆ ಎಣ್ಣೆಯನ್ನು ಬಳಸುವುದು ಆರೋಗ್ಯಕ್ಕೆ ಹಾನಿಕಾರಕ ಎನಿಸಿದರೂ ಮನೆಯಲ್ಲೇ ಮಾಡಿರುವ ಉಪ್ಪಿನಕಾಯಿಗಳಂತು ಯಾವಾಗಲು ನಿಮ್ಮ ಆರೋಗ್ಯಕ್ಕೆ ಉತ್ತಮ ಬೆಂಬಲ ನೀಡುತ್ತವೆ. ಹಾಗಾದ್ರೆ ಈ ಉಪ್ಪಿನಕಾಯಿ ಸೇವನೆಯಿಂದ ನಿಮ್ಮ ಆರೋಗ್ಯಕ್ಕೆ ಆಗುವ ಲಾಭವೇನು?



ಎಂಬುದನ್ನು ಇಲ್ಲಿ ತಿಳಿದುಕೊಳ್ಳೋಣ.

**ಕರುಳಿನ ಆರೋಗ್ಯಕ್ಕೆ ಬಹಳ ಉತ್ತಮ:** ಸಾಸಿವೆ ಅಥವಾ ವಿನೆಗರ್‌ನಿಂದ ಮಾಡಿದ ಉಪ್ಪಿನ ಕಾಯಿಗಳು ಕರುಳಿನ ಬ್ಯಾಕ್ಟೀರಿಯಾದ ಬೆಳವಣಿಗೆಯನ್ನು ಉತ್ತೇಜಿಸುತ್ತವೆ. ಈ ಪ್ರೋಬಯಾಟಿಕ್‌ಗಳು ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ, ಹಾಗೆ ನಿಮಗೆ ಹೊಟ್ಟೆ ಉಬ್ಬರದಂತಹ ಸಮಸ್ಯೆ ಇದ್ದರೆ ಅದೂ ಕೂಡ ಸುಧಾರಣೆಯಾಗಲಿದೆ.

**ರೋಗನಿರೋಧಕ ಶಕ್ತಿ ವೃದ್ಧಿಸಲಿದೆ:** ಆರೋಗ್ಯಕರ ಕರುಳು ಬಲವಾದ ರೋಗನಿರೋಧಕ ವ್ಯವಸ್ಥೆಯನ್ನು ವೃದ್ಧಿಸಲಿದೆ. ಉಪ್ಪಿನಕಾಯಿಯಲ್ಲಿರುವ ಪ್ರೋಬಯೋಟಿಕ್‌ಗಳು ಮತ್ತು ಉತ್ಕರ್ಷಣಾ ನಿರೋಧಕಗಳು ಉರಿಯೂತವನ್ನು ಕಡಿಮೆ ಮಾಡಲು ಸೋಂಕುಗಳ ವಿರುದ್ಧ ದೇಹದ ರಕ್ಷಣಾತ್ಮಕ ವ್ಯವಸ್ಥೆಯನ್ನು ಬಲಪಡಿಸಲಿದೆ.

**ಜೀರ್ಣಕ್ರಿಯೆಗೆ ಸಹಕಾರಿ:** ಉಪ್ಪಿನಕಾಯಿಯಲ್ಲಿ ಹೆಚ್ಚಾಗಿ ಸಾಸಿವೆ, ಮೆಂತ್ಯ ಮತ್ತು ಇಂಗು ಸಾಮಾನ್ಯವಾಗಿ ಬಳಸಿಯೇ ಬಳಸುತ್ತಾರೆ, ಇದನ್ನು ಆಯುರ್ವೇದದಲ್ಲಿ ಜೀರ್ಣಕಾರಿ ಕಿಣ್ವಗಳನ್ನು ಉತ್ತೇಜಿಸಲು ಮತ್ತು ಆಹಾರ ಜೀರ್ಣಕ್ರಿಯೆ ಹೊಂದಲು ಸಹಕಾರಿಯಾಗಿದೆ. ನಿತ್ಯ ನೀವು ಉಪ್ಪಿನಕಾಯಿ ಸೇವಿಸುವುದು ಈ ಅಂಶಗಳ ಬಳಕೆ ಹಚ್ಚುವಂತೆ ಮಾಡುತ್ತದೆ, ಹೀಗಾಗಿ ಜೀರ್ಣಕ್ರಿಯೆ ಪ್ರಕ್ರಿಯೆ ಸರಾಗವಾಗಲಿದೆ.

**ಸ್ನಾಯು ಸೆಳೆತವನ್ನು ಕಡಿಮೆ ಮಾಡಲಿದೆ:** ವಿನೆಗರ್ ಬಳಸಿ ಮಾಡುವ ಉಪ್ಪಿನಕಾಯಿ, ವಿಶೇಷವಾಗಿ ಸೌತೆ ಕಾಯಿ ಉಪ್ಪಿನ ಕಾಯಿಯಲ್ಲಿನ ಸೋಡಿಯಂ, ಪೊಟ್ಯಾಸಿಯಮ್‌ನಂತಹ ಅಂಶಗಳಲ್ಲಿ ಸಮೃದ್ಧವಾಗಿದೆ.

ತೀವ್ರವಾದ ವ್ಯಾಯಾಮದ ನಂತರ ಸ್ನಾಯು ಸೆಳೆತವನ್ನು ತಡೆಗಟ್ಟಲು ಅಥವಾ ನಿವಾರಿಸಲು ಕ್ರೀಡಾಪಟುಗಳು ಕೆಲವೊಮ್ಮೆ ಉಪ್ಪಿನಕಾಯಿ ರಸವನ್ನು ಸವಿಯುವುದು ನೋಡಬಹುದು. ಇದು ಸ್ನಾಯು ಸೆಳೆತವನ್ನು ಕಡಿಮೆ ಮಾಡಲು ಸಹಕಾರಿಯಾಗಿದೆ.

# ಬಿಪಿ ಕಾಯಿಲೆ ಇರುವವರು ಈ ಸಿಂಪಲ್ ಡಯಟ್ ಫಾಲೋ ಮಾಡಿ

ರಕ್ತದೊತ್ತಡ ದಿನ. ಈ ಕಾಯಿಲೆಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ. ಇನ್ನು ರಕ್ತದೊತ್ತಡವನ್ನು ನಿಯಂತ್ರಣ ಮಾಡಿಕೊಳ್ಳುವುದು ನಮ್ಮ ಕೈಯಲ್ಲೇ ಇದೆ. ಬಿಪಿ ಮಾತ್ರೆ ತೆಗೆದು ಕೊಳ್ಳುವುದರ ಜೊತೆಗೆ ಆಹಾರ ಪದ್ಧತಿಯಲ್ಲಿನ ಬದಲಾವಣೆ ತುಂಬಾ ಒಳ್ಳೆಯದು.

ಇಂದಿನ ದಿನಗಳಲ್ಲಿ ನಮ್ಮ ನಡುವೆ ಬಿಪಿ, ಮಧುಮೇಹ ಕಾಯಿಲೆಯಿಂದ ಬಳಲುತ್ತಿರುವವರ ಸಂಖ್ಯೆ ತುಂಬಾನೇ ಹೆಚ್ಚಾಗಿ ಬಿಟ್ಟಿದ್ದಾರೆ! ನಮ್ಮ ಹಿರಿಯರು ಹೇಳುವ ಪ್ರಕಾರ ಹಿಂದಿನ ಕಾಲದಲ್ಲಿ ಎಲ್ಲಾ ಕೇವಲ ವಯಸ್ಸಾದ ಮೇಲೆ ಒಬ್ಬರಿಗೋ ಇಬ್ಬರಿಗೋ ಬರುತ್ತಿದ್ದ ಈ ಆರೋಗ್ಯ ಸಮಸ್ಯೆಗಳು, ಇಂದು ವಯಸ್ಸು 30 ದಾಟುವ ಮುನ್ನವೇ ಈ ಕಾಯಿಲೆಗಳು ಕಾಣಿಸಿಕೊಳ್ಳುತ್ತಿರುವುದು ನಿಜಕ್ಕೂ ವಿಪರ್ಯಾಸವೇ ಸರಿ ಕೆಲವರಿಗೆ ಬದಲಾದ ಜೀವನ ಶೈಲಿ ಹಾಗೂ ಅನುವಂಶೀಯವಾಗಿ ಈ ಕಾಯಿಲೆಗಳು ಕಾಣಿಸಿಕೊಂಡರೆ, ಇನ್ನೂ ಕೆಲವರಿಗೆ ತಮ್ಮ ಆರೋಗ್ಯ ಶೈಲಿಯಲ್ಲಿ ಬದಲಾವಣೆ ತಂದುಕೊಂಡ ನಂತರ ಈ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿದೆ. ಆದರೆ ನಿಮಗೆ ಗೊತ್ತಿರಲಿ ಈ ಎರಡೂ ಕಾಯಿಲೆಗಳು ಮನುಷ್ಯನನ್ನು ಒಮ್ಮೆ ಆವರಿಸಿಕೊಂಡು ಬಿಟ್ಟರೆ, ಮತ್ತೆ ಆತ ಸಾಯುವವರೆಗೂ ಕೂಡ ಈ ಕಾಯಿಲೆಗಳ ಜೊತೆಗೆಯೇ ಜೀವನ ನಡೆಸುವ ಪರಿಸ್ಥಿತಿ ಎದುರಾಗುತ್ತದೆ!

**ಅಧಿಕರಕ್ತದೊತ್ತಡ:** ಇನ್ನು ಅಧಿಕರಕ್ತದೊತ್ತಡದ ಅಂದರೆ ಹೈಬಿಪಿ ಕಾಯಿಲೆಯ ಬಗ್ಗೆ ಹೇಳುವುದಾದರೆ, ದೇಹದಲ್ಲಿ ರಕ್ತದೊತ್ತಡವು ಸಾಮಾನ್ಯವಾಗಿದ್ದರೆ



ಆರೋಗ್ಯವು ಕೂಡ ಸರಿಯಾಗಿರುತ್ತದೆ. ಆದರೆ ರಕ್ತದೊತ್ತಡವು ಅಧಿಕವಾಗಿದ್ದರೆ ವಿವಿಧ ರೀತಿಯ ಆರೋಗ್ಯ ಸಮಸ್ಯೆಗಳು ಬರ ಬಹುದು. ಒಂದು ವೇಳೆ ಈ ಕಾಯಿಲೆ ನಿಯಂತ್ರಣಕ್ಕೆ ಸಿಗದಿದ್ದರೆ, ಮುಂದಿನ ದಿನಗಳಲ್ಲಿ ಹೃದಯಕ್ಕೆ ಸಂಬಂಧಪಟ್ಟ ಕಾಯಿಲೆಗಳಾದ, ಹೃದಯಾಘಾತ, ಪಾರ್ಶ್ವವಾಯು ವಿನಂತಹ ಸಮಸ್ಯೆ ಬರಬಹುದು. ಇದನ್ನು ಸಮ ತೋಲನದಲ್ಲಿ ಇಟ್ಟುಕೊಂಡರೆ ಆಗ ಆರೋಗ್ಯಕಾರಿ ಜೀವನ ನಡೆಸಬಹುದು. ರಕ್ತದೊತ್ತಡಕ್ಕೆ ಮುಖ್ಯವಾಗಿ ಔಷಧದೊಂದಿಗೆ ಜೀವನಶೈಲಿ ಹಾಗೂ ಆಹಾರಪದ್ಧತಿಯಲ್ಲಿ ಬದಲಾವಣೆ ಕೂಡ ಅಗತ್ಯವಾಗಿರುವುದು. (ಮೇ.17)ರಕ್ತದೊತ್ತಡ ದಿನ. ಈ ಕಾಯಿಲೆಯ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ದಿನವನ್ನು ಆಚರಿಸಲಾಗುತ್ತದೆ. ಬನ್ನಿ ಇಂದಿನ ಲೇಖನದಲ್ಲಿ ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡಲು ಯಾವೆಲ್ಲಾ ಆಹಾರಗಳನ್ನು ಸೇವನೆ ಮಾಡಬೇಕುಯಾವೆಲ್ಲಾ ಆಹಾರ ಪದಾರ್ಥಗಳನ್ನು ಸೇವನೆ ಮಾಡಬಾರದು ಎನ್ನುವುದರ ಬಗ್ಗೆ ಆಯುರ್ವೇದ ತಜ್ಞ ಆಚಾರ್ಯ ಬಾಲಕೃಷ್ಣ ಅವರು ನೀಡಿರುವ ಮಾಹಿತಿಯನ್ನು ನೋಡೋಣ?

**ಹಣ್ಣುಗಳನ್ನು ಸೇವನೆ ಮಾಡಿ**

**ಅಧಿಕ ರಕ್ತದೊತ್ತಡದ ಕಾಯಿಲೆಯಿಂದ ಬಳಲುತ್ತಿರುವವರು ಹಣ್ಣುಗಳನ್ನು ಸೇವನೆ ಮಾಡುವ ಅಭ್ಯಾಸ ಮಾಡಿಕೊಂಡರೆ ಒಳ್ಳೆಯದು. ಯಾಕೆಂದ್ರೆ, ಹಣ್ಣುಗಳಲ್ಲಿ ಕಂಡು ಬರುವ ವಿವಿಧ ಬಗೆಯ ವಿಟಮಿನ್ಸ್‌ಗಳು, ಆಂಟಿ ಆಕ್ಸಿಡೆಂಟ್ ಅಂಶಗಳು, ಬಿಪಿಯನ್ನು ನಿಯಂತ್ರಣ ಮಾಡುವುದರ ಜೊತೆಗೆ ಹೃದಯದ ಆರೋಗ್ಯವನ್ನು ಕಾಪಾಡಲು ಕೂಡ ನೆರವಿಗೆ ಬರುತ್ತದೆ. ಪ್ರಮುಖವಾಗಿ ಇವು ದೇಹದಲ್ಲಿ ಶೇಖರಣೆ ಗೊಂಡಿರುವ ಸೋಡಿಯಂ ಅಂಶವನ್ನು ಕಡಿಮೆ ಮಾಡಿ ರಕ್ತದ ಒತ್ತಡವನ್ನು ಅತ್ಯಂತ ಪರಿಣಾಮ ಕಾರಿಯಾಗಿ, ನಿಯಂತ್ರಿಸುವ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತದೆ.**

**ಡ್ರೈ ಫ್ರೂಟ್ಸ್ ನೆನೆಸಿಟ್ಟು ಸೇವನೆ ಮಾಡಿ :** ಅಧಿಕ ರಕ್ತದೊತ್ತಡ ಇರುವವರು ಒಣ ಹಣ್ಣುಗಳನ್ನು ಅಂದರೆ ಡ್ರೈ ಫ್ರೂಟ್ಸ್ ಸೇವಿಸುವ ಅಭ್ಯಾಸ ಇಟ್ಟುಕೊಂಡರೆ ತುಂಬಾನೇ ಒಳ್ಳೆಯದು ಎನ್ನುತ್ತಾರೆ ತಜ್ಞರು. ಒಣಗಿದ ಹಣ್ಣುಗಳಲ್ಲಿ ಒಮೆಗಾ-3 ಕೊಬ್ಬಿನಾಮ್ಲಗಳಿದ್ದು, ಇದು ಹೃದಯದ ಆರೋಗ್ಯವನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತದೆ.

ಹೀಗಾಗಿ ನೀವೂ ಕೂಡ ಈಗಾಗಲೇ ಅಧಿಕರಕ್ತದೊತ್ತಡದ ಕಾಯಿಲೆಯಿಂದ ಬಳಲುತ್ತಿದ್ದರೆ, ಒಣಬೀಜಗಳನ್ನು ನೆನೆಸಿಟ್ಟು ತಿನ್ನುವ ಅಭ್ಯಾಸ ಮಾಡಿಕೊಳ್ಳಿ. ಪ್ರತಿದಿನ ಬೆಳಿಗ್ಗೆ ಖಾಲಿ ಹೊಟ್ಟೆಗೆ ಮೂರು-ನಾಲ್ಕು ನೆನೆಸಿದ ಬಾದಾಮಿ, ಇಲ್ಲಾಂದ್ರೆ ವಾಲ್ನಟ್ಗಳನ್ನು ಸೇವಿಸಬಹುದು.

**ತರಕಾರಿಗಳನ್ನು ಸೇವನೆ ಮಾಡಿ :** ರಕ್ತದೊತ್ತಡ ನಿಯಂತ್ರಣ ಮಾಡುವಲ್ಲಿ ಕೂಡ ನಮ್ಮ ಆಹಾರ ಪದ್ಧತಿಯ ಹಾಗೂ ಜೀವನಶೈಲಿಯಲ್ಲಿ ಬದಲಾವಣೆ ಪರಿಣಾಮ ಕಾರಿಯಾಗಿ ಕೆಲಸ ಮಾಡಬಲ್ಲದು.

ಹೀಗಾಗಿ ಈ ಕಾಯಿಲೆಯಿಂದ ಬಳಲುತ್ತಿರುವವರು, ತಮ್ಮ ದೈನಂದಿನ ಆಹಾರಪದ್ಧತಿಯಲ್ಲಿ ಹಸಿರು ಎಲೆ ತರಕಾರಿಗಳು ಸೇರಿದಂತೆ ಇನ್ನೂ ಹಲವು ನೈಟ್ರೇಟ್ ಹಾಗೂ ಪೊಟ್ಯಾಷಿಯಂ ಅಂಶ ಹೆಚ್ಚಾಗಿ ಕಂಡು ಅಂಶ ತರಕಾರಿಗಳನ್ನು ತಮ್ಮ ದೈನಂದಿನ ಆಹಾರ ಪದ್ಧತಿಯಲ್ಲಿ ಸೇರಿಸಿಕೊಳ್ಳ ಬೇಕು. ಇವು ರಕ್ತದ ಒತ್ತಡವನ್ನು ಬಹಳ ಸುಲಭವಾಗಿ ಮತ್ತು ವೇಗವಾಗಿ ನಾರ್ಮಲ್ ಸ್ವರೂಪಕ್ಕೆ ತರಬಲ್ಲವು. ಉದಾಹರಣೆಗೆ ಎಲೆಕೋಸಿನಲ್ಲಿ ಪೊಟ್ಯಾಷಿಯಂ ಪ್ರಮಾಣ ಹೇರಳವಾಗಿದೆ, ಅದೇ ರೀತಿಯಾಗಿ ಎಲೆಕೋಸಿನಂತೆ ಕಂಡುಬರುವ ಬ್ರೊಕೋಲಿ, ಇದರಲ್ಲಿಯೂ ಕೂಡ ಮೆಗ್ನೀಷಿಯಂ, ಕ್ಯಾಲ್ಸಿಯಂ ಪೊಟ್ಯಾಷಿಯಂ ಪ್ರಮಾಣ ಹೇರಳವಾಗಿ ಕಂಡು ಬರುತ್ತದೆ. ಇನ್ನು ಬೀಟ್ರೂಟ್ ಕೂಡ ರಕ್ತದ ಒತ್ತಡವನ್ನು ನಿಯಂತ್ರಣದಲ್ಲಿಡಲು ನೆರವಾಗುತ್ತದೆ, ಇನ್ನು ಹೂಕೋಸು, ಪಾಲಕ್, ಆಲೂಗಡ್ಡೆ ಮುಂತಾದ ತರಕಾರಿಗಳನ್ನು ಆಹಾರ ಪದ್ಧತಿಯಲ್ಲಿ ಸೇರಿಸಿಕೊಂಡರೆ ಒಳ್ಳೆಯದು.

● ಜನರಿಗೆ ಸೂರು ಕಲ್ಪಿಸುವ ಉದ್ದೇಶದಿಂದ ರೂಪಿಸಿದ ವಸತಿ ಯೋಜನೆಯ ಅನುದಾನ ಸದ್ಬಳಕೆಯಾಗಬೇಕು

# ವಸತಿ ಯೋಜನೆ ಅನುದಾನ ಹಿಂದಿರುಗಬಾರದು: ಡಾ.ಪ್ರಭಾ ಮಲ್ಲಿಕಾರ್ಜುನ್

• **ಉದಯವಾಹಿನಿ, ದಾವಣಗೆರೆ**

ಜನರಿಗೆ ಸೂರು ಕಲ್ಪಿಸುವ ಉದ್ದೇಶದಿಂದ ರೂಪಿಸಿದ ವಸತಿ ಯೋಜನೆಯ ಅನುದಾನ ಸದ್ಬಳಕೆಯಾಗಬೇಕು. ಆರ್ಥಿಕ ಸಾಮರ್ಥ್ಯ ಹೊಂದಿದ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ವಸತಿ ಸೌಲಭ್ಯಕ್ಕೆ ಸರ್ಕಾರ ಬಿಡುಗಡೆಗೊಳಿಸಿದ ಅನುದಾನ ಮರಳಿ ಹೋಗದಂತೆ ಎಚ್ಚರವಹಿಸಬೇಕು ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸೂಚನೆ ನೀಡಿದರು.

ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಶನಿವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ (ದಿಶಾ) ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಸೂರು ನಿರ್ಮಿಸಿಕೊಳ್ಳುವ ತವಕದಲ್ಲಿ ಜನರಿದ್ದಾರೆ. ವಸತಿ ಸೌಲಭ್ಯಕ್ಕೆ ಸಾಕಷ್ಟು ಬೇಡಿಕೆ ಇದೆ. ಆದರೆ, ಕೇಂದ್ರ ಸರ್ಕಾರ ಒದಗಿಸುತ್ತಿರುವ ಅನುದಾನದಲ್ಲಿ ಮನೆ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ನಿವೇಶನ ಹೊಂದಿದ. ಆರ್ಥಿಕ ಸಾಮರ್ಥ್ಯ ಇರುವ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು. ಈ ಪ್ರಕ್ರಿಯೆ ಪಾರದರ್ಶಕವಾಗಿರಬೇಕು ಎಂದು ತಾಕೀತು ಮಾಡಿದರು.

ವಸತಿ ಬೇಡಿಕೆ ಸಮೀಕ್ಷೆಯ ಪಟ್ಟಿ ಇಟ್ಟುಕೊಂಡು ಮನಬಂದಂತೆ ಫಲಾನುಭವಿಗಳನ್ನು ಆಯ್ಕೆ ಮಾಡಿದ ಪರಿಣಾಮವಾಗಿ ಯೋಜನೆ ನಿರೀಕ್ಷಿತ ಪ್ರಗತಿ ಕಾಣುತ್ತಿಲ್ಲ. ಯಾವ ನಿಗಮದ ವಸತಿ ಯೋಜನೆಗೆ ಫಲಾನುಭವಿ ಅರ್ಹ ಎಂಬುದನ್ನು ಮೊದಲು ಗುರುತಿಸಿ. ಮಂಜೂರಾಗಿರುವ ಮನೆಗಳನ್ನು ಕಟ್ಟಿಕೊಳ್ಳುವಂತೆ ಫಲಾನುಭವಿಗಳ ಮನವೊಲಿಸಿ’ ಎಂದು ಹೇಳಿದರು.

**ಭಣಗುಡುವ ಮಳಿಗೆ ಬಗ್ಗೆ ಅಸಮಾಧಾನ:** ಖಾಸಗಿ ಬಸ್ ನಿಲ್ದಾಣದ ಮೊದಲ ಮತ್ತು ಎರಡನೇ ಮಹಡಿಯಲ್ಲಿ ನಿರ್ಮಿಸಿದ ಮಳಿಗೆಗಳಿಗೆ ಗ್ರಾಹಕರು ಬರುತ್ತಿಲ್ಲ ಎಂಬ ಆರೋಪವಿದೆ. ಕೆಲವು ಖಾಲಿ ಉಳಿದಿರುವ ಬಗ್ಗೆ ದೂರುಗಳು ಬಂದಿವೆ. ಸ್ಮಾರ್ಟ್ ಸಿಟಿ ಯೋಜನೆಯಡಿ ಕಲ್ಪಿಸಿದ ಮೂಲಸೌಲಭ್ಯ ಜನರಿಗೆ ಉಪಯೋಗವಾಗದಿದ್ದರೆ ಹೇಗೆ’ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಪ್ರಶ್ನಿಸಿದರು.

ಖಾಸಗಿ ಬಸ್ ನಿಲ್ದಾಣದಲ್ಲಿ 67 ಮಳಿಗೆಗಳ ಹರಾಜು ಪ್ರಕ್ರಿಯೆ ಪೂರ್ಣಗೊಂಡಿದೆ. 20 ಮಳಿಗೆಗಳನ್ನು ಬಾಡಿಗೆ ಪಡೆಯಲು ಯಾರೊಬ್ಬರು ಆಸಕ್ತಿ ತೋರಿಲ್ಲ. ಮಳಿಗೆಗಳ ಬಾಡಿಗೆ ಕಡಿಮೆ ಮಾಡಿ ಮರು ಟೆಂಡರ್ ಕರೆಯಲಾಗುವುದು’ ಎಂದು ಅಧಿಕಾರಿಯೊಬ್ಬರು ಸಭೆಗೆ ಮಾಹಿತಿ ನೀಡಿದರು. ’ಬೀದಿ ಬದಿ ವ್ಯಾಪಾರಸ್ಥರು ನಗರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರಿಗೆ ಈ ಮಳಿಗೆಗಳನ್ನು ನೀಡುವ ವ್ಯವಸ್ಥೆ ಆಗಬೇಕು ಎಂದು ಡಾ.ಪ್ರಭಾ ಸೂಚನೆ ನೀಡಿದರು.



**ವಾಹನಕ್ಕೆ ಜಿಪಿಎಸ್**

ಸ್ವಚ್ಛ ಭಾರತ್ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ಮನೆ-ಮನೆ ಕಸ ಸಂಗ್ರಹಿಸುವ ಶೇ 80ರಷ್ಟು ವಾಹನಗಳಿಗೆ ಜಿಪಿಎಸ್ ಸಾಧನ ಅಳವಡಿಸಿ ಕಣ್ಗಾವಲು ವ್ಯವಸ್ಥೆ ರೂಪಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸ್ವಚ್ಛ ಭಾರತ್ ಯೋಜನೆಯಡಿ ಕಸ ಸಂಗ್ರಹ ಕಾರ್ಯ ಚುರುಕುಗೊಳಿಸಲಾಗಿದೆ. ಕಸದ ವಾಹನದ ಮೇಲೆ ನಿಗಾ ಇಡಲು ಜಿಪಿಎಸ್ ಸಾಧನ ಅಳವಡಿಸಲಾಗಿದೆ. ಕಸ ಸಂಗ್ರಹ ಹಾಗೂ ನಿರ್ವಹಣೆಯಲ್ಲಿ ಸಾಕಷ್ಟು ಸುಧಾರಣೆ ಕಂಡಿದೆ’ ಎಂದು ಸುರೇಶ್ ಇಟ್ನಾಳ್ ಸಭೆಗೆ ಮಾಹಿತಿ ನೀಡಿದರು.

**ಸ್ಕ್ಯಾನಿಂಗ್‌ಗೆ ಏಕರೂಪ ದರ**

ಎಂಆರ್‌ಐ ಸ್ಕ್ಯಾನಿಂಗ್‌ಗೆ ಏಕರೂಪ ದರ ನಿಗದಿಪಡಿಸಲಾಗುವುದು. ಹೆಚ್ಚುವರಿ ದರ ಪಡೆಯುವ ಆಸ್ಪತ್ರೆ, ಸ್ಕ್ಯಾನಿಂಗ್ ಕೇಂದ್ರಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು. ಜಿಲ್ಲಾ ಆಸ್ಪತ್ರೆಯಲ್ಲಿ ಎಂಆರ್‌ಐ ಸ್ಕ್ಯಾನಿಂಗ್ ಸೌಲಭ್ಯ ಇನ್ನೂ ಸಿಗದಿರುವ ಬಗ್ಗೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು. ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಲು ಬಾಪೂಜಿ ವೈದ್ಯಕೀಯ ಕಾಲೇಜು ಅಥವಾ ಈ ಸೌಲಭ್ಯ ಇರುವ ಆಸ್ಪತ್ರೆಗಳ ನೆರವು ಪಡೆಯುವಂತೆ ಸೂಚನೆ ನೀಡಿದರು.

**ದಿಶಾ ಸಭೆ**

**ಶಾಲೆ ಮೇಲೆ ನಿಗಾ ಅಗತ್ಯ**

ಹೊನ್ನಾಳಿ ತಾಲ್ಲೂಕಿನ ಬನ್ನಿಕೋಡ ಗ್ರಾಮದ ಅನುದಾನಿತ ಶಾಲೆಗೆ ಈಚೆಗೆ ಭೇಟಿ ನೀಡಿದ್ದೆ. ಶಿಕ್ಷಣ ಸಂಸ್ಥೆಯೊಂದು ಹೊಂದಿರಬೇಕಾದ ಕನಿಷ್ಠ ಸೌಲಭ್ಯಗಳು ಇಲ್ಲಿಲ್ಲ. ಈ ಶಾಲೆಯ ಶಿಕ್ಷಣದ ಗುಣಮಟ್ಟದ ಬಗ್ಗೆ ಸಾರ್ವಜನಿಕರಿಂದ ದೂರು ಬಂದಿವೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಕಳಪೆ ಸಾಧನೆ ತೋರಿದ ಅನುದಾನಿತ ಶಿಕ್ಷಣ ಸಂಸ್ಥೆ ಹಾಗೂ ’ಶೂನ್ಯ’ ಫಲಿತಾಂಶ ಪಡೆದ ಶಾಲೆಗಳ ಮೇಲೆ ನಿಗಾ ಇಡಬೇಕು’ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸೂಚಿಸಿದರು.

**ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಸಾಕಷ್ಟು ಶ್ರಮಿಸಲಾಗಿದೆ. ತರಗತಿಗೆ ಗೈರು ಹಾಜರಾಗುವ ವಿದ್ಯಾರ್ಥಿಗಳ ಮೇಲೆ ಇನ್ನಷ್ಟು ನಿಗಾ ಇಡುವ ಅಗತ್ಯವಿತ್ತು. ಅನುತ್ತೀರ್ಣ ಆಗುವ ಸಾಧ್ಯತೆ ಇರುವ ವಿದ್ಯಾರ್ಥಿಗಳ ಮೇಲೆ ಗಮನ ಕೇಂದ್ರೀಕರಿಸಬೇಕಿತ್ತು. ಎಸ್ ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ 8ನೇ ತರಗತಿಯಿಂದಲೇ ಪ್ರಯತ್ನಿಸಬೇಕಿದೆ’ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುರೇಶ್ ಇಟ್ನಾಳ್ ಸಭೆಗೆ ಮಾಹಿತಿ ನೀಡಿದರು.**

---

# ಆಹಾರ ಇಲಾಖೆ ಅಧಿಕಾರಿಗಳ ಮೇಲಿನ ಆರೋಪ ನಿರಾಧಾರ: ಪಡಿತರ ವಿತರಕರ ಸಂಘ

• **ಉದಯವಾಹಿನಿ, ಹಾಸನ**

ಅರಸೀಕೆರೆ ತಾಲ್ಲೂಕಿನಲ್ಲಿ ಆಹಾರ ಇಲಾಖೆ ಅಧಿಕಾರಿಗಳಿಗೆ ಪ್ರತಿ ಕಾರ್ಡುದಾರರಿಂದ ಹತ್ತು ರೂಪಾಯಿ ಹಣ ಪಡೆದು ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಹಂಚಿಕೆ ಆಗುತ್ತಿದೆ ಎಂದು ಇತ್ತೀಚಿಗೆ ಆರೋಪ ಸುದ್ದಿಯಾಗಿರುವುದು ನಿರಾಧಾರವಾಗಿದೆ ಎಂದು ರಾಜ್ಯ ಪಡಿತರ ವಿತರಕರ ಸಂಘದ ಅರಸೀಕೆರೆ ತಾಲ್ಲೂಕ್ ಅಧ್ಯಕ್ಷರಾದ ವೇದಮೂರ್ತಿ ತಿಳಿಸಿದ್ದಾರೆ.



ಪಡಿತರ ವಿತರಕರ ಸಂಘದ ವತಿಯಿಂದ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದು ಅರಸೀಕೆರೆ ತಾಲ್ಲೂಕಿನಲ್ಲಿ ಪಡಿತರ ವಿತರಣೆ ವ್ಯವಸ್ಥಿತವಾಗಿ ನಡೆಯುತ್ತಿದ್ದು ಯಾವುದೇ ದೂರುಗಳು ಇರುವುದಿಲ್ಲ ಮತ್ತು ಪಡಿತರ ವಿತರಕರು ಅಂದರೆ ನ್ಯಾಯ ಬೆಲೆ ಅಂಗಡಿ ಮಾಲೀಕರು ಅಧಿಕಾರಿಗಳಿಗೆ ಯಾವುದೇ ಹಣವನ್ನು ಸಹ ನೀಡುತ್ತಿರುವುದಿಲ್ಲ ಅಲ್ಲದೆ ನ್ಯಾಯ ಬೆಲೆ ಅಂಗಡಿ ಮಾಲೀಕರು ತೂಕದಲ್ಲಿಯೂ ಸಹ ತಮ್ಮ ಪಡಿತರ ಅಂಗಡಿಗೆ ಬರಬೇಕಾದ ಆಹಾರ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ಸಗಟು ಮಳಿಗೆಯಿಂದ ಎತ್ತುವಳಿ ಮಾಡುತ್ತಿದ್ದೇವೆ.

**ಯಾವುದೇ ದೂರುಗಳು ಇರುವುದಿಲ್ಲ**

ಅಲ್ಲದೆ ನ್ಯಾಯ ಬೆಲೆ ಅಂಗಡಿ ಮಾಲೀಕರು ಮತ್ತು ಆಹಾರ ಇಲಾಖೆ ಅಧಿಕಾರಿಗಳ ಮಧ್ಯೆ ಉತ್ತಮ ಬಾಂಧವ್ಯವಿದ್ದು ಅಧಿಕಾರಿಗಳೇ ಖುದ್ದಾಗಿ ಪಡಿತರ ಪದಾರ್ಥಗಳನ್ನು ವೇ ಬ್ರಿಡ್ಜ್ ಮೂಲಕ ನ್ಯಾಯಬೆಲೆ ಅಂಗಡಿ ಮಾಲೀಕರ ಎದುರೇ ಖುದ್ದಾಗಿ ಎತ್ತುವಳಿ ಮಾಡಿಸುತ್ತಿದ್ದಾರೆ ಎಂದು ರಾಜ್ಯ ಪಡಿತರ ವಿತರಕರ ಸಂಘದ ಅರಸೀಕೆರೆ ತಾಲ್ಲೂಕು ಅಧ್ಯಕ್ಷರಾದ ವೇದಮೂರ್ತಿ ಉಪಾಧ್ಯಕ್ಷರಾದ ಶಿವರಾಜ್ ಕಾರ್ಯದರ್ಶಿಗಳಾದ ರಾಮಸ್ವಾಮಿ ಖಜಾಂಚಿಗಳು ಮತ್ತು ತಾಲ್ಲೂಕು ಬಗರು ಹುಕುಮ್ ಕಮಿಟಿ ಸದಸ್ಯರಾದ ಬಾಣಾವರ ಜಯಣ್ಣ. ಸೇರಿದಂತೆ ಪಡಿತರ ವಿತರಕರ ಸಂಘದ ನಿರ್ದೇಶಕರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.


---

# ಚಿಂಚೋಳಿಗೆ ಜಿಲ್ಲಾಧಿಕಾರಿಗಳು ಭೇಟಿ ವಿವಿಧೆಡೆ ಪರಿಶೀಲನೆ, ಪುರಸಭೆಯಲ್ಲಿ ಸಭೆ

• **ಉದಯವಾಹಿನಿ, ಚಿಂಚೋಳಿ**

ತಾಲ್ಲೂಕಿನ ವಿವಿಧೆಡೆ ಜಿಲ್ಲಾಧಿಕಾರಿ ಬಿ.ಫೌಜೀಯಾ ತರುನ್ನುಮ್ ಭೇಟಿ ನೀಡಿ ಸರ್ಕಾರದಿಂದ ನಡೆಯುತ್ತಿರುವ ಕಾಮಗಾರಿಗಳು ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ಚಳಿಬಿಡಿಸಿದಲ್ಲದೆ ನಿಗಧಿಪಡಿಸಿದ ಸಮಯದ ಒಳಗೆ ಕೆಲಸ ಮುಕ್ತಾಯಗೊಳಿಸುವಂತೆ ವಾರ್ನಿಂಗ್ ಮಾಡಿದರು.

ಜಿಲ್ಲಾಧಿಕಾರಿಗಳು ಬಿ.ಫೌಜೀಯಾ ತರುನ್ನುಮ್ ಚಿಂಚೋಳಿ ತಾಲ್ಲೂಕಿಗೆ ಆಗಮಿಸುತ್ತಿದಂತೆ ತಾಲ್ಲೂಕಿನ ಚಿಮ್ಮಾಯಿದ್ಲಾಯಿ ಗ್ರಾಮಕ್ಕೆ ಭೇಟಿಯಾಗಿ ಗ್ರಾಮದಲ್ಲಿ ಒಳಮೀಸಲಾತಿ ಸಮೀಕ್ಷೆ ಮಾಡುತ್ತಿರುವುದು ವಿಕ್ಷಿಸಿದರು,ತದನಂತರ ಪುರಸಭೆ ಕಾರ್ಯಾಲಯಕ್ಕೆ ಭೇಟಿಯಾಗಿ ಕಡತಗಳನ್ನು ಪರಿಶೀಲಿಸಿ ಪುರಸಭೆಯ ಅಧ್ಯಕ್ಷರು ಸದಸ್ಯರ ಅಧಿಕಾರಿಗಳ ಸಿಬ್ಬಂದಿ ವರ್ಗದವರ ಸಭೆ ನಡೆಸಿ ಪುರಸಭೆ ವ್ಯಾಪ್ತಿಯ ಕುಂದುಕೊರತೆಗಳನ್ನು ಮತ್ತು ಕಛೇರಿಯ ಸಮಸ್ಯೆಗಳ ಬಗ್ಗೆ ಸಮಗ್ರ ಮಾಹಿತಿ ಪಡೆದುಕೊಂಡರು. ಪುರಸಭೆಯಲ್ಲಿ ಸಭೆ ನಡೆಸಿ ತದನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು,ಈಗಾಗಲೇ ಸಭೆಯಲ್ಲಿ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸದಸ್ಯರಿಗೆ ಅವರೂ ಮಾಡುವ ಕೆಲಸ ಬಗ್ಗೆ ಜನರಿಗೆ ತೊಂದರೆ ಆಗದಂತೆ ಸಮಸ್ಯೆಗಳು ಪರಿಹರಿಸುವಂತೆ ನಿರ್ದೇಶನ ನೀಡಲಾಗಿದೆ ಎಂದರು.



☛ಉದಯವಾಹಿನಿ ಚಿತ್ರ

ಹಾಗೂ ಲ್ಯಾಂಡ್ ಆರ್ಮಿ ಇಲಾಖೆ ವತಿಯಿಂದ ಚಿಂಚೋಳಿಯಲ್ಲಿ ನಡೆಯುತ್ತಿರುವ ಕಾಮಗಾರಿ ಹಾಗೂ ಅರ್ಧಕ್ಕೆ ನಿಲ್ಲಿಸಿದ ಕಾಮಗಾರಿಗಳ ಬಗ್ಗೆ ಸಮಗ್ರ ಮಾಹಿತಿ ಪಡೆದಿದ್ದೇನೆ ವಾರದಲ್ಲಿಯೇ ಕಲಬುರ್ಗಿಯಲ್ಲಿ ಸಭೆ ಮಾಡಿ ಕಾಮಗಾರಿಗಳಿಗೆ ವೇಗ ನೀಡಲಾಗುವುದು ಎಂದರು. ಚಂದಾಪೂರದ ಒಳ ಕ್ರೀಡಾಂಗಣ ಬಗ್ಗೆ ಈಗಾಗಲೇ ಸಮಗ್ರ ತನಿಖೆ ನಡೆಸಿ ವರದಿ ನೀಡುವಂತೆ ಆದೇಶ ನೀಡಲಾಗಿದ್ದು ವರದಿ ಆಧಾರಿಸಿ ಕ್ರಮಕೈಗೊಂಡು ದುರಸ್ತಿಗೊಳಿಸಲಾಗುವುದು ಎಂದರು. ಈ ಸಂದರ್ಭದಲ್ಲಿ ಸೇಡಂ ಸಹಾಯಕ ಆಯುಕ್ತರಾದ ಪ್ರಭುರೆಡ್ಡಿ,ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಅನೇಕ ತಾಲ್ಲೂಕಾ ಅಧಿಕಾರಿಗಳು ಜನಪ್ರತಿನಿಧಿಗಳು ಇದ್ದರು.

**ಅಧಿಕಾರಿಗಳಿಗೆ ತರಾಟೆಗೆ**

**ತದನಂತರ ಸ್ಲಂಬೋರ್ಡ್ ಇಲಾಖೆ ವತಿಯಿಂದ ನಿರ್ಮಿಸುತ್ತಿರುವ ಮನೆಗಳು ಪರಿಶೀಲಿಸಿ ಸ್ಲಂಬೋರ್ಡ್ ಅಧಿಕಾರಿಗಳಾದ ಇಇ,ಎಇಇ,ಮತ್ತು ಜೆಇಗಳಿಗೆ ಚಿಂಚೋಳಿಯಲ್ಲಿ ನಿಮ್ಮ ಇಲಾಖೆಗೆ ಕೇವಲ ಮೂರು ಕಾಮಗಾರಿಗಳು ಕಟ್ಟಡ ನಿರ್ಮಾಣಕ್ಕೆ ಮತ್ತು ಬಡವರಿಗೆ ವಿತರಣೆ ಮಾಡುವ ಮನೆಗಳು ಯಾಕೆ ಹಿಂದೆಟ್ಟು ಹಾಕುತ್ತಿದ್ದೀರಿ ಎಂದು ತರಾಟೆಗೆ ತೆಗೆದುಕೊಂಡು ಡಿಸೆಂಬರ್ ತಿಂಗಳ ಒಳಗೆ ಮೂರು ಕಾಮಗಾರಿಗಳು ಮುಕ್ತಾಯಗೊಳಿಸಬೇಕು ಇಲ್ಲಾದಿದ್ದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.**

---

# ಸರ್ವತೋಮುಖ ಅಭಿವೃದ್ಧಿ ಆದ್ಯತೆ: ಸಿಎಂ ಸಿದರಾಮಯ್ಯ

• **ಉದಯವಾಹಿನಿ, ಮಂಗಳೂರು**

ಕರಾವಳಿ, ಮಲೆನಾಡು ಸಹಿತ ರಾಜ್ಯದ ಎಲ್ಲಾ ಪ್ರದೇಶಗಳ ಸರ್ವತೋಮುಖ ಅಭಿವೃದ್ಧಿ ಹಾಗೂ ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಿಸುವುದೇ ನಮ್ಮ ಸಂಕಲ್ಪ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾಡಳಿತ, ಕಂದಾಯ ಇಲಾಖೆ, ಗೃಹ ಮಂಡಳಿ ಹಾಗೂ ಸ್ಮಾರ್ಟ್ ಸಿಟಿ ವತಿಯಿಂದ 75 ಕೋ.ರೂ ವೆಚ್ಚದಲ್ಲಿ ಮಂಗಳೂರಿನ ಪಡೀಲ್‌ನಲ್ಲಿ ನಿರ್ಮಿಸಿದ ಜಿಲ್ಲಾಧಿಕಾರಿ ಕಚೇರಿ ಸಂಕೀರ್ಣ ಪ್ರಜಾಸೌಧವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯದ ಎಲ್ಲರಿಗೂ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿ ತುಂಬುವ ಜತೆಗೆ ಸರ್ವರೂ ನೆಮ್ಮದಿಯಿಂದ ಬದುಕುವ ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಿಸಬೇಕಿದೆ ಎಂದರು. ಬಾಗಲಕೋಟೆ, ದಕ್ಷಿಣ ಕನ್ನಡ, ಕೋಲಾರದಲ್ಲಿ ಈ ಬಾರಿ ಮೆಡಿಕಲ್ ಕಾಲೇಜು ಆರಂಭಕ್ಕೆ ನಿರ್ಧರಿಸಿದ್ದೇವೆ. ಈ ಪೈಕಿ ಶಾಸಕ ಅಶೋಕ್ ಕುಮಾರ್ ರೈ ಅವರ ಒತ್ತಾಯಕ್ಕಾಗಿ ಪುತ್ತೂರಿನಲ್ಲಿ 250 ಬೆಡ್‌ನ ಮೆಡಿಕಲ್ ಕಾಲೇಜು ಪ್ರಾರಂಭಿಸಲಿದ್ದೇವೆ ಎಂದರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಮಾತನಾಡಿ, ಪ್ರಜಾಸೌಧವು ಆಧುನಿಕ ಹಾಗೂ ನವಮಂಗಳೂರಿಗೆ ಹೆಬ್ಬಾಗಿಲು. ಮುಂದಿನ 50 ವರ್ಷಕ್ಕೆ ನಗರದ ಅಭಿವೃದ್ಧಿಗೆ ಇದು ದಾರಿದೀಪ. ದುಶ್ಚಟ ಮುಕ್ತ ಹಾಗೂ ದ್ವೇಷಮುಕ್ತ ಸಮಾಜ ನಿರ್ಮಾಣವಾಗಬೇಕು. ತುಳು ಭಾಷೆಗೆ 2 ನೇ ಭಾಷೆಯ ಸ್ಥಾನಮಾನ ಗೌರವ ದೊರೆಯಬೇಕು ಎಂದರು. ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ಇಲ್ಲಿಯವರೆಗೆ ದ.ಕ. ಜಿಲ್ಲೆಯಲ್ಲಿ 17 ಸಾವಿರ ಮಂದಿಗೆ ಮಾತ್ರ ಜಾಗದ ಪೋಡಿ ಮಾಡಿ ಕೊಡಲಾಗಿದೆ. ಈಗ 8 ಸಾವಿರ ಮಂದಿಗೆ ಪೋಡಿ ಭಾಗ್ಯ ನೀಡಲಾಗುತ್ತಿದೆ ಎಂದರು.



☛ಉದಯವಾಹಿನಿ ಚಿತ್ರ

**ಶಿಕ್ಷಣದಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆ ಅಗ್ರಸ್ಥಾನದಲ್ಲಿದೆ. ಬುದ್ಧಿವಂತರು, ವಿದ್ಯಾವಂತರು ಇಲ್ಲಿದ್ದಾರೆ. ಹೀಗಾಗಿ ಈ ನೆಲ ಶಾಂತಿಯ ತೋಟವಾಗಬೇಕಿದೆ. ಯಾವುದೇ ಕಾರಣಕ್ಕೂ ಕೋಮುಗಲಭೆ ನಡೆಯಬಾರದು. ಅದಕ್ಕಾಗಿ ಎಲ್ಲಾ ರಾಜಕಾರಣಿಗಳು ಶ್ರಮಿಸಬೇಕಿದೆ. ಎಲ್ಲರೂ ಭಾತೃತ್ವದಿಂದ ಸಹಬಾಳ್ವೆ ನಡೆಸುವ ಮನೋಭಾವ ಬೆಳೆಸೋಣ -ಸಿಎಂ**

---

# ರಾಜ್ಯ ಚುನಾವಣಾ ಆಯುಕ್ತರಿಂದ ಗ್ರಾಪಂ ಕಟ್ಟಡ ವೀಕ್ಷಣೆ

• **ಉದಯವಾಹಿನಿ, ಗದಗ**

ಕರ್ನಾಟಕ ರಾಜ್ಯ ಚುನಾವಣಾ ಆಯುಕ್ತರಾದ ಸಂಗ್ರೇಶಿ ಅವರು ಗದಗ ಜಿಲ್ಲೆಯ ಹುಲಕೋಟಿ ಗ್ರಾಮ ಪಂಚಾಯತಗೆ ಭೇಟಿ ನೀಡಿ ನೂತನ ಕಟ್ಟಡವನ್ನು ವೀಕ್ಷಣೆ ನಡೆಸಿದರು.

ಹುಲಕೋಟೆಯಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಾಮ ಪಂಚಾಯತ್ ಕಟ್ಟಡವು ದೇಶದಲ್ಲಿಯೇ ಮಾದರಿ ಗ್ರಾಮ ಪಂಚಾಯತ್ ಕಟ್ಟಡವಾಗಿದೆ. ಸ್ಥಳೀಯ ಆಡಳಿತ ಕೈಗೊಳ್ಳಲು ಈ ರೀತಿಯ ಮಾದರಿ ಕಟ್ಟಡ ನಿರ್ಮಾಣ ಅತ್ಯಗತ್ಯವಾಗಿದೆ. ಈ ಮಾದರಿ ಗ್ರಾಮ ಪಂಚಾಯತಿ ಕಟ್ಟಡ ನಿರ್ಮಿಸಲು ಶ್ರಮಿಸಿದ ಪ್ರತಿಯೊಬ್ಬರು ಅಭಿನಂದನೆಗೆ ಅರ್ಹರು ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಗ್ರಾಮ ಪಂಚಾಯತ್‌ನಲ್ಲಿರುವ ಪ್ರತೇಕ ಸಭಾ ಭವನ, ಅಧ್ಯಕ್ಷ, ಆಡಳಿತ ವರ್ಗದವರ ಕಾರ್ಯಲಯಗಳು ಸುಂದರವಾಗಿದ್ದು ಗ್ರಾಮ ಪಂಚಾಯತಿ ಕಟ್ಟಡದಲ್ಲಿ ಕುಳಿತರೆ ಪ್ರವಾಸಿ ಸ್ಥಳದಲ್ಲಿ ಕುಳಿತಂತಹ ಭಾವನೆ ಬರುತ್ತದೆ ಎಂದು ಸಂತೋಷ ವ್ಯಕ್ತಪಡೆಸಿದರು. ಗ್ರಾಮ ಆಡಳಿತ ಸುಭದ್ರವಾಗಿ ನಡೆದರೆ ದೇಶ ಅಭಿವೃದ್ಧಿ ಹೊಂದುವುದರಲ್ಲಿ ಯಾವ ಸಂಶಯವಿಲ್ಲ



☛ಉದಯವಾಹಿನಿ ಚಿತ್ರ

ಹಾಗಾಗಿ ಪ್ರತಿ ಗ್ರಾಮ ಪಂಚಾಯತಿಯೂ ಹುಲಕೋಟಿಯಂತಹ ಕಟ್ಟಡ ಹೊಂದಿದರೆ ಗ್ರಾಮ ಆಕರ್ಷಕವಾಗಿರುತ್ತದೆ ಎಂದು ನುಡಿದರು.

ಈ ಸುಂದರವಾದ ಪಂಚಾಯತಿ ಕಟ್ಟಡವನ್ನು ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಗಂಗಪ್ಪ ಎಂ, ಗದಗ ತಾಲ್ಲೂಕ ತಹಶೀಲ್ದಾರ ಶ್ರೀನಿವಾಸ ಕುಲಕರ್ಣಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ಗ್ರಾಮ ಪಂಚಾಯತಿ ಅಧಿಕಾರಿಳು ಸಿಬ್ಬಂದಿಗಳು ಹಾಜರಿದ್ದರು.

---


# ಬಿ-ಖಾತಾ: ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ

• **ಉದಯವಾಹಿನಿ ಕಾಗವಾಡ**

ತೋಟದಲ್ಲಿ ಕಟ್ಟಿರುವ ಮನೆಗಳ ಬಿ-ಖಾತಾ ಮಾಡಿಸಿಕೊಳ್ಳುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಅದರಿಂದಾಗುವ ಲಾಭ ಮತ್ತು ಸರ್ಕಾರದ ಯೋಜನೆಗಳ ಕುರಿತು ಅರಿವು ಮೂಡಿಸಬೇಕು ಎಂದು ಶಾಸಕ ರಾಜು ಕಾಗೆ ಅಧಿಕಾರಿಗಳಿಗೆ ಸೂಚಿಸಿದರು.

**4ನೇ ತ್ರೈಮಾಸಿಕ ಸಭೆ**

ಶನಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಜೊತೆ 4ನೇ ತ್ರೈಮಾಸಿಕ ಸಭೆಯಲ್ಲಿ ಅವರು ಮಾತನಾಡಿದರು. ’ತಾಲ್ಲೂಕಿನ ಸಾರ್ವಜನಿಕರು ತಮ್ಮ ತೋಟಗಳಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ, ಮನೆ ಕಟ್ಟಿಸಿರುತ್ತಾರೆ. ಆದರೇ ಅಲ್ಪ ಪ್ರಮಾಣದ ತೆರಿಗೆ ತಪ್ಪಿಸಲು ಬಿ-ಖಾತಾ ಮಾಡಿಸಿಕೊಂಡಿರುವುದಿಲ್ಲ. ಇದರಿಂದಾಗಿ ಅವರಿಗೆ ಸರ್ಕಾರದ ಯೋಜನೆಗಳು ದೊರೆಯುವುದಿಲ್ಲ. ಇದನ್ನು ಅಧಿಕಾರಿಗಳು ಅವರಿಗೆ ಮನವರಿಕೆ ಮಾಡಿಕೊಡಬೇಕು. ಮತ್ತು ಹೆಚ್ಚಿನ ಪ್ರಮಾಣದಲ್ಲಿ ಬಿ-ಖಾತಾ ಮಾಡಿಸಬೇಕು’ ಎಂದರು. ಇನ್ನೂ ಆರೋಗ್ಯ ಇಲಾಖೆಯ ಅಧಿಕಾರಿಗಳ ನಡವಳಿಕೆ ಕುರಿತು ಅಸಮಾಧಾನ ಹೊರಹಾಕಿದ ಅವರು,



☛ಉದಯವಾಹಿನಿ ಚಿತ್ರ

ಸಾರ್ವಜನಿಕರಿಗೆ ಸಂಬಂಧಿಕರ ಸಾವಿನ ದುಃಖದಲ್ಲಿ ಮರಣೋತ್ತರ ಪರೀಕ್ಷೆಗೆ ಕಿರಿಕಿರಿ ಮಾಡಬೇಡಿ ಎಂದು ಸೂಚನೆ ನೀಡಿದರು.

ಅರಣ್ಯ ಇಲಾಖೆಯ ಅಧಿಕಾರಿಗಳು ರಸ್ತೆ ಪಕ್ಕದಲ್ಲಿ ನೆಡುವ ಗಿಡಗಳ ಬಗ್ಗೆ ಕಾಳಜಿ ವಹಿಸಿ, ಗಿಡಗಳ ಪೋಷಣೆಯ ಕುರಿತು ಜವಾಬ್ದಾರಿ ವಹಿಸಿ ಪ್ರತಿ ವರ್ಷ ಗಿಡ ನಡೆಲಾದರು ಅದರ ಪಾಲನೆ ಆಗುವುದಿಲ್ಲಾ ಅದು ಆಗಬಾರದು ಎಂದು ಎಚ್ಚರಿಕೆ ನೀಡಿದರು.

ಮುಂಗಾರು ಹಂಗಾಮು ಆರಂಭಕ್ಕೂ ಮುನ್ನ ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರಗಳ ಕೊರತೆಯಾಗದಂತೆ ನೋಡಿಕೊಳ್ಳಬೇಕೆಂದು ಹೇಳಿದರು.

---

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಭೆ

# ಅನಧಿಕೃತ ಗ್ಯಾಸ್ ರಿಫಿಲಿಂಗ್: ಕಠಿಣ ಕ್ರಮಕ್ಕೆ ಜಿಲ್ಲಾಧಿಕಾರಿ ಸೂಚನೆ

• **ಉದಯವಾಹಿನಿ ವಿಜಯಪುರ**

ನಗರದಲ್ಲಿ ಅನಧಿಕೃತ ಗ್ಯಾಸ್ ರಿಫಿಲಿಂಗ್ ಮಾಡುವವರ ಮೇಲೆ ಪ್ರಕರಣ ದಾಖಲಿಸಿ ಕಠಿಣ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಅವರು ಸೂಚನೆ ನೀಡಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗೃಹ ಬಳಕೆ ಎಲ್ಪಿಜಿ ಗ್ಯಾಸ್ ಅನಧಿಕೃತವಾಗಿ ಆಟೋಗಳಿಗೆ, ಹೋಟೆಲ್‌ಗಳಲ್ಲಿ, ಬೀದಿಬದಿ ಆಹಾರ ತಯಾರಿಕೆ ವ್ಯಾಪಾರಸ್ಥರು ಬಳಕೆ ಮಾಡುವುದು ಅಲ್ಲದೇ ವಾಣಿಜ್ಯೋದ್ಯಮ ಸಿಲಿಂಡರ್‌ಗಳಿಗೆ ಮರುಭರ್ತಿ ಮಾಡಿ ಮಾರಾಟ ಮಾಡುತ್ತಿರುವುದನ್ನು ನಿಯಂತ್ರಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳೂವಂತೆ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅನಧಿಕೃತವಾಗಿ ಎಲ್ಪಿಜಿ ಬಳಕೆಯಿಂದ ಇತ್ತೀಚೆಗೆ ಒಂದು ಘಟನೆಯಲ್ಲಿ 22 ವರ್ಷದ ವ್ಯಕ್ತಿ ಪ್ರಾಣವನ್ನು ಕಳೆದುಕೊಂಡಿರುವ ಕುರಿತು ವಿವರಿಸಿದ ಅವರು, ಆಯಾ ಸಂಬಂಧಿಸಿದ ಇಲಾಖೆಗಳು ತಮ್ಮ ಕಾರ್ಯ ವ್ಯಾಪ್ತಿಯಲ್ಲಿನ ಅಧಿಕಾರವನ್ನು ಬಳಸಿ ನಗರದಾದ್ಯಂತ ಅಕ್ರಮವಾಗಿ ಗೃಹಬಳಕೆ ಎಲ್ಪಿಜಿ ಗ್ಯಾಸ್‌ನ್ನು ಆಟೋಗಳಿಗೆ, ಹೋಟೆಲ್‌ಗಳಲ್ಲಿ, ಬೀದಿಬದಿ ಆಹಾರ ತಯಾರಿಕೆ ವ್ಯಾಪಾರಸ್ಥರು ಬಳಕೆ ಮಾಡುವುದು ಅಲ್ಲದೇ ವಾಣಿಜ್ಯೋದ್ಯಮ (ಕಮರ್ಶಿಯಲ್) ಸಿಲಿಂಡರ್‌ಗಳಿಗೆ ಮರುಭರ್ತಿ ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡುವುದನ್ನು ನಿಯಂತ್ರಿಸಬೇಕು. ಅನಧಿಕೃತ ಕಟ್ಟಡಗಳಲ್ಲಿ ನಡೆಯುತ್ತಿರುವ ಅಕ್ರಮ ಗ್ಯಾಸ್ ರಿಫಿಲಿಂಗ್ ಸ್ಥಳಗಳನ್ನು ಪಾಲಿಕೆ ವತಿಯಿಂದ ತೆರವುಗೊಳಿಸಿ, ಇಂತಹ ಸ್ಥಳಗಳ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.



☛ಉದಯವಾಹಿನಿ ಚಿತ್ರ

**ನಗರದಲ್ಲಿ 7 ಅಧಿಕೃತ ಗ್ಯಾಸ್ ಏಜೆನ್ಸಿಗಳು ಕಾರ್ಯ ನಿರ್ವಹಿಸುತ್ತಿದ್ದು, ಏಜೆನ್ಸಿಗಳು ಕಡ್ಡಾಯವಾಗಿ ನಿಯಮಗಳನ್ನು ಪಾಲಿಸಿ ಗ್ಯಾಸ್ ವಿತರಣೆಗೆ ಕ್ರಮ ವಹಿಸಬೇಕು. ನಿಯಮಗಳನ್ನು ಪಾಲಿಸದ ಏಜೆನ್ಸಿಗಳ ಮೇಲೆಯೂ ಸಹ ಪ್ರಕರಣ ದಾಖಲಿಸಿ ಲೈಸೆನ್ಸ್ ರದ್ದತಿಗೆ ಕ್ರಮ ವಹಿಸಲಾಗುವುದು. ನಗರದಲ್ಲಿ ಯಾವ ಯಾವ ಸ್ಥಳಗಳಲ್ಲಿ ಅನಧೀಕೃತ ಗ್ಯಾಸ್ ರಿ-ಪಿಲ್ಲಿಂಗ್ ಮಾಡಲಾಗುತ್ತಿದೆ ಎಂಬುದರ ಕುರಿತು ಪರಿಶೀಲನೆ ನಡೆಸಿ, ಸಮಗ್ರ ಮಾಹಿತಿ ಒದಗಿಸಲು ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸುವಂತೆ ಅವರು ಸೂಚನೆ ನೀಡಿದರು -ಡಿಸಿ**

**ಲೈಸನ್ಸ್ ರದ್ಧತಿಗೆ ಕ್ರಮ**

ಅನಧಿಕೃತವಾಗಿ ಗೃಹಬಳಕೆ ಎಲ್ಪಿಜಿ ಗ್ಯಾಸ್‌ನ್ನು ಆಟೋಗಳಿಗೆ, ಹೋಟಲ್‌ಗಳಲ್ಲಿ, ಬೀದಿ ಬದಿ ಆಹಾರ ತಯಾರಿಕೆ ವ್ಯಾಪಾರಸ್ಥರು ಬಳಕೆ ಮಾಡುವುದು ಅಲ್ಲದೇ ವಾಣಿಜ್ಯೋದ್ಯಮ (ಕಮರ್ಶಿಯಲ್) ಸಿಲಿಂಡರ್‌ಗಳಿಗೆ ಮರುಭರ್ತಿ ಮಾಡುವುದು ಕಾನೂನಿನ ಅನ್ವಯ ಅಪರಾಧವಾಗಿದ್ದು, ಇಂತಹ ಪ್ರಕರಣ ಕಂಡು ಬಂದಲ್ಲಿ ಅಂತಹವರ ವಿರುದ್ಧ ಕಾಯ್ದೆ ಉಲ್ಲಂಘನೆ ಮೇರೆಗೆ ಈ ಸಿಲಿಂಡರ್‌ಗಳನ್ನು ಜಪ್ತಿ ಮಾಡುವುದಲ್ಲದೇ, ಅಗತ್ಯ ವಸ್ತುಗಳ ಕಾಯ್ದೆ 1955 ರ ಸೆಕ್ಷನ್ 3/7 ರ ಮೇರೆಗೆ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲು ಕ್ರಮ ವಹಿಸಲಾಗುವುದು ಎಂದು ಅವರು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಮಾತನಾಡಿ, ಅನಧಿಕೃತ ಗ್ಯಾಸ್ ರಿಪಿಲ್ಲಿಂಗ್ ತೊಡಗಿದವರ ವಿರುದ್ಧ ಕ್ರಮ ಕೈಗೊಳ್ಳಲು ಪೊಲೀಸ್ ಇಲಾಖೆಯಿಂದ ಎಲ್ಲಾ ರೀತಿಯ ಸಹಾಯ ಸಹಕಾರ ನೀಡುವುದಾಗಿ ಅವರು ತಿಳಿಸಿದರು.

ಆಹಾರ ಇಲಾಖೆ ಉಪ ನಿರ್ದೇಶಕ ವಿನಯ ಕುಮಾರ ಪಾಟೀಲ ಅವರು ಸಭೆಗೆ ಮಾಹಿತಿ ನೀಡಿ, ಪೊಲೀಸ್ ಇಲಾಖೆ ಸಹಾಯದೊಂದಿಗೆ ಹಾಗೂ ಖಚಿತ ಮಾಹಿತಿ ಮೇರೆಗೆ ನಗರದಾದ್ಯಂತ 2024ನೇ ನವೆಂಬರ್ ತಿಂಗಳಿನಿಂದ ಇಲ್ಲಿಯವರೆಗೆ ಒಟ್ಟು 19 ಪ್ರಕರಣಗಳನ್ನು ದಾಖಲಿಸಿ ಸುಮಾರು 146 ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಹೇಳಿದರು.

**ಜೂನ್ 1ರಿಂದ ಏಜೆನ್ಸಿದಾರರು ಕಟ್ಟುನಿಟ್ಟಿನ ಕ್ರಮ**

**ಅಧಿಕೃತವಾಗಿ ಕಾರ್ಯ ನಿರ್ವಹಿಸುತ್ತಿರುವ ಗ್ಯಾಸ್ ಏಜೆನ್ಸಿಗಳು ಗ್ರಾಹಕರಿಗೆ ಗ್ಯಾಸ್ ಒದಗಿಸುವಾಗ ನಿಗದಿತ ಗ್ರಾಹಕರಿಗೆ ಗ್ಯಾಸ್ ತಲುಪಿರುವ ಕುರಿತು ಖಾತರಿ ಪಡಿಸಿಕೊಳ್ಳಲು ಮೊಬೈಲ್ ಆ್ಯಪ್‌ನ ಕ್ಯೂಆರ್ ಕೋಡ್ ಬಳಸಿಕೊಂಡು ಗ್ರಾಹಕರಿಗೆ ಗ್ಯಾಸ್ ವಿತರಿಸಿದ ಕುರಿತು ನಂತರ ಖಾಲಿಯಾದ ಗ್ಯಾಸ ಟಾಕಿ ಮರಳಿ ಪಡೆಯುವಾಗ ಅದೇ ಯುನಿಕ್ ನಂಬರ್ ಇರುವುದರ ಕುರಿತು ಮನವರಿಕೆ ಮಾಡಿಕೊಳ್ಳಬೇಕು. ಹೀಗೆ ಮಾಡಿದ್ದಲ್ಲಿ ಏಜೆನ್ಸಿದಾರರು ಕೂಡ ಸುರಕ್ಷತೆ ಪಾಲಿಸಿದಂತಾಗುತ್ತದೆ. ಗ್ರಾಹಕರಿಗೆ ಗ್ಯಾಸ್ ವಿತರಿಸಲು ತಾಂತ್ರಿಕ ವ್ಯವಸ್ಥೆ ಕುರಿತು ಏಜೆನ್ಸಿಯವರಿಗೆ ತಾಂತ್ರಿಕತೆ ಕುರಿತು ಸಮಗ್ರ ಮಾಹಿತಿ ಒದಗಿಸುವಂತೆ ತಿಳಿಸಿದರು. ಬರುವ ಜೂನ್ 1 ರಿಂದ ಏಜೆನ್ಸಿದಾರರು ಈ ರೀತಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.**

---

## ಮಿನಿ ನ್ಯೂಸ್

## ಟಿಬಿ ಡ್ಯಾಂಗೆ ಹೊಸದಾಗಿ ಎಲ್ಲಾ ಗೇಟುಗಳ ಅಳವಡಿಕೆಗೆ ಮನವಿ

• **ಉದಯವಾಹಿನಿ ಬಳ್ಳಾರಿ**

ತುಂಗಭದ್ರ ಡ್ಯಾಂ ಎಲ್ಲಾ 33 ನ ಗೇಟ್‌ಗಳನ್ನು ಹೊಸದಾಗಿ ಬರುವ ಜೂಲೈ ಒಳಗಾಗಿ ಅಳವಡಿಸಬೇಕೆಂದು ಕನ್ನಡನಾಡು ರೈತ ಸಂಘ ಮುಖ್ಯ ಮಂತ್ರಿಗಳಿಗೆ ಪತ್ರ ಬರೆದು ಒತ್ತಾಯಿಸಿದೆ. ಮನವಿ ಪತ್ರವನ್ನು ಇಂದು ಜಿಲ್ಲಾಡಳಿತಕ್ಕೆ ಸಲ್ಲಿಸಿದ ಸಂಘದ ಅಧ್ಯಕ್ಷ ಮೆಣಸಿನ ಈಶ್ವರಪ್ಪ, ತುಂಗಭದ್ರ ಡ್ಯಾಂಗೆ ಗೇಟ್‌ಗಳನ್ನು ಅಳವಡಿಸಿ ಸುಮಾರು 72 ವರ್ಷಗಳು ಆಗಿದೆ. ಅವುಗಳು ಗುಣಮಟ್ಟ ಕಳೆದುಕೊಂಡಿವೆ. ಇದರಿಂದಾಗಿ ಕಳೆದ ಆಗಸ್ಟ್, 2024 ರಲ್ಲಿ 19ನೇ ಕ್ರೆಸ್ಟ್ ಗೇಟ್ ತುಂಡಾಗಿ. ಜಲಾಶಯದಲ್ಲಿ ಸಂಗ್ರಹವಾಗಿದ್ದ ನೀರು ನದಿ ಪಾಲಾಯ್ತು. ಅದಕ್ಕಾಗಿ ಈ ವರ್ಷ ಕೇವಲ 19 ನೇ ಗೇಟ್ ಒಂದನ್ನು ಹೊಸದಾಗಿ ಅಳವಡಿಸಿದರೆ ಸಾಲದು. ಉಳಿದ 32 ಗೇಟುಗಳನ್ನು ಹೊಸದಾಗಿ ಅಳವಡಿಸಬೇಕು. ಇಲ್ಲದಿದ್ದರೆ ಮತ್ಯಾವುದಾದರೂ ಗೇಟ್ ಮುರಿದರೆ ಹೇಗೆ. ಅದಕ್ಕಾಗಿ ಎಲ್ಲವನ್ನು ಹೊಸದಾಗಿ ಅಳವಡಿಸಿ ಎಂದಿದ್ದಾರೆ

## ತಿರಂಗಾ ಯಾತ್ರೆ: “ಆಪರೇಷನ್ ಸಿಂಧೂರ”ದ ಯಶಸ್ವಿಗೆ ಅಭಿನಂದನೆ

• **ಉದಯವಾಹಿನಿ ಹೊಸಪೇಟೆ**

ಆಪರೇಷನ್ ಸಿಂಧೂರವನ್ನು ಯಶಸ್ವಿಯಾಗಿ ನೆರವೇರಿಸಿದ ಭಾರತೀಯ ಸೇನೆಗೆ ಅಭಿನಂದನೆಯನ್ನು ಸಲಿಸಲು ಹೊಸಪೇಟೆ ವಾಣಿಜ್ಯೋದ್ಯಮ ಸಂಘದ ನೇತ್ರತ್ವದಲ್ಲಿ ಹೊಸಪೇಟೆಯಲ್ಲಿ ಬೃಹತ್ ವಿಜಯ ಯಾತ್ರೆ ನೆರವೇರಿಸಲಾಯಿತು.

ನಗರದ ವಡಕರಾಯ ದೇವಸ್ಥಾನದಿಂದ ಅಂಬೇಡ್ಕರ್ ವೃತ್ತದವರೆಗೆ ಜೈಕಾರ ಹಾಕುತ್ತಾ ಬಂದ ದೇಶಾಭಿಮಾನಿಗಳು ಉಗ್ರರ ನಿಗ್ರಹ ಮಾಡಿದ ಭಾರತೀಯ ಸೇನೆಯ ಸಾಹಸ ಮುಕ್ತಕಂಠದಿಂದ ಕೊಂಡಾಡಿ ಭಾರತ ಮಾತೆಯ ಸಾಹಸವನ್ನು ಹೊಗಳಿದರು. ಹೊಸಪೇಟೆ ಛೇಂಬರ್ ಆಫ್ ಕಾಮರ್ಸ್ ನೇತ್ರತ್ವದಲ್ಲಿ ಸಂಘ ಸಂಸ್ಥೆಗಳು, ಬಹುತೇಕ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು, ಶಾಲಾ ಕಾಲೇಜು ವಿದ್ಯಾರ್ಥಿಗಳು, ತಿರಂಗಾ ಧ್ವಜಗಳೊಂದಿಗೆ ಜೈಕಾರ ಮೊಳಗಿಸಿದರು.

## ಕ್ಲಿನಿಕ್‌ನಲ್ಲಿ ಯುವತಿ ಜೊತೆ ವೈದ್ಯ ಅಸಭ್ಯ ವರ್ತನೆ ಆರೋಪ: ಪ್ರಕರಣ ದಾಖಲು

• **ಉದಯವಾಹಿನಿ ಬ್ರಹ್ಮಾವರ**

ಚಿಕಿತ್ಸೆಗಾಗಿ ತಮ್ಮ ಚಿಕಿತ್ಸಾಲಯಕ್ಕೆ ಬಂದಿದ್ದ ಯುವತಿಯೊಂದಿಗೆ ಅನುಚಿತವಾಗಿ ವರ್ತಿಸಿದ ಆರೋಪದ ಮೇಲೆ ವೈದ್ಯರ ವಿರುದ್ಧ ಕೋಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂಲತಃ ಸಾಸ್ತಾನದವರಾದ ಸಂತ್ರಸ್ತೆ (20) ಪ್ರಸ್ತುತ ಮುಂಬೈನಲ್ಲಿ ವಾಸಿಸುತ್ತಿದ್ದು, ಆರೋಗ್ಯ ಸಮಸ್ಯೆಗಳಿಂದಾಗಿ ತನ್ನ ಊರಿಗೆ ಮರಳಿದ್ದರು. ವೈದ್ಯಕೀಯ ತಪಾಸಣೆಗಾಗಿ ಅವರು ಸಾಸ್ತಾನದಲ್ಲಿರುವ ಉಪಾಧ್ಯಾಯ ಚಿಕಿತ್ಸಾಲಯಕ್ಕೆ ಭೇಟಿ ನೀಡಿದ್ದರು. ಕ್ಲಿನಿಕ್ ನಡೆಸುತ್ತಿರುವ ಡಾ. ರಾಘವೇಂದ್ರ ಉಪಾಧ್ಯಾಯ ಅವರು ಸಮಾಲೋಚನೆಯ ಸಮಯದಲ್ಲಿ ಅವರೊಂದಿಗೆ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಲಾಗಿದೆ. ಮನೆಗೆ ಹಿಂದಿರುಗಿದ ನಂತರ, ಮಹಿಳೆ ತನ್ನ ಕುಟುಂಬಕ್ಕೆ ಘಟನೆಯ ಬಗ್ಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯೆಯಾಗಿ, ಸಂಜೆ ಸ್ಥಳೀಯ ನಿವಾಸಿಗಳು ಜಮಾಯಿಸಿ, ವೈದ್ಯರು ಬರುವವರೆಗೆ ಕಾಯುತ್ತಾ ಕುಳಿತು ತರಾಟೆ ತೆಗೆದುಕೊಂಡಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗಿ ಜನಸಮೂಹವು ವೈದ್ಯರ ಮೇಲೆ ಹಲ್ಲೆ ನಡೆಸಿದೆ ಎಂದು ವರದಿಯಾಗಿದೆ.

## ಕುರಾನ್ ದಹನ ಪ್ರಕರಣ: ಇನ್‌ಸ್ಪೆಕ್ಟರ್ ಅಮಾನತು

• **ಉದಯವಾಹಿನಿ ಬೆಳಗಾವಿ**

ತಾಲ್ಲೂಕಿನ ಸಂತಿಬಸ್ತ ವಾಡ ಗ್ರಾಮದಲ್ಲಿ ಕುರಾನ್ ಹಾಗೂ ಹದೀಸ್‌ಗಳನ್ನು ಸುಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಾವಿ ಗ್ರಾಮೀಣ ಠಾಣೆಯ ಇನ್‌ಸ್ಪೆಕ್ಟರ್ ಮಂಜುನಾಥ ಹಿರೇಮಠ ಅವರನ್ನು ಅಮಾನತು ಮಾಡಲಾಗಿದೆ’ ಎಂದು ನಗರ ಪೊಲೀಸ್ ಆಯುಕ್ತ ಯಡಾ ಮಾರ್ಟಿನ್ ಮಾರ್ಬನ್ಯಾಂಗ್ ತಿಳಿಸಿದ್ದಾರೆ. ಇದೇ ಗ್ರಾಮದಲ್ಲಿ ಏಪ್ರಿಲ್ 12ರಂದು ಕೂಡ ಈದ್ಗಾ ಮೈದಾನದ ಮೀನಾರ್‌ಗಳಿಗೆ ಧಕ್ಕೆ ಮಾಡಲಾಗಿತ್ತು. ಆ ಪ್ರಕರಣದಲ್ಲಿ ನಾಲ್ವರನ್ನು ಬಂಧಿಸಲಾಗಿದೆ. ಅದರಲ್ಲೂ ಇನ್‌ಸ್ಪೆಕ್ಟರ್ ಕರ್ತವ್ಯಲೋಪ ಕಂಡುಬಂದಿದ್ದರಿಂದ ಅಮಾನತು ಮಾಡಿದ್ದೇನೆ’ ಎಂದು ತಿಳಿಸಿದ್ದಾರೆ.

## ಹೊನ್ನಾಳಿಗೆ ಮೇ 19ರಂದು ಕ್ರಾಂತಿ ರಥಯಾತ್ರೆ

• **ಉದಯವಾಹಿನಿ ಹೊನ್ನಾಳಿ**

ಒಳ ಮೀಸಲಾತಿ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಹಮ್ಮಿಕೊಂಡಿರುವ ಕ್ರಾಂತಿ ರಥಯಾತ್ರೆ ಮೇ 19ರಂದು ಹೊನ್ನಾಳಿಯಲ್ಲಿ ಸಂಚರಿಸಲಿದೆ ಎಂದು ಮಾದಿಗ ದಂಡೋರ ಸಮಿತಿಯ ತಾಲ್ಲೂಕು ಘಟಕದ ಅಧ್ಯಕ್ಷ ದಿಡಗೂರು ತಮ್ಮಣ್ಣ ಹೇಳಿದರು.

ದೇವನಾಯಕನಹಳ್ಳಿಯ ಕನಕದಾಸ ವೃತ್ತದಿಂದ ಯಾತ್ರೆ ಹೊರಡಲಿದೆ. ಬೈಕ್ ಯಾಲಿಯು ಪಟ್ಟಣದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವೃತ್ತಕ್ಕೆ ಆಗಮಿಸಲಿದೆ. ಅಲ್ಲಿ ಮುಖಂಡ ಭಾಸ್ಕರ್ ರಾವ್ ಮಾತನಾಡಲಿದ್ದಾರೆ ಎಂದು ಹೇಳಿದರು.

ನಂತರ ಕ್ರಾಂತಿ ರಥಯಾತ್ರೆಯು ನ್ಯಾಮತಿ ತಾಲ್ಲೂಕಿಗೆ ತೆರಳಲಿದೆ. ಅಲ್ಲಿಂದ ಸುರಹೊನ್ನೆ, ಬೆಳಗುತ್ತಿ, ಮಲ್ಲಿಗೇನಹಳ್ಳಿ, ಕೆಂಚಿಕೊಪ್ಪ, ಸೊರಟೂರು, ಹೊನ್ನಾಳಿ, ಸಾಸ್ನೇಹಳ್ಳಿಗೆ ತೆರಳಿ ಅಲ್ಲಿಂದ ಚನ್ನಗಿರಿ ತಾಲ್ಲೂಕಿಗೆ ಬೀಳ್ಕೊಡಲಾಗುವುದು ಎಂದರು.

ಕೆಂಗಲಹಳ್ಳಿ ಪ್ರಭಾಕರ್, ತ್ಯಾಗದಕಟ್ಟೆ ಹನುಮಂತಪ್ಪ, ಕುರುವ ಮಂಜುನಾಥ್, ರಾಜು, ಮಾರಿಕೊಪ್ಪ ಮಂಜು ಉಪಸ್ಥಿತರಿದ್ದರು.

## ಸ್ವಯಂ ಉದ್ಯೋಗ ತರಬೇತಿಗೆ ಅರ್ಜಿ

• **ಉದಯವಾಹಿನಿ ಕೊಪ್ಪಳ**

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹಾಗೂ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಿಂದ ಜಿಲ್ಲೆಯ ಗ್ರಾಮೀಣ ಭಾಗದ ಆಸಕ್ತರಿಗೆ ಸ್ವಯಂ ಉದ್ಯೋಗ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಸಂಸ್ಥೆಯಿಂದ 13 ದಿನಗಳ ಕೃಷಿ ಉದ್ಯಮಿ, 30 ದಿನಗಳ ದ್ವಿಚಕ್ರ ವಾಹನ ರಿಪೇರಿ ತರಬೇತಿ ಮತ್ತು 30 ದಿನಗಳ ಫೋಟೋಗ್ರಫಿ ಹಾಗೂ ವಿಡಿಯೋಗ್ರಫಿ ತರಬೇತಿ ನೀಡಲಾಗುತ್ತಿದ್ದು ಮೇ 24ರಂದು ಸಂದರ್ಶನ ನಡೆಯಲಿದೆ. 26ರಿಂದ ತರಬೇತಿ ಪ್ರಾರಂಭವಾಗಲಿವೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆ ಉಚಿತವಾಗಿ ಇರಲಿದೆ.

ಅರ್ಜಿದಾರರು 18ರಿಂದ 45 ವರ್ಷ ಒಳಗಿನವರಾಗಿರಬೇಕು. ಕನಿಷ್ಠ ಎಂಟನೇ ತರಗತಿ ಉತ್ತೀರ್ಣರಾಗಿರಬೇಕು. ಅರ್ಜಿಯನ್ನು ನಿರ್ದೇಶಕರು, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ, ಜಿಲ್ಲಾ ಕೈಗಾರಿಕಾ ಕೇಂದ್ರ ಆವರಣ, ಅಶೋಕ ಸರ್ಕಲ್ ಹತ್ತಿರ, ಕೊಪ್ಪಳ ವಿಳಾಸಕ್ಕೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 08539 231038, 2: 9483618178 0.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಸಾಯಂಕಾಲ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ** ಹಣ ನಿಮ್ಮ ಕೈಗಳ ಮೂಲಕ ಸುಲಭವಾಗಿ ಜಾರಿಹೋದರೂ – ನಿಮ್ಮ ಅದೃಷ್ಟದ ತಾರೆಗಳು ನಿಮಗೆ ಹಣಕಾಸು ಸುಲಭವಾಗಿ ದೊರಕುವಂತೆ ಮಾಡುತ್ತದೆ.

**ವೃಷಭ** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ.

**ಮಿಥುನ** ಧ್ಯಾನ ಮತ್ತು ಯೋಗವನ್ನು ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳಿಗಾಗಿ ಆಚರಿಸಬೇಕು. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

**ಕರ್ಕಾಟಕ** ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

**ಸಿಂಹ** ಸ್ವತಃ ಔಷಧಿ ತೆಗೆದುಕೊಳ್ಳುವುದು ಔಷಧ ಅವಲಂಬನೆಯನ್ನು ಉಂಟುಮಾಡಬಹುದು. ಯಾವುದೇ ಔಷಧ ತೆಗೆದುಕೊಳ್ಳುವ ಮೊದಲು ವೈದ್ಯರ ಸಲಹೆ ಪಡೆಯಿರಿ.

**ಕನ್ಯಾ** ನೀವು ನಿಮ್ಮ ಮಕ್ಕಳ ಮೇಲೆ ಹೆಮ್ಮೆಯನ್ನು ಅನುಭವಿಸುವಿರಿ. ಸ್ನೇಹಿತರು ಹೆಚ್ಚು ಸಮಯ ಕೇಳಿದರೂ ಈ ಜಗತ್ತಿನ ಬಾಗಿಲುಗಳನ್ನು ಮುಚ್ಚಿ ನಿಮಗೆ ನೀವೇ ಒಳ್ಳೆಯ ವೈಭೋಗ ನೀಡಿಕೊಳ್ಳುವುದೊಳ್ಳೆಯದು.

**ತುಲಾ** ನಿಮ್ಮ ಸಭ್ಯ ನಡವಳಿಕೆ ಮೆಚ್ಚುಗೆ ಪಡೆಯುತ್ತದೆ. ಅನೇಕ ಜನರು ನಿಮ್ಮನ್ನು ಹೊಗಳುತ್ತಾರೆ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು.

**ವೃಶ್ಚಿಕ** ನಿಮ್ಮ ಪ್ರೇಮಮಯ ವೀಕ್ಷಣೆಗಳನ್ನು ಅಭಿವ್ಯಕ್ತಿಗೊಳಿಸಿ. ನಿಮ್ಮ ಮನೆಯ ಯಾರೋ ನಿಕಟವಿರುವ ವ್ಯಕ್ತಿ ನಿಮ್ಮೊಂದಿಗೆ ಸಮಯವನ್ನು ಕಳೆಯಲು ಹೇಳುತ್ತಾರೆ ಆದರೆ ನಿಮ್ಮ ಹತ್ತಿರ ಅವರಿಗಾಗಿ ಸಮಯ ಉಳಿದಿರುವುದಿಲ್ಲ.

**ಧನಸ್ಸು** ನಿಮ್ಮ ಧೈರ್ಯ ಪ್ರೀತಿಯನ್ನು ಗೆಲ್ಲಬಹುದು. ಉಚಿತ ಸಮಯವನ್ನು ಪೂರ್ತಿಯಾಗಿ ಆನಂದಿಸಲು ನೀವು ಜನರಿಂದ ದೂರ ಹೋಗಿ ನೀವು ಇಷ್ಟಪಡುವ ಕೆಲಸವನ್ನು ಮಾಡಬೇಕು.

**ಮಕರ** ಉತ್ತಮ ಆರೋಗ್ಯ ಏನಾದರೂ ಅಸಾಮಾನ್ಯವಾಗಿದ್ದನ್ನು ಸಾಧಿಸಲು ಸಾಧ್ಯವಾಗಿಸುವ ಒಂದು ವಿಶೇಷ ದಿನ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು.

**ಕುಂಭ** ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ಶಕ್ತಿ ವ್ಯಯಿಸಿ. ಮನೆಯ ಸಣ್ಣ ವಸ್ತುಗಳ ಮೇಲೆ ಸಾಕಷ್ಟು ಹಣ ಹಾಳಾಗಬಹುದು.

**ಮೀನ** ತುಂಬಾ ಚಿಂತೆ ಮಾನಸಿಕ ಶಾಂತಿಗೆ ಭಂಗ ತರಬಹುದು. ಆತಂಕ, ಉದ್ವೇಗದ ಪ್ರತೀ ತುಣುಕೂ ದೇಹದ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ ಇದನ್ನು ತಡೆಯಿರಿ.

• ಡೆಂಗ್ಯೂ ಜ್ವರದ ಅಪಾಯಗಳು ಮತ್ತು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು

# ಡೆಂಗ್ಯೂ ಜ್ವರದ ಬಗ್ಗೆ ಭಯ ಬೇಡ ಎಚ್ಚರವಿರಲಿ: ಉಪ ಮೇಯರ್

• ಉದಯವಾಹಿನಿ ಬಳ್ಳಾರಿ

ಡೆಂಗ್ಯೂ ಜ್ವರದ ಅಪಾಯಗಳು ಮತ್ತು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ರೋಗ ಲಕ್ಷಣ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ದೇಶದಲ್ಲಿ ಪ್ರತಿ ವರ್ಷ ಮೇ 16 ರಂದು ರಾಷ್ಟ್ರೀಯ ಡೆಂಗ್ಯೂ ದಿನ ಆಚರಿಸಲಾಗುತ್ತದೆ ಎಂದು ಮಹಾನಗರ ಪಾಲಿಕೆಯ ಉಪ ಮಹಾಪೌರರಾದ ಡಿ.ಸುಕುಂ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಕಚೇರಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ "ಡೆಂಗ್ಯೂ ಸೋಲಿಸಲು ಹೆಜ್ಜೆಗಳು,ಪರಿಶೀಲಿಸಿ, ಸ್ವಚ್ಚಗೊಳಿಸಿ, ಮುಚ್ಚಿಡಿ" ಎಂಬ ಘೋಷವಾಕ್ಯದಡಿ "ರಾಷ್ಟ್ರೀಯ ಡೆಂಗ್ಯೂ" ದಿನಾಚರಣೆ ಅಂಗವಾಗಿ ಮಹಾನಗರ ಪಾಲಿಕೆಯ ಆರೋಗ್ಯ ನಿರೀಕ್ಷಣಾಧಿಕಾರಿಗಳು, ಮೇಲ್ವಿಚಾರಕರು ಹಾಗೂ ಪೌರ ಕಾರ್ಮಿಕರಿಗೆ ಜಿಲ್ಲಾ ಮಟ್ಟದ ಪುನರ್ ಮನನ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಡೆಂಗ್ಯೂ ಜ್ವರದ ಬಗ್ಗೆ ಭಯ ಬೇಡ ಆದರೆ ಎಚ್ಚರವಿರಲಿ. ಎಲ್ಲರೂ ನಮ್ಮ ಸುತ್ತ ಮುತ್ತಲಿನ


ಉದಯವಾಹಿನಿ ಚಿತ್ರ

ಪ್ರದೇಶವನ್ನು ಸ್ವಚ್ಛವಾಗಿಟ್ಟುಕೊಂಡು ಡೆಂಗ್ಯೂ ರೋಗ ಹರಡದಂತೆ ತಡೆಯೋಣ ಎಂದರು.

ಜಿಲ್ಲಾ ಶಸ್ತ್ರ ಚಿಕಿತ್ಸರಾದ ಡಾ.ಎನ್.ಬಸರೆಡ್ಡಿ ಮಾತನಾಡಿ, ಡೆಂಗ್ಯೂ ಎಂಬುದು ಸೋಂಕಿತ ಈಡಿಸ್ ಈಜಿಪ್ಟಿ ಸೊಳ್ಳೆಯ ಕಡಿತದಿಂದ ಹರಡುವ ವೈರಸ್ ಆಗಿದ್ದು, ಇದನ್ನು ಸಾಮಾನ್ಯವಾಗಿ ಡೆಂಗ್ಯೂ ಸೊಳ್ಳೆ ಎಂದು ಕರೆಯಲಾಗುತ್ತದೆ.

ಈ ರೋಗವು ಸೊಳ್ಳೆಗಳ ಸಂತಾನೋತ್ಪತ್ತಿ ಪರಿಸ್ಥಿತಿಗಳು ಸೂಕ್ತವಾಗಿರುವ ಮಳೆಗಾಲ ಮತ್ತು ನಂತರ ಹೆಚ್ಚಾಗುತ್ತದೆ. ಡೆಂಗ್ಯೂ ತಡೆಗಟ್ಟುವ ಕಾರ್ಯಕ್ರಮಗಳಲ್ಲಿ ಸಮುದಾಯ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು. ಚಿಕಿತ್ಸೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ನಿಖರವಾದ ಮಾಹಿತಿಯನ್ನು ಹರಡುವುದು.

ಸರ್ಕಾರದ ಉಪಕ್ರಮಗಳು ಮತ್ತು ಆರೋಗ್ಯ ಸೇವೆಯ ಲಭ್ಯತೆಯನ್ನು ಎತ್ತಿತೋರಿಸು ವುದು. ಡೆಂಗ್ಯೂ ಋತುವಿಗೆ ಮುನ್ನ ಮುಂಜಾಗ್ರತಾ ಕ್ರಮಕೈಗೊಳ್ಳಲು ಸ್ಥಳೀಯ ಅಧಿಕಾರಿಗಳನ್ನು ಸಜ್ಜುಗೊಳಿಸುವುದು ಎಂದು ತಿಳಿಸಿದರು.

**ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ**

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಆರ್.ಅಬ್ದುಲ್ಲಾ ಅವರು ಪ್ರಾಸ್ತವಿಕವಾಗಿ ಮಾತನಾಡಿ, ರಾಜ್ಯಾದ್ಯಂತ ಡೆಂಗ್ಯೂ ಈಗ ಸ್ಥಳೀಯ ರೋಗವಾಗಿರುವುದರಿಂದ ಹೆಚ್ಚಿನ ಜನರು ಡೆಂಗ್ಯು ಸೋಂಕಿನ ಅಪಾಯದಲ್ಲಿದ್ದಾರೆ.

ರಾಷ್ಟ್ರೀಯ ಡೆಂಗ್ಯೂ ದಿನ-2025 ನ್ನು ಡೆಂಗ್ಯೂ ಸೋಲಿಸುವ ಹೆಜ್ಜೆಗಳು, ಪರಿಶೀಲಿಸಿ, ಸ್ವಚ್ಛಗೊಳಿಸಿ, ಮುಚ್ಚಿಡಿ ಎಂಬ ಘೋಷಾವಾಕ್ಯದೊಂದಿಗೆ ಪ್ರಸ್ತುತ ಜಿಲ್ಲೆಯಲ್ಲಿ ಬೀಳುತ್ತಿರುವ ಬೇಸಿಗೆ ಮಳೆ ಹಾಗೂ ಮುಂಬರುವ ಮಳೆಗಾಲದ ದಿನಗಳಲ್ಲಿ ಡೆಂಗಿ ಜ್ವರ ಹರಡುವ ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣಗಳು ಹೆಚ್ಚಾಗಿದ್ದು, ಡೆಂಗ್ಯೂ ಜ್ವರ ಪ್ರಕರಣವು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಪರಿಣಮಿಸುವ ಸಾಧ್ಯತೆ ಅಧಿಕವಾಗಿರುವ ಹಿನ್ನಲೆಯಲ್ಲಿ ಡೆಂಗ್ಯೂ ನಿಯಂತ್ರಣದ ಸಂಬಂಧ ಈಡೀಸ್ ಲಾರ್ವ ನಿರ್ಮೂಲನೆಯನ್ನು ತೀವ್ರಗೊಳಿಸುವುದು ಪ್ರಮುಖ ಗುರಿಯಾಗಿದೆ.

> ಜಿಲ್ಲೆಯಾದ್ಯಂತ ಡೆಂಗ್ಯೂ ಜ್ವರ ಹರಡುವುದನ್ನು ಎದುರಿಸಲು ಮತ್ತು ನಿಯಂತ್ರಿಸಲು ಆರೋಗ್ಯ ಇಲಾಖೆಯು ಮಾಡುತ್ತಿರುವ ನಿರಂತರ ಪ್ರಯತ್ನಗಳ ಭಾಗವಾಗಿ ಪ್ರತಿ ವರ್ಷ ಮೇ 16 ರಂದು ರಾಷ್ಟ್ರಿಯ ಡೆಂಗ್ಯೂ ದಿನವನ್ನು ಆಚರಿಸಲಾಗುತ್ತದೆ. ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾ ಕಛೇರಿಯ ವಾರ್ಷಿಕವಾಗಿ ಆಯೋಜಿಸುವ ಈ ದಿನವು ಡೆಂಗ್ಯೂ (ಸೊಳ್ಳೆಯಿಂದ ಹರಡುವ ವೈರಸ್) ಬಗ್ಗೆ ಜಾಗೃತಿ ಮೂಡಿಸಲು ಮತ್ತು ತಡೆಗಟ್ಟುವಿಕೆ, ಶಿಕ್ಷಣ ಮತ್ತು ಆರಂಭಿಕ ಹಸ್ತಕ್ಷೇಪ ತಂತ್ರಗಳ ಮೂಲಕ ಸಾಮೂಹಿಕ ಕ್ರಮವನ್ನು ಉತ್ತೇಜಿಸಲು ಸಮರ್ಪಿಸಲಾಗಿದೆ ಹಾಗೂ ಜಿಲ್ಲೆಯಲ್ಲಿ ಯಾವುದೇ ಡೆಂಗಿ ಮರಣ ಪ್ರಕರಣಗಳು ವರದಿಯಾಗದಂತೆ ಸಮಯೋಚಿತರಾಗಿ ಕಾರ್ಯನಿರ್ವಹಿಸಲು ಹಾಗೂ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ -ಡಾ.ವೈ.ರಮೇಶ್ ಬಾಬು,
> ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ

**ಡೆಂಗ್ಯೂ ಜ್ವರದ ಲಕ್ಷಣಗಳು**

ತೀವ್ರಜ್ವರ, ತೀವ್ರ ತಲೆನೋವು, ಕಣ್ಣುಗಳ ಹಿಂದೆ ನೋವು, ಸ್ನಾಯು ಮತ್ತು ಕೀಲುನೋವು, ವಾಕರಿಕೆ ಮತ್ತು ವಾಂತಿ, ಚರ್ಮದ ದದ್ದು, ಸೌಮ್ಯ ರಕ್ತಸ್ರಾವ (ಉದಾ: ಮೂಗಿನ ರಕ್ತಸ್ರಾವ, ಒಸಡುಗಳಿಂದ ರಕ್ತಸ್ರಾವ). ಹೆಚ್ಚಿನ ಡೆಂಗ್ಯೂ ಪ್ರಕರಣಗಳು ಸೌಮ್ಯವಾಗಿರುತ್ತವೆ. ಆದರೆ ಕೆಲವು ಸಂದರ್ಭಗಳಲ್ಲಿ ಇದು ತೀವ್ರವಾದ ಡೆಂಗ್ಯೂ ಆಗಿ ಮುಂದುವರಿಯಬಹುದು. ಇದನ್ನು ಡೆಂಗ್ಯೂ ಹೆಮರಾಜಿಕ್ಜ್ವರ ಎಂದೂ ಕರೆಯುತ್ತಾರೆ. ಇದು ಆಂತರಿಕ ರಕ್ತಸ್ರಾವ, ಅಂಗಾಂಗ ವೈಫಲ್ಯ ಮತ್ತು ಸಾವಿಗೆ ಕಾರಣವಾಗಬಹುದೆಂದು ತಿಳಿಸಿದರು.

## ಸಾಂಕ್ರಾಮಿಕ ರೋಗಗಳ ನಿಯಂತ್ರಣಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ

• ಉದಯವಾಹಿನಿ ಚಿತ್ರದುರ್ಗ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರಾಷ್ಟೀಯ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ವಿಭಾಗ, ಬೆಳಗಟ್ಟ ಆರೋಗ್ಯ ಕೇಂದ್ರ, ಮತ್ತು ಸುರಕ್ಷಾ ನರ್ಸಿಂಗ್ ಕಾಲೇಜ್ ಇವರ ಸಹಯೋಗದೊಂದಿಗೆ ರಾಷ್ಟೀಯ ಡೆಂಗ್ಯೂ ದಿನ- 2025, ಬಗ್ಗೆ ಮಾಹಿತಿ ಶಿಕ್ಷಣ ಮತ್ತು ಜಾಗೃತಿ ಜಾಥ ಕಾರ್ಯಕ್ರಮಕ್ಕೆ ಆರೋಗ್ಯ ನೀರಿಕ್ಷಣಾಧಿಕಾರಿ ಮಹೇಶ ಡಿ ಚಾಲನೆ ನೀಡಿ ಮಾತನಾಡುತ್ತ ಮಳೆಗಾಲ ಪ್ರಾರಂಭವಾಗುತ್ತಿದ್ದು, ಮನೆಯ ಸುತ್ತಮುತ್ತ ನೀರು ನಿಲ್ಲದಂತೆ, ಪರಿಸರ ಸ್ವಚತೆಯಿಂದ, ಸೊಳ್ಳೆಗಳ ಉತ್ಪತಿ ತಾಣಗಳ ನಾಶದಿಂದ ಡೆಂಗ್ಯೂದತಂಹ ಮಾರಕ ಕೀಟಜನ್ಯ ಸಾಂಕ್ರಾಮಿಕ ರೋಗಗಳ ನಿಯಂತ್ರಣ ಮಾಡಬಹುದು, ಇದಕ್ಕೆ ಜನ ಸಮುದಾಯದ ಸಹಕಾರದ ಜೊತೆಗೆ ಮುಂಜಾಗ್ರತ ಕ್ರಮಗಳನ್ನು ಅನುಸರಿಸುವುದು ಮುಖ್ಯ. ಪ್ರತಿ ವರ್ಷದಂತೆ ಈ ವರ್ಷವೂ ಸಹ ಸಾರ್ವಜನಿಕರ ಜಾಗೃತಿಗಾಗಿ ರಾಷ್ಟ್ರೀಯ ಡೆಂಗಿ ದಿನ- 2025 ಆಚರಿಸಲಾಗುತ್ತಿದೆ.

ಕಳೆದ ವರ್ಷ 2024ರಲ್ಲಿ ಬೆಳಗಟ್ಟ ಆರೋಗ್ಯ ಕೇಂದ್ರ ವ್ಯಾಪಿಯ ಗ್ರಾಮಗಳಲ್ಲಿ 9 ಡೆಂಗ್ಯೂ ಪ್ರಕರಣಗಳು ಕಂಡು ಬಂದಿದ್ದು, ಈ ವರ್ಷ ಮೇ ತಿಂಗಳ 15ರ


ಉದಯವಾಹಿನಿ ಚಿತ್ರ

**ಜಾಗೃತಿ ಜಾಥಾ ಕಾರ್ಯಕ್ರಮ**

ತನಕ ಯಾವುದೇ ಪ್ರಕರಣಗಳು ಕಂಡು ಬಂದಿಲ್ಲ, ಸಂಖ್ಯೆಯಲ್ಲಿ ಇಳಿಮುಖವಾಗಿದೆ ಹಾಗೆಂದು, ಎಚ್ಚರ ತಪ್ಪದೆ ಮುಂಜಾಗ್ರತಾ ಕ್ರಮ ಜಾರಿಯಲ್ಲಿರಲಿ. ನಮ್ಮ ಇಲಾಖೆಯಾಗಲಿ ಮತ್ತು ಸಾರ್ವಜನಿಕರಾಗಲಿ ನಿರ್ಲಕ್ಷ ತೋರುವುದು ಬೇಡ ಎಂದರು.

ಆರೋಗ್ಯ ಸಿಬ್ಬಂದಿಗಳು, ಅಶಾ ಕಾರ್ಯಕರ್ತೆಯರು, ಸುರಕ್ಷಾ ಕಾಲೇಜಿನ ನರ್ಸಿಂಗ್ ವಿದ್ಯಾರ್ಥಿಗಳು, ಜಾಥದಲ್ಲಿ ಡೆಂಗ್ಯೂ ನಿಯಂತ್ರಣ ನಮ್ಮೆಲ್ಲರ ಜವಾಬ್ದಾರಿ ಎಂಬ ಘೋಷಣೆಯನ್ನು ಕೂಗಿದರು.

ಕಾರ್ಯಕ್ರಮದಲ್ಲಿ ಆರೋಗ್ಯ ನೀರಿಕ್ಷಣಾಧಿಕಾರಿಗಳಾದ ಮಹೇಶ ಡಿ, ನಾಗೇಶ, ಪ್ರಾಥಮಿಕ ಆರೋಗ್ಯ ಸುರಕ್ಷಣಾಧಿಕಾರಿಗಳಾದ ಶುಭಶ್ರೀ, ಟಿ. ನಿರ್ಮಲ, ಸಮುದಾಯ ಆರೋಗ್ಯಧಿಕಾರಿಗಳಾದ, ಮಂಜುಶ್ರೀ, ಭಾರತಿ, ಸುರಕ್ಷಾ ನರ್ಸಿಂಗ್ ಕಾಲೇಜ್ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

> ಆರೋಗ್ಯ ಕೇಂದ್ರ ವ್ಯಾಪಿಯ ಗ್ರಾಮೀಣ ಪ್ರದೇಶಗಳಲ್ಲಿ ಅಶಾ ಕಾರ್ಯಕರ್ತೆಯರಿಂದ ತಿಂಗಳಲ್ಲಿ ಎರಡು ಬಾರಿ ಲಾರ್ವ ಸಮೀಕ್ಷೆ ಕೈಗೊಳ್ಳಲಾಗುತ್ತಿದೆ, ಗ್ರಾಮ ಆರೋಗ್ಯ ನೈರ್ಮಲ್ಯ ಮತ್ತು ಪೌಷ್ಟಿಕಾಹಾರ ಸಮಿತಿಯ ಸಭೆಗಳಲ್ಲಿ ಆರೋಗ್ಯ ಮಾಹಿತಿ ಶಿಕ್ಷಣವನ್ನು ನೀಡಲಾಗುತ್ತಿದೆ. ಗುಂಪು ಸಭೆಗಳು, ತಾಯಂದಿರ ಸಭೆಗಳನ್ನು ನಡೆಸಿ ಕರಪತ್ರಗಳನ್ನು ವಿತರಿಸಿ, ಡೆಂಗ್ಯೂ ಜಾಗೃತಿಯನ್ನು ಮೂಡಿಸಲಾಗುತ್ತಿದೆ ಮನೆಮನೆಗಳಲ್ಲಿ ನೀರಿನ ಸಂಗ್ರಹ ಪರಿಕಾರಗಳ, ಸ್ವಚ್ಛತೆಯ ಬಗ್ಗೆ ಒಣ ದಿನಗಳನ್ನು ಆಚರಿಸುವ ಬಗ್ಗೆ, ಮುಂಜಾನೆ ಮತ್ತು ಮುಸ್ಸಂಜೆಯಲ್ಲಿ ಸೊಳ್ಳೆ ಬತ್ತಿಗಳನ್ನು ಉರಿಸುವ ಕುರಿತು, ಮನೆಯ ಕಿಟಕಿಗಳಿಗೆ ಜಾಲರ ಅಳವಡಿಸುವ, ಸೊಳ್ಳೆ ಪರದೆ ಉಪಯೋಗಿಸುವ ಬಗ್ಗೆ, ಘನ ತ್ಯಾಜ್ಯ ವಸ್ತುಗಳನ್ನು ಸರಿಯಾದ ಕ್ರಮದಲ್ಲಿ ಮತ್ತು ಸ್ಥಳಗಳಲ್ಲಿ ವಿಲೇವಾರಿ ಮಾಡುವ ಬಗ್ಗೆ ಮಾಹಿತಿ ಶಿಕ್ಷಣ ನೀಡಲಾಗುತ್ತಿದೆ -ಮಹೇಶ ಡಿ
> ಆರೋಗ್ಯ ನೀರಿಕ್ಷಣಾಧಿಕಾರಿ

## ಆ್ಯಪ್ ಮೂಲಕ ಸಮಸ್ಯೆಗಳನ್ನು ಇತ್ಯಾರ್ಥ ಮಾಡಿಕೊಳ್ಳಿ: ಬಸವರಾಜ ಒಡೆಯರ್

• ಉದಯವಾಹಿನಿ ಸಿರುಗುಪ್ಪ

ಸ್ಥಳೀಯ ಸ್ವಸಹಾಯ ಸಂಘದ ಸದಸ್ಯರ ಸಮಸ್ಯೆಗಳಿಗೆ ಶೀಘ್ರವಾಗಿ ಸ್ಪಂದಿಸುವ ಉದ್ದೇಶದಿಂದ ಕಾರ್ಯಕರ್ತೆಗೆ ನೂತನ ಆಪ್ ಬಿಡುಗಡೆಗೊಳಿಸಲಾಗಿದೆ ಇನ್ನೂ ಮುಂದೆ ಪ್ರತಿಯೊಬ್ಬರು ಇದರ ಮೂಲಕ ತಮ್ಮ ಸಮಸ್ಯೆಗಳನ್ನು ಇತ್ಯಾರ್ಥ ಮಾಡಿಕೊಳ್ಳಲು ನೇರವಾಗುತ್ತದೆ ಎಂದು ಜಿಲ್ಲಾ ಯೋಜನಾ ನಿರ್ವಾಹಣಾಧಿಕಾರಿ ಬಸವರಾಜ ಒಡೆಯರ್ ಹೇಳಿದರು. ನಗರದ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಕಚೇರಿಯಲ್ಲಿ ತಾಲ್ಲೂಕಿನ ಸೇವಾಪ್ರತಿನಿಧಿಗಳಿಗೆ ವಿಶೇಷ ಅಭಿಯಾನದ ಕಾರ್ಯ ಹಾಗೂ ಪ್ರಗತಿ ರಕ್ಷಾ ಕಾರ್ಯಕ್ರಮದ ತರಬೇತಿಯಲ್ಲಿ ಮಾತನಾಡಿದರು.

## ಜಾನುವಾರು ತ್ಯಾಜ್ಯ ಸಾಗಿಸುತ್ತಿದ್ದ ವ್ಯಕ್ತಿ ಬಂಧನ

• ಉದಯವಾಹಿನಿ ಕಲಬುರಗಿ

ಪಿಕಪ್ ವಾಹನದಲ್ಲಿ ಅಕ್ರಮವಾಗಿ ಜಾನುವಾರು ತ್ಯಾಜ್ಯ ಸಾಗಿಸಲಾಗುತ್ತಿದೆ ಎಂಬ ಮಾಹಿತಿ ಮೇಲೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಪಿಐ ಸುಶೀಲಕುಮಾರ, ಸಿಬ್ಬಂದಿಗಳಾದ ಈರಣ್ಣ, ಜೈಭೀಮ ಅವರು ದಾಳಿ ನಡೆಸಿ ವ್ಯಕ್ತಿಯೊಬ್ಬನನ್ನು ಬಂಧಿಸಿ ಪಿಕಪ್ ವಾಹನದಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ 2 ರಿಂದ 3 ಟನ್ ಜಾನುವಾರು ತ್ಯಾಜ್ಯ ಜಪ್ತಿ ಮಾಡಿದ್ದಾರೆ. ಗರಿಬ್ ನವಾಜ್ ಕಾಲೋನಿಯ ತೌಫಿಕ್ ತಂದೆ ಯುಸೂಫ್ ಅಲಿ (31) ಎಂಬಾತನನ್ನು ಬಂಧಿಸಿ ಆತನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಈತ ನೂರಾನಿ ಮಹೋಲ್ಲಾದಲ್ಲಿರುವ ಜಬ್ಬಾರ್ ಖುರೇಶಿ ಅವರ ಖುಲ್ಲಾ ಪ್ಲಾಟ್‌ನಲ್ಲಿರುವ ಜಾನುವಾರುಗಳ ತ್ಯಾಜ್ಯವನ್ನು ತುಂಬಿಕೊಂಡು ಯಾದಗಿರಿ ಜಿಲ್ಲೆಯ ಕಂಪನಿಗೆ ಸಾಗಾಣಿಕೆ ಮಾಡುತ್ತಿದ್ದ ಎಂದು ತಿಳಿದು ಬಂದಿದೆ.

## ಬಾಯ್ತೆರೆದ ರಾಜಕಾಲುವೆ ಎಲ್ಲೆಡೆ ದುರ್ನಾತ


ಉದಯವಾಹಿನಿ ಚಿತ್ರ

• ಉದಯವಾಹಿನಿ ಲಕ್ಷ್ಮೇಶ್ವರ

ಪಟ್ಟಣದ ಹೊಸ ಬಸ್ ನಿಲ್ದಾಣದ ಎದುರಿಗೆ ಇರುವ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿ ಯೋಜನೆ ಅಡಿ ನಿರ್ಮಿಸಿದ ವಾಣಿಜ್ಯ ಮಳಿಗೆಗಳ ಮುಂಭಾಗದಲ್ಲಿನ ರಾಜ ಕಾಲುವೆಯನ್ನು ಪುರಸಭೆಯವರು ಬಾಯಿ ತೆರೆದು ತಿಂಗಳು ಗತಿಸಿದರು ಅದನ್ನು ಮುಚ್ಚದಿರುವುದರಿಂದ ದುರ್ನಾತ ಬೀರುತ್ತಿದ್ದು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಪಟ್ಟಣದ ಸವಣೂರು ಕ್ರಾಸಿನಿಂದ ಆರಂಭವಾಗುವ ಈ ರಾಜಕಾಲುವೆಯಲ್ಲಿ ಅಪಾರ ಪ್ರಮಾಣದ ನೀರು ಹರಿದು ಬರುವುದರಿಂದ ಈ ಕಾಲುವೆಯ ಮೂಲಕವೇ ಹಾದು ಹೋಗುತ್ತದೆ ಈಗ ಅದನ್ನು ಬಾಯಿ ತೆರೆದಿರುವುದರಿಂದ ಇತ್ತೀಚೆಗಷ್ಟೇ ಸುರಿದ ಭಾರಿ ಮಳೆಯಿಂದ ಕೊಚ್ಚೆ ನೀರು ಬಸ್ ನಿಲ್ದಾಣದಲ್ಲಿ ಪ್ರವೇಶಿಸಿ ಇಡೀ ಬಸ್ ನಿಲ್ದಾಣ ದುರ್ನಾತ ಬೀರುತ್ತಿದೆ.ಆದರೆ ಪುರಸಭೆಯವರು ಇದನ್ನು ಮುಚ್ಚದಿರುವುದರಿಂದ ಇಡೀ ಪ್ರದೇಶ ಗಬ್ಬು ನಾರುತಿದ್ದು ಸಾರ್ವಜನಿಕರ ಕೆಂಗಣ್ಣಿಗೆ ಮತ್ತು ಆಕ್ರೋಶಕ್ಕೆ ಕಾರಣವಾಗಿದೆ. ಈ ಕುರಿತು ಯುವ ಮುಖಂಡ ಸುರೇಶ ಹಟ್ಟಿ ಅವರು ಪುರಸಭೆಯವರು ಇದನ್ನು ತೆಗೆದು ತಿಂಗಳು ಗತಿಸಿದ್ದರೂ ಅದನ್ನು ಪುನಃ ಮುಚ್ಚದೇ ಹಾಗೆ ಬಿಟ್ಟುರುವುದರಿಂದ ಇಡೀ ಪ್ರದೇಶ ಕೊಳಚೆ ಪ್ರದೇಶವಾದಂತಹಾಗಿದ್ದು ಕೂಡಲೇ ಪುರಸಭೆಯವರು ಬಾಯ್ದೆರೆದಿರುವ ರಾಜಕಾಲುವೆಯನ್ನು ಮುಚ್ಚಿ ಜನರ ಆರೋಗ್ಯವನ್ನು ಕಾಪಾಡಬೇಕು ಎಂದು ಒತ್ತಾಯಿಸಿದ್ದಾರೆ.

## ಆಶ್ರಯ ಮನೆ ನಿರ್ಮಾಣ ಕಾಮಗಾರಿ ಸ್ಥಳಕ್ಕೆ ಶಾಸಕ ಭೇಟಿ

### ತ್ವರಿತವಾಗಿ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ತಾಕೀತು

• ಉದಯವಾಹಿನಿ ಚಿತ್ರದುರ್ಗ

ಚಿತ್ರದುರ್ಗ ನಗರದ ಮೇಗಲಹಳ್ಳಿ ಬಳಿ ಆಶ್ರಯ ಮನೆಗಳ ನಿರ್ಮಾಣ ಕಾಮಗಾರಿಯ ಸ್ಥಳಕ್ಕೆ ನಗರ ಆಶ್ರಯ ಸಮಿತಿಯ ಅಧ್ಯಕ್ಷರೂ ಆಗಿರುವ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿ, ಶೀಘ್ರ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಬೇಕು ಎಂದು ಗುತ್ತಿಗೆದಾರರಿಗೆ ತಾಕೀತು ಮಾಡಿದರು.

ಚಿತ್ರದುರ್ಗ ನಗರದ ಮೇಗಲಹಳ್ಳಿ ರಿ. ಸರ್ವೆ ನಂ. 22 ರಲ್ಲಿನ 15 ಎಕರೆ 20 ಗುಂಟೆ ಜಮೀನಿನಲ್ಲಿ 1001 ಸಂಖ್ಯೆಯ ಜಿ+2 ಮಾದರಿಯ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಕಾಮಗಾರಿಗೆ ವೇಗ ನೀಡಿ, ಆದಷ್ಟು ಶೀಘ್ರ ಮನೆಗಳ ನಿರ್ಮಾಣ ಪೂರ್ಣಗೊಳಿಸಬೇಕು ಎಂದು ಗುತ್ತಿಗೆದಾರರಿಗೆ ತಾಕೀತು ಮಾಡಿದರು. ಈಗಾಗಲೆ 714 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಎ.ಹೆಚ್.ಪಿ ಯೋಜನೆಯಡಿ 2022ನೇ


ಉದಯವಾಹಿನಿ ಚಿತ್ರ

ಸಾಲಿನಲ್ಲಿ ಗುತ್ತಿಗೆದಾರರಿಗೆ ಮನೆ ನಿರ್ಮಾಣ ಕೆಲಸದ ಆದೇಶ ನೀಡಲಾಗಿರುತ್ತದೆ. ಆದರೆ ಈವರೆಗೂ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. 2026 ರ ಮಾರ್ಚ್ ಅಂತ್ಯದ ಒಳಗಾಗಿ ಎಲ್ಲಾ 1001 ಮನೆಗಳನ್ನು ಪೂರ್ಣಗೊಳಿಸುವುದಾಗಿ ಇದೇ ವೇಳೆ ಗುತ್ತಿಗೆದಾರರು ಭರವಸೆ ನೀಡಿದರು. ಈ ನಗರಸಭೆ ಪೌರಾಯುಕ್ತೆ ಎಂ. ರೇಣುಕಾ, ಗುತ್ತಿಗೆದಾರರು, ನಗರಸಭೆ ಸಿಬ್ಬಂದಿಗಳು ಹಾಜರಿದ್ದರು.

## ಸೈಂಟ್‌ಮೇರಿಸ್ ದ್ವೀಪ ಪ್ರವೇಶಕ್ಕೆ 4 ತಿಂಗಳ ಕಾಲ ನಿರ್ಬಂಧ

• ಉದಯವಾಹಿನಿ ಮಲ್ಪೆ

ಪ್ರವಾಸಿಗರ ಆಕರ್ಷಣೀಯ ತಾಣವಾದ ಮಲ್ಪೆ ಸೈಂಟ್‌ಮೇರಿಸ್ ದ್ವೀಪ ಪ್ರವೇಶಕ್ಕೆ 4 ತಿಂಗಳ ಕಾಲ ನಿರ್ಬಂಧ ಹೇರಲಾಗಿದೆ. ಜತೆಗೆ ಎಲ್ಲಾ ಲಸಾಹಸ ಕ್ರೀಡೆಗಳನ್ನು ಅಲ್ಲಿಯವರೆಗೆ ಸ್ಥಗಿತಗೊಳಿಸಲಾಗಿದೆ.

ಮಳೆಗಾಲದಲ್ಲಿ ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಿರುವ ಕಾರಣ ದ್ವೀಪಕ್ಕೆ ತೆರಳುವುದು ಅಪಾಯಕಾರಿ ಎಂಬ ಕಾರಣಕ್ಕಾಗಿ ಪ್ರತಿ ವರ್ಷ ಮೇ 15 ರಿಂದ ಸೆ. 15ರ ವರೆಗೆ ಜಿಲ್ಲಾಡಳಿತ ನಿರ್ಬಂಧ ವಿಧಿಸುತ್ತದೆ. ಮಳೆಗಾಲದಲ್ಲಿ ಪಶ್ಚಿಮ ಕರಾವಳಿಯಲ್ಲಿ ಬೋಟ್ ಚಲಾಯಿಸಲು ಅನುಮತಿ ಇರದು. ಹಾರ್ಬರ್ ಕ್ರಾಫ್ಟ್ ನಿಯಮಗಳ ಅನ್ವಯ ಸ್ಥಗಿತಗೊಳಿಸಲಾಗಿದೆ.

ಬೇಸಗೆ ರಜೆ ಹಿನ್ನೆಲೆಯಲ್ಲಿ ಸಾವಿರಾರು ಪ್ರವಾಸಿಗರು ಬರುತ್ತಿದ್ದ, ದ್ವೀಪಕ್ಕೆ ಪ್ರವಾಸಿ ಬೋಟ್ ಹಾಗೂ ಜಲಸಾಹಸ ಕ್ರೀಡೆಗೆ ಕೆಲವು ದಿನಗಳ ಮಟ್ಟಿಗೆ ಅವಕಾಶ ನೀಡಬೇಕೆಂಬ ಒತ್ತಾಯವೂ ಕೇಳಿಬಂದಿದೆ.


ಉದಯವಾಹಿನಿ ಚಿತ್ರ

**ಕೆಲವು ದಿನ ಅವಕಾಶ ಕೋರಿಕೆ**

ಬೇಸಗೆ ರಜೆ ಹಿನ್ನೆಲೆಯಲ್ಲಿ ಸಾವಿರಾರು ಪ್ರವಾಸಿಗರು ಬರುತ್ತಿದ್ದ, ದ್ವೀಪಕ್ಕೆ ಪ್ರವಾಸಿ ಬೋಟ್ ಹಾಗೂ ಜಲಸಾಹಸ ಕ್ರೀಡೆಗೆ ಕೆಲವು ದಿನಗಳ ಮಟ್ಟಿಗೆ ಅವಕಾಶ ನೀಡಬೇಕೆಂಬ ಒತ್ತಾಯವೂ ಕೇಳಿಬಂದಿದೆ.

**ಜೂ.1ರವರೆಗೆ ಪ್ರವೇಶ**

ನಿಯಮಗಳ ಪ್ರಕಾರ ಮೇ 16ರಿಂದ 4 ತಿಂಗಳು ನಿಷೇಧವಿರಲಿದೆ. ಸಮುದ್ರ ತೀರದಲ್ಲಿ ವಾತಾವರಣದ ಅನುಕೂಲ ಆಧರಿಸಿ ಜೂನ್ 1ರ ವರೆಗೆ ನೀರಿಗಿಳಿಯಬಹುದು. ಬಳಿಕ ಬೀಚ್‌ನ ಉದ್ದಕ್ಕೂ ತಡೆಬೇಲಿ ಹಾಕಲಾಗುತ್ತದೆ ಎನ್ನುತ್ತಾರೆ ಪ್ರವಾಸೋದ್ಯಮ ಇಲಾಖೆ ಸ. ನಿರ್ದೇಶಕ ಚಂದ್ರಶೇಖರ್.

ಪ್ರವಾಸಿಗರು ಬರುತ್ತಿದ್ದ, ದ್ವೀಪಕ್ಕೆ ಪ್ರವಾಸಿ ಬೋಟ್ ಹಾಗೂ ಜಲಸಾಹಸ ಕ್ರೀಡೆಗೆ ಕೆಲವು ದಿನಗಳ ಮಟ್ಟಿಗೆ ಅವಕಾಶ ನೀಡಬೇಕೆಂಬ ಒತ್ತಾಯವೂ ಕೇಳಿಬಂದಿದೆ.

## ಹೆಚ್ಚಿನ ಲಾಭಾಂಶದ ಆಸೆ: 2.30 ಕೋಟಿ ಪಂಗನಾಮ

• ಉದಯವಾಹಿನಿ ಉಡುಪಿ

ಸ್ಟಾಕ್ ಮಾರ್ಕೇಟ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ನಂಬಿಸಿ ವ್ಯಕ್ತಿಯೊಬ್ಬರಿಗೆ ಕೋಟ್ಯಂತ ರೂ. ವಂಚಿಸಿರುವ ಬಗ್ಗೆ ಉಡುಪಿ ಸೆನ್ ಅಪರಾಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಯಾನಂದ(55) ಎಂಬವರನ್ನು ಅಪರಿಚಿತರು ಮಾ.20ರಂದು ವಾಟ್ಸಾಪ್ ಗ್ರೂಪಿಗೆ ಸೇರಿಸಿದ್ದು, ಆ ಗ್ರೂಪಿನಲ್ಲಿ ಖಾತೆ ತೆರೆದು ಸ್ಟಾಕ್ ಮಾರ್ಕೇಟ್ನಲ್ಲಿ ಹಣ ಹೂಡಿಕೆ ಮಾಡುವ ಬಗ್ಗೆ ಸಂದೇಶ ಕಳುಹಿಸಲಾಗಿತ್ತು. ಶೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಅಧಿಕ ಲಾಭಾಂಶಗಳಿಸ ಬಹುದಾಗಿ ಜಯಾನಂದ ಅವರನ್ನು ನಂಬಿಸಲಾಗಿತ್ತು. ಅದರಂತೆ ಅವರು ಎ.1ರಿಂದ ಮೇ 13ರವರೆಗೆ ಆರೋಪಿಗಳು ನೀಡಿದ ವಿವಿಧ ಬ್ಯಾಂಕ್ ಖಾತೆಗಳಿಗೆ ಹಂತ ಹಂತವಾಗಿ ಒಟ್ಟು 2,30,65,000ರೂ. ಹಣವನ್ನು ವರ್ಗಾವಣೆ ಮಾಡಿದ್ದರು. ಆದರೆ ಈ ತನಕ ಜಯಾನಂದ ಶೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದ ಹಣ ಅಥವಾ ಲಾಭಾಂಶವನ್ನು ನೀಡದೇ ಆರೋಪಿಗಳು ವಂಚನೆ ಮಾಡಿರುವುದಾಗಿ ದೂರಲಾಗಿದೆ.

## ಫುಟ್‌ಪಾತ್ ತೆರವು ಕಾರ್ಯಾಚರಣೆ

• ಉದಯವಾಹಿನಿ ನವಲಗುಂದ

ಪಟ್ಟಣದ ಪ್ರಮುಖ ಮಾರುಕಟ್ಟೆಯಾದ ಗಾಂಧೀ ಮಾರುಕಟ್ಟೆಯಲ್ಲಿನ ರಸ್ತೆಯ ಬದಿ ತರಕಾರಿ ವ್ಯಾಫಾರಸ್ಥರು ಅನಧಿಕೃತವಾಗಿ ಹಾಕಿರುವ ಟೆಂಟ್‌ಗಳನ್ನು ತೆರವುಗೊಳಿಸುವ ಮೂಲಕ ಬಹುದಿನಗಳಿಂದ ನನೆಗುದಿಗೆ ಬಿದ್ದಿದ್ದ ಫುಟ್ ಪಾತ್ ತೆರವು ಕಾರ್ಯಾಚರಣೆಯನ್ನು ಪುರಸಭೆ ಸಿಬ್ಬಂದಿ ನಡೆಸಿದರು.

ಕಳೆದ ಹಲವಾರು ವರ್ಷಗಳಿಂದ ರಸ್ತೆ ಅಕ್ಕ,ಪಕ್ಕ ಅನಧಿಕೃತವಾಗಿ ಹಾಕಲಾಗಿದ್ದ ಟೆಂಟ್‌ಗಳಿಂದ ಮಾರುಕಟ್ಟೆ ಪ್ರದೇಶ ಸಾಕಷ್ಟು ಇಕ್ಕಟ್ಟಾಗಿ


ಉದಯವಾಹಿನಿ ಚಿತ್ರ

ರೂಪಗೊಂಡಿತ್ತು, ಇದರಿಂದಾಗಿ ಸಾರ್ವಜನಿಕರು ಸುಗಮವಾಗಿ ನಡೆದಾಡುವುದೂ ತೊಂದರೆಯಾಗಿತ್ತು, ಜತೆಗೆ ತರಕಾರಿ ವ್ಯಾಪಾರಸ್ಥರ ಅನಧಿಕೃತ ಟೆಂಟ್‌ಗಳಿಂದ ಸಾರ್ವಜನಿಕರಿಗೆ ಹಾಗೂ ಪುರಸಭೆಯಿಂದ ಅಂಗಡಿ ಪಡೆದ ವ್ಯಾಪಾರಸ್ಥರಿಗೂ ತೀವ್ರ ತೊಂದರೆಯಾಗಿತ್ತು

ಈ ಕುರಿತಾಗಿ ಪುರಸಭೆ ಹಲವಾರು ಬಾರಿ ವ್ಯಾಪಾರಸ್ಥರಿಗೆ ಎಚ್ಚರಿಕೆ ನೀಡಿದ್ದರೂ ಎಚ್ಚೆತ್ತುಕೊಳ್ಳದ ವ್ಯಾಪಾರಸ್ಥರಿಗೆ ಬಿಸಿ ಮುಟ್ಟಿಸುವ ಮೂಲಕ ಅತಿಕ್ರಮಣ ತೆರವು ಗೊಳಿಸಿದ್ದಲ್ಲದೇ ಪುರಸಭೆ ನಿಗದಿ ಪಡಿಸಿದ ಗಡಿರೇಖೆಯೊಳಗೆ ವ್ಯಾಪಾರ ನಡೆಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

# ದೇಶದ ಉದ್ಧಾರ ದೇವಸ್ಥಾನದ ಗಂಟೆಯಿಂದ ಸಾಧ್ಯವಿಲ್ಲ: ಮಧು ಬಂಗಾರಪ್ಪ

• ಮೇ 29ರಂದು ಮುಖ್ಯಮಂತ್ರಿ ನೇತೃತ್ವದಲ್ಲಿ ಶಾಲಾ ಪ್ರಾರಂಭೋತ್ಸವವನ್ನು ವಿಶೇಷವಾಗಿ ನಡೆಸಲು ನಿರ್ಧರಿಸಲಾಗಿದೆ

• ಉದಯವಾಹಿನಿ ಮುದ್ದೇಬಿಹಾಳ

ಮೇ 29ರಂದು ಮುಖ್ಯಮಂತ್ರಿ ನೇತೃತ್ವದಲ್ಲಿ ಶಾಲಾ ಪ್ರಾರಂಭೋತ್ಸವವನ್ನು ವಿಶೇಷವಾಗಿ ನಡೆಸಲು ನಿರ್ಧರಿಸಲಾಗಿದೆ. ಆಯಾ ಮತಕ್ಷೇತ್ರದಲ್ಲಿ ಶಾಸಕರು, ತಹಶೀಲ್ದಾರರು, ಪಿಡಿಓಗಳು, ಇತರೆ ಇಲಾಖೆಗಳ ಅಧಿಕಾರಿಗಳು ತಮಗೆ ಸೂಚಿಸುವ ಶಾಲೆಗಳಿಗೆ ಹೋಗಿ ಅರ್ಧ ಗಂಟೆ ಕಾರ್ಯಕ್ರಮ ನಡೆಸಿ ಮಕ್ಕಳನ್ನು ಸ್ವಾಗತಿಸಿಕೊಳ್ಳುತ್ತಾರೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಇಲ್ಲಿನ ಪ್ರವಾಸಿ ಮಂದಿರದಲ್ಲಿ ಶನಿವಾರ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ಬಾರಿ ಬಜೆಟ್ಟಿನಲ್ಲಿ ಕಲಿಕೆಯ ಮೂಲ ಸೌಕರ್ಯ ಬಲವರ್ಧನೆಗೆ ಹೆಚ್ಚಿನಅವಕಾಶ ಕಲ್ಪಿಸಲಾಗಿದೆ.

ಎಲ್‌ಕೆಜಿ, ಯುಕೆಜಿ, ಪ್ರೈಮರಿ ಹೈಯರ್ ಪ್ರೈಮರಿ, ಹೈಸ್ಕೂಲ್, ಪಿಯು ಶಿಕ್ಷಣದಲ್ಲಿ ಕಲಿಕೆಗೆ ಹೆಚ್ಚಿನ ಒತ್ತು ಕೊಡಲಾಗಿದೆ. ಹಿಂದಿದ್ದ ಕಲಿಕೆಯಲ್ಲಿನ ನ್ಯೂನ್ಯತೆಗಳನ್ನು ಕಂಡು ಹಿಡಿದು ಸರಿಪಡಿಸಲು ಕ್ರಮ ಕೈಕೊಳ್ಳಲಾಗಿದೆ. ರಾಜ್ಯಾದ್ಯಂತ ಕರ್ನಾಟಕ ಪಬ್ಲಿಕ್ ಶಾಲೆಗಳ ಸಂಖ್ಯೆ ಹೆಚ್ಚಿಸಲಾಗಿದೆ. ಸರ್ಕಾರಿ ಶಾಲೆಗೆ ಮಕ್ಕಳ ಸಂಖ್ಯೆ ಹೆಚ್ಚಾಗಬೇಕು ಅನ್ನೋದು ನಮ್ಮ ನಿರೀಕ್ಷೆಯಾಗಿದ್ದು ಮುಖ್ಯಮಂತ್ರಿಗಳು ಶಿಕ್ಷಣ ಇಲಾಖೆಗೆ ಅನುದಾನದ ಕೊರತೆ ಮಾಡಿಲ್ಲ ಎಂದರು.


ಉದಯವಾಹಿನಿ ಚಿತ್ರ

**ಮೂಲಸೌಕರ್ಯ ಬಲವರ್ಧನೆಗೆ ಅವಕಾಶ**

ಖಾಸಗಿ ಶಾಲೆಗಳ ಶಿಕ್ಷಣ ಪದ್ಧತಿ ಬಗ್ಗೆ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಖಾಸಗಿ ಶಾಲೆಯವರು ಶೇ.80ಕ್ಕಿಂತ ಹೆಚ್ಚು ಅಂಕ ಪಡೆದವರನ್ನು ಪ್ರವೇಶ ಮಾಡಿಕೊಳ್ಳುತ್ತಾರೆ. ಇದರಿಂದ ಸಹಜವಾಗಿ ಅಲ್ಲಿ ಕಲಿಕೆ ಹೆಚ್ಚಾಗಿರುತ್ತದೆ. ಆದರೆ ಸರ್ಕಾರಿ ಶಾಲೆ ಇಗಳಲ್ಲಿ ಝೀರೋ ಇದ್ದವರು ಕಲಿಕೆಯಲ್ಲಿ ಚಾಲೆಂಜಿಂಗ್ ಆಗಿ ಹೊರಹೊಮ್ಮುತ್ತಾರೆ. ಇಲ್ಲಿ ಪ್ರತಿಭಾವಂತ ಶಿಕ್ಷಕರು, ಮದ್ಯಾಹ್ನದ ಬಿಸಿಯೂಟ, ಮೊಟ್ಟೆ, ಬಾಳೆಹಣ್ಣು, ಸಮವಸ್ತ್ರ, ರಾಗಿ ಮಾಲ್ಟ್, ಪಠ್ಯಪುಸ್ತಕ ಇವೆಲ್ಲವನ್ನೂ ಉಚಿತವಾಗಿ ಕೊಡಲಾಗುತ್ತದೆ. ಆದರೆ ಖಾಸಗಿಯಲ್ಲಿ ಇವೆಲ್ಲ ಇಲ್ಲ. ಸರ್ಕಾರಿ ಶಾಲೆಗಳಲ್ಲಿನ ಸಮಸ್ಯೆಗಳನ್ನು ಹಂತಹಂತವಾಗಿ ಬಗೆಹರಿಸಲಾಗುತ್ತಿದೆ. ಶಿಕ್ಷಕರ ಕೊರತೆ ನೀಗಿಸಲು ಯೋಜನೆ ರೂಪಿಸಿದ್ದೇವೆ ಎಂದರು.

> ಗೋಷ್ಠಿಯಲ್ಲಿದ್ದ ಡಿಡಿಪಿಐ ತಸ್ಲೀಮಾಬಾನು ಕೊಲ್ಹಾರ ಅವರು ವಿಜಯಪುರ ಜಿಲ್ಲೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ಕಳೆದ ವರ್ಷ ಶೇ.80ರಷ್ಟಿದ್ದದ್ದು ಈ ವರ್ಷ ಶೇ.49ಕ್ಕಿಳಿದಿದೆ ಎಂದಾಗ ಮಾತನಾಡಿದ ಸಚಿವರು, ಯಾಕೆ ಕೇಳಕ್ಕಿಳಿದಿದ್ದೀರಿ ಎಂದು ಪ್ರಶ್ನಿಸಿ ರಾಜ್ಯದಲ್ಲೆಲ್ಲ ಪ್ಲಸ್ ಇದೆ ನಿಮ್ಮಲ್ಯಾಕೆ ಮೈನಸ್. ಎಲ್ಲಾ ಜಿಲ್ಲೆಗಳಲ್ಲೂ ಪ್ರಗತಿ ತೋರಿಸಿದ್ದಾರೆ. ನಿಮ್ಮ ಜಿಲ್ಲೆಯಲ್ಲೂ ಆಗಬೇಕು ಕಲಿಕೆಗೆ ಒತ್ತು ಕೊಡದಿದ್ದರೆ ಸಮಸ್ಯೆ ಎದುರಿಸಬೇಕಾಗುತ್ತದೆ ಎಂದಾಗ ಶಾಸಕ ಸಿ.ಎಸ್.ನಾಡಗೌಡರು ಮಧ್ಯಪ್ರವೇಶಿಸಿ ಈ ಬಾರಿ ಪರೀಕ್ಷೆ ಸ್ಟಿಕ್ಟ್ ಆಗಿ ನಡೆದದ್ದರಿಂದ ಫಲಿತಾಂಶ ಇಳಿಕೆ ಕಂಡಿದೆ ಎಂದು ಡಿಡಿಪಿಐ ಅವರನ್ನು ಬಚಾವ್ ಮಾಡಿದರು.

**ಬಂಗಾರಪ್ಪನವರ ಸ್ಮರಣೆ**

ಈ ಸಂದರ್ಭ ನಮ್ಮ ತಂದೆ ಬಂಗಾರಪ್ಪನವರನ್ನು ಸ್ಮರಿಸಬೇಕು. ಅವರು ಶಾಲೆಯನ್ನು ಊರಿಗೆ ತಂದಂಥವರು. ಗ್ರಾಮೀಣ ಭಾಗದ ಮಕ್ಕಳಿಗೆ ಹೊಲದಲ್ಲಿ ಕೆಲಸ ಮಾಡುವುದನ್ನು ಬಿಡಿಸಲು ಶಾಲೆಗೆ ಬರುವವರಿಗೆ ಒಂದು ರೂ ಪ್ರೋತ್ಸಾಹಧನ ಪರಿಚಯಿಸಿದ್ದರಿಂದ ಆಗ ಮಕ್ಕಳ ಪ್ರವೇಶಾತಿ ಸಂಖ್ಯೆ ಹೆಚ್ಚಾಯಿತು. ಅವರು ಎಲ್ಲಾ ಧರ್ಮದವರಿಗೂ ಮಹತ್ವ ಕೊಟ್ಟಂಥವರು. ಆರಾಧನಾ, ಆಶ್ರಯ ಯೋಜನೆ ಅವರದ್ದೇ. ಅವರ ಮಗನಾಗಿ ನಾನು ಅವರ ಹಾದಿಯಲ್ಲೇ ಸಾಗಲು ಯತ್ನಿಸುತ್ತಿರುವೆ. 2001ರಲ್ಲಿ ಎಸ್.ಎಂ.ಕೃಷ್ಣ ಅವರು ಬಿಸಿಯೂಟ ಜಾರಿಗೊಳಿಸಿದರು. 2013-14ರಲ್ಲಿ ಸಿದ್ದರಾಮಯ್ಯನವರು ಕ್ಷೀರಭಾಗ್ಯ, ಮೊಟ್ಟೆ, ಬಾಳೆಹಣ್ಣು ಜಾರಿಗೊಳಿಸಿದರು. ನನ್ನ ಅವಧಿಯಲ್ಲಿ ವಾರಕ್ಕೆ ಮೂರು ದಿವಸ ರಾಗಿ ಭಾಗ್ಯ ಕೊಡಲಾಗುತ್ತಿದೆ. ಅಜೀಂ ಪ್ರೇಮ್ ಜಿಯಂತ ಪುಣ್ಯಾತ್ಮ 1591 ಕೋಟಿ ಅನುದಾನ ನೀಡಿದ್ದಾರೆ.

2023ರಲ್ಲಿ ಗ್ಯಾರಂಟಿ ಯೋಜನೆಗಳ ಪ್ರಾಣಾಳಿಕೆಯ ಉಪಾಧ್ಯಕ್ಷ ನಾನೇ ಆಗಿದ್ದೆ. ಪ್ರಾಣಾಳಿಕೆಯಲ್ಲಿ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇವೆ. ಟೀಕೆ ಮಾಡುವವರೇ ನಮ್ಮ ಗ್ಯಾರಂಟಿ ಕಾಪಿ ಮಾಡುವ ಪರಿಸ್ಥಿತಿ ಬಂದಿದೆ. ಬಿಜೆಪಿಯವರಿಗೆ ಪಾಕಿಸ್ತಾನ, ದೇವಸ್ಥಾನ, ಹಿಂದು ಬಿಟ್ಟರೆ ಬೇರೆ ಯಾವುದೇ ವಿಷಯಗಳಿಲ್ಲ. ಬಿಜೆಪಿಯವರು ಹಿಂದುತ್ವ ಎಂದು ನಾಮ ಹಾಕಿ ಹೋಗ್ತಾರೆ. ಭೂ ಒಡೆತನ, ಬಗರ್‌ಹುಕುಂ ಮುಂತಾದ ಯೋಜನೆ ತಂದದ್ದು ನಮ್ಮ ಪಕ್ಷದ ಸರ್ಕಾರ. ನಮ್ಮ ದೇಶದಲ್ಲಿ ಬ್ಲಡ್ಡು, ದುಡ್ಡು ಬಡವರ ಕೈಯಲ್ಲಿರೋದು ಮಹತ್ವದ್ದು. ಸಾಹುಕಾರನ ಕೈಗೆ ದುಡ್ಡು ಸಿಕ್ಕರೆ ಆತ ಬ್ಯಾಂಕಲ್ಲಿಟ್ಟು ಬಡ್ಡಿ ತಗೋತಾನೆ. ಅದೇ ಬಡವರಿಗೆ ಕೊಟ್ಟರೆ ಖರ್ಚು ಮಾಡ್ತಾರೆ, ದೇಶ ಸುತ್ತುತ್ತಾರೆ. ಆಗ ಮಾರುಕಟ್ಟೆ ಸರಳವಾಗಿ ಮೇಲೇರುತ್ತದೆ. ಜಿಡಿಪಿಗೆ ಅತಿ ಹೆಚ್ಚು ಕೊಡುಗೆ ನೀಡುತ್ತಿರುವವರೇ ನಮ್ಮ ರೈತರು ಎಂದರು.

ಬಿಜೆಪಿಯವರು ದೇವರು, ದಿಂಡರು ಅಂತ ಹೇಳಿಕೊಳ್ತಾ ದೇವಸ್ಥಾನಗಳ ಗಂಟೆ ಹೊಡೀತಾರೆ. ನಾನು ಶಾಲೆ ಗಂಟೆ ಹೊಡೀತೇನೆ. ಈ ದೇಶದ ಉದ್ದಾರ ದೇವಸ್ಥಾನದ ಗಂಟೆಯಿಂದ ಸಾಧ್ಯವಿಲ್ಲ. ಶಾಲೆ ಗಂಟೆಯಿಂದ ಮಾತ್ರ ದೇಶ ಉದ್ದಾರ ಆಗುತ್ತದೆ ಅನ್ನೋದನ್ನು ಎಲ್ಲರೂ ಅರಿತುಕೊಳ್ಳಬೇಕು. ಶಾಲೆಯ ಗಂಟೆ ಹೊಡೆಯುವ ಪುಣ್ಯದ ಕೆಲಸವನ್ನು ಕಾಂಗ್ರೆಸ್ ಸರ್ಕಾರ ನನಗೆ ಕೊಟ್ಟಿದೆ.

ಜಾತ್ಯಾತೀತ, ಧರ್ಮಾತೀತ ಕೆಲಸ ಮಹತ್ವದ್ದು. ಇರುವಷ್ಟು ದಿನ ಒಳ್ಳೇ ಕೆಲಸ ಮಾಡಬೇಕು ಅನ್ನೋದು ನನ್ನ ನಂಬಿಕೆ ಎಂದು ತಿಳಿಸಿದರು.

ನಮ್ಮ ತಂದೆಯವರನ್ನು ಮುಖ್ಯಮಂತ್ರಿ ಮಾಡಿದ್ದರ ಋಣ ತೀರಿಸಲು ನಾನು ಕಾಂಗ್ರೆಸ್ ಪಕ್ಷದಲ್ಲಿರುವೆ ಎಂದು ಸಚಿವರು ಹೇಳಿದರು.

### ಅಮೆರಿಕದ ಆರ್ಥಿಕ ಸ್ಥಿತಿಗೆ ಹಿನ್ನಡೆ; ಸಾಲದ ಸಂಖ್ಯೆ ಹೆಚ್ಚಳ–ಟ್ರಿಪಲ್ ಎ ಕ್ರೆಡಿಟ್ ರೇಟಿಂಗ್ ಇಳಿಸಿದ ಮೂಡೀಸ್

# 2035ರ ವೇಳೆಗೆ ಫೆಡರಲ್ ಕೊರತೆಯು ಶೇ.9ಕ್ಕೆ ಏರುವ ಸಾಧ್ಯತೆ

**ವಾಷಿಂಗ್ಟನ್:** 36 ಟ್ರಿಲಿಯನ್ ಡಾಲರ್ ಸಾಲದ ಹೊರೆ ಹೆಚ್ಚಾಗಿರುವ ಹಿನ್ನೆಲೆ, ಮೂಡೀಸ್ ಇನ್ವೆಸ್ಟರ್ಸ್ ಸರ್ವೀಸ್ ಎಂಬ ಸಂಸ್ಥೆ ಅಮೆರಿಕದ ಸಾಲದ ರೇಟಿಂಗ್ ಟ್ರಿಪಲ್ ಎ ರೇಟಿಂಗ್ ಅನ್ನು ಡಬಲ್ ಎ1 ರೇಟಿಂಗ್‌ಗೆ ಇಳಿಸಿದೆ. ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಇದು ಡೊನಾಲ್ಡ್ ಟ್ರಂಪ್ ಅವರ ಆರ್ಥಿಕ ಬಲದ ಹೇಳಿಕೆಗೆ ಹಿನ್ನಡೆ ಉಂಟುಮಾಡಿದೆ.

**2035ರ ವೇಳೆಗೆ ಫೆಡರಲ್ ಕೊರತೆಯು ಶೇ 9ಕ್ಕೆ ಏರುವ ಸಾಧ್ಯತೆ:** ಅಮೆರಿಕ ಸರ್ಕಾರದ ಸಾಲ ಹೆಚ್ಚಳ, ಬಡ್ಡಿ ಪಾವತಿಗಳ ಕಾರಣಕ್ಕೆ ರೇಟಿಂಗ್ ಕಡಿಮೆ ಮಾಡಲಾಗಿದೆ ಎಂದು ಮೂಡೀಸ್ ಹೇಳಿದೆ. 2035 ರ ವೇಳೆಗೆ ಫೆಡರಲ್ ಕೊರತೆಯು ಶೇ 9ಕ್ಕೆ ಏರುವ ಸಾಧ್ಯತೆ. ಕಳೆದ ವರ್ಷ ಇದು ಶೇ 6.4 ಇತ್ತು. ಸಾಲದ ಹೊರೆ ಜಿಡಿಪಿ ಶೇ.134ಕ್ಕೆ ಏರುವ ಸಾಧ್ಯತೆ ಇದೆ. ಹಲವು ವರ್ಷಗಳಿಂದ ಅಮೆರಿಕ ಸರ್ಕಾರದ ಸಾಲ ಹೆಚ್ಚಾಗಿದೆ. ಇತರ ದೇಶಗಳಿಗೆ ಹೋಲಿಸಿದರೆ ಇದು ತುಂಬಾ ಹೆಚ್ಚಾಗಿದೆ. ಹೀಗಾಗಿ ಮೂಡೀಸ್ ರೇಟಿಂಗ್‌ಅನ್ನು ಕಡಿಮೆ ಮಾಡಿದೆ. ಈ ಹಿಂದೆ ಎಸ್‌ಅಂಡ್‌ಪಿ, ಫಿಚ್ ಕೂಡ ಅಮೆರಿಕ ರೇಟಿಂಗ್ ಅನ್ನು ಕಡಿಮೆ ಮಾಡಿದ್ದವು. ಈಗ ಮೂಡೀಸ್ ಕೂಡ ಅದೇ ಹಾದಿಯಲ್ಲಿ ಸಾಗಿದೆ. ಆರ್ಥಿಕ ಕೊರತೆಗಳು ಹೆಚ್ಚುತ್ತಿವೆ. ಬಡ್ಡಿ ಪಾವತಿಗಳು ಏರುತ್ತಿವೆ. ಈ ಕಾರಣಗಳಿಂದ ರೇಟಿಂಗ್ ತಗ್ಗಿಸಲಾಗಿದೆ.

2023ರಲ್ಲಿ ಮೂಡೀಸ್ ನೆಗೆಟಿವ್ ದೃಷ್ಟಿಕೋನಕ್ಕೆ ಬದಲಾಯಿತು. ಈಗ ರೇಟಿಂಗ್ ಅನ್ನೇ ತಗ್ಗಿಸಿದೆ. ದೊಡ್ಡ ವಾರ್ಷಿಕ ಆರ್ಥಿಕ ಕೊರತೆ, ಹೆಚ್ಚುತ್ತಿರುವ ಬಡ್ಡಿ ವೆಚ್ಚ ತಡೆಯಲು ಅಮೆರಿಕ ಆಡಳಿತ ಮತ್ತು ಕಾಂಗ್ರೆಸ್ ಒಪ್ಪಂದಕ್ಕೆ ಬರಲು ವಿಫಲವಾಗಿವೆ? ಎಂದು ಮೂಡೀಸ್ ಹೇಳಿದೆ.




**ಆರ್ಥಿಕ ಸವಾಲುಗಳನ್ನು ಎದುರಿಸಲು ವಿಫಲ**

**ವಾಷಿಂಗ್ಟನ್‌ನ ಆಡಳಿತ ವ್ಯವಸ್ಥೆ ಆರ್ಥಿಕ ಸವಾಲುಗಳನ್ನು ಎದುರಿಸಲು ವಿಫಲವಾಗಿದೆ. ದೊಡ್ಡ ವಾರ್ಷಿಕ ಕೊರತೆ ಮತ್ತು ಹೆಚ್ಚುತ್ತಿರುವ ಬಡ್ಡಿ ವೆಚ್ಚವನ್ನು ತಡೆಯಲು ಅಮೆರಿಕದ ಆಡಳಿತ ಮತ್ತು ಕಾಂಗ್ರೆಸ್ ಒಪ್ಪಂದಕ್ಕೆ ಬರಲು ಸಾಧ್ಯವಾಗಿಲ್ಲ ಎಂದು ಸಂಸ್ಥೆ ಹೇಳಿದೆ. ಈಗ ಚರ್ಚೆಯಲ್ಲಿರುವ ಪ್ರಸ್ತಾವನೆಗಳಿಂದ ಕಡ್ಡಾಯ ಖರ್ಚು ಮತ್ತು ಕೊರತೆಯನ್ನು ಕಡಿಮೆ ಮಾಡಲು ಸಾಧ್ಯವಿಲ್ಲ ಎಂದು ಅದು ತಿಳಿಸಿದೆ.**

**ಆದಾಯ ಹೆಚ್ಚಿಸುವ ಕ್ರಮ ವಿಫಲ:** ಜನವರಿ 20 ರಂದು ಡೊನಾಲ್ಡ್ ಟ್ರಂಪ್ ಮತ್ತೆ ಅಧ್ಯಕ್ಷರಾದರು. ಅವರು ಫೆಡರಲ್ ಬಜೆಟ್ ಅನ್ನು ಸರಿಪಡಿಸುವ ಪ್ರತಿಜ್ಞೆ ಮಾಡಿದ್ದರು. ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಸರ್ಕಾರದ ಸಾಲದ ವೆಚ್ಚವನ್ನು ಕಡಿಮೆ ಮಾಡುವ ಗುರಿಯನ್ನು ಪದೇ ಪದೇ ಒತ್ತಿ ಹೇಳಿದ್ದಾರೆ. ಆದರೂ, ಆದಾಯ ಹೆಚ್ಚಿಸಲು, ಖರ್ಚು ಕಡಿಮೆ ಮಾಡಲು ಮಾಡಿದ ಪ್ರಯತ್ನಗಳು ಹೂಡಿಕೆದಾರರಿಗೆ ಮನವರಿಕೆ ಮಾಡಲು ಸಾಧ್ಯವಾಗಿಲ್ಲ ಎನ್ನಲಾಗಿದೆ.

**ಜಿಡಿಪಿ ರೇಟಿಂಗ್ ಎಷ್ಟಿತ್ತು, ಎಷ್ಟಾಗುತ್ತೆ?:** 2035 ರ ವೇಳೆಗೆ ಫೆಡರಲ್ ಕೊರತೆಯು ಜಿಡಿಪಿಯ ಶೇ.9ಕ್ಕೆ ಏರುವ ನಿರೀಕ್ಷೆಯಿದೆ. 2023ರಲ್ಲಿ ಇದು ಶೇ.6.4 ಇತ್ತು. ಬಡ್ಡಿ ವೆಚ್ಚ, ಸಬ್ಸಿಡಿಗಳು, ಕಡಿಮೆ ಆದಾಯದ ಕಾರಣದಿಂದ ಕೊರತೆ ಹೆಚ್ಚಾಗಲಿದೆ. ಇದರಿಂದ ಅಮೆರಿಕದ ಸಾಲವು 2035 ರ ವೇಳೆಗೆ ಜಿಡಿಪಿಯ ಶೇ.134 ತಲುಪುವ ಸಾಧ್ಯತೆಯಿದೆ. ಕಳೆದ ವರ್ಷ ಇದು ಶೇ.98 ಇತ್ತು.

**ಅರ್ಥಶಾಸ್ತ್ರಜ್ಞ ಮಾರ್ಕ್ ಝಾಂಡಿ ಒಬಾಮಾ ಸಲಹೆಗಾರ:** ಇದಕ್ಕೆ ಪ್ರತಿಕ್ರಿಯಿಸಿದ ವೈಟ್ ಹೌಸ್, ಮೂಡೀಸ್‌ನ ಅರ್ಥಶಾಸ್ತ್ರಜ್ಞ ಮಾರ್ಕ್ ಝಾಂಡಿ, ಬರಾಕ್ ಒಬಾಮಾ ಸಲಹೆಗಾರ. ಅವರ ವಿಶ್ಲೇಷಣೆಯನ್ನು ಯಾರು ನಂಬುವುದಿಲ್ಲ. ಅವರು ತಪ್ಪಾಗಿ ಮಾಹಿತಿ ನೀಡುತ್ತಾರೆ ಎಂದು ಪದೇ ಪದೇ ಸಾಬೀತಾಗಿದೆ ಎಂದು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಳ್ಳಲಾಗಿದೆ.

## ಭಾರತ-ಪಾಕ್ ಉದ್ವಿಗ್ನತೆ ಕೊನೆಗೊಳಿಸಿದ್ದು ನಾನೇ

**ನ್ಯೂಯಾರ್ಕ್:** ಭಾರತ ಮತ್ತು ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಿ ಅವರನ್ನು ಸಂಕಷ್ಟದ ಅಂಚಿನಿಂದ ಮರಳಿ ಕರೆತರುವುದು ತಮಗೆ ಎಂದಿಗೂ ಸಿಗದಷ್ಟು ದೊಡ್ಡ ಯಶಸ್ಸು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೆ ಹೇಳಿದ್ದಾರೆ. ಎರಡೂ ರಾಷ್ಟ್ರಗಳ ನಡುವೆ ದೊಡ್ಡ ದ್ವೇಷ ಇತ್ತು, ಉದ್ವಿಗ್ನತೆ ಮುಂದಿನ ಹಂತ ಬಹುಶಃ ಪರಮಾಣು ಆಗುವ ಹಂತಕ್ಕೆ ತಲುಪಿದೆ ಎಂದು ಅವರು ಹೇಳಿದ್ದಾರೆ. ನನಗೆ ಸಿಗುವುದಕ್ಕಿಂತ ದೊಡ್ಡ ಯಶಸ್ಸು, ಅವು ಪ್ರಮುಖ ಪರಮಾಣು ಶಕ್ತಿಗಳು. ಅವು ಸ್ವಲ್ಪವೂ ಅಲ್ಲ, ಮತ್ತು ಅವು ಕೋಪಗೊಂಡಿದ್ದವು ಎಂದು ಟ್ರಂಪ್ ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಹೇಳಿದರು. ಉಭಯ ರಾಷ್ಟ್ರಗಳ ದ್ವೇಷವು ಅದ್ಭುತವಾಗಿತ್ತು. ನಾವು ವ್ಯಾಪಾರದ ಬಗ್ಗೆ ಮಾತನಾಡಲಿದ್ದೇವೆ. ನಾವು ಬಹಳಷ್ಟು ವ್ಯಾಪಾರ ಮಾಡಲಿದ್ದೇವೆ ಎಂದು ಹೇಳಿದೆ, ಎಂದು ಟ್ರಂಪ್ ಹೇಳಿದರು. ನಾನು ವ್ಯಾಪಾರವನ್ನು ಅಂಕಗಳನ್ನು ಇತ್ಯರ್ಥಪಡಿಸಲು ಮತ್ತು ಶಾಂತಿ ಸ್ಥಾಪಿಸಲು ಬಳಸುತ್ತಿದ್ದೇನೆ ಎಂದು ಟ್ರಂಪ್ ಹೇಳಿದರು. ಭಾರತ ಅದು ವಿಶ್ವದ ಅತಿ ಹೆಚ್ಚು ಸುಂಕದ ರಾಷ್ಟ್ರಗಳಲ್ಲಿ ಒಂದಾಗಿದೆ. ಅವು ವ್ಯವಹಾರ ಮಾಡಲು ಅಸಾಧ್ಯವಾಗಿಸುತ್ತದೆ. ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ತಮ್ಮ ಸುಂಕವನ್ನು 100% ಕಡಿತಗೊಳಿಸಲು ಅವರು ಸಿದ್ಧರಿದ್ದಾರೆಂದು ನಿಮಗೆ ತಿಳಿದಿದೆಯೇ ಎಂದು ಟ್ರಂಪ್ ಹೇಳಿದರು. ಈ ವಿಷಯದ ಬಗ್ಗೆ ಭಾರತದಿಂದ ಯಾವುದೇ ಘೋಷಣೆ ಬಂದಿಲ್ಲ. ಭಾರತದೊಂದಿಗಿನ ಒಪ್ಪಂದ ಶೀಘ್ರದಲ್ಲೇ ಬರಲಿದೆಯೇ ಎಂದು ಕೇಳಿದಾಗ, ಟ್ರಂಪ್, ಹೌದು, ಅದು ಶೀಘ್ರದಲ್ಲೇ ಬರಲಿದೆ. ನಾನು ಯಾವುದೇ ಆತುರವಿಲ್ಲ. ನೋಡಿ, ಎಲ್ಲರೂ ನಮ್ಮೊಂದಿಗೆ ಒಪ್ಪಂದ ಮಾಡಿ ಕೊಳ್ಳಲು ಬಯಸುತ್ತಾರೆ. ದಕ್ಷಿಣ ಕೊರಿಯಾ ಒಪ್ಪಂದ ಮಾಡಿಕೊಳ್ಳಲು ಬಯಸುತ್ತದೆ ಆದರೆ ನಾನು ಎಲ್ಲರೊಂದಿಗೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ನಾನು ಮಿತಿಯನ್ನು ನಿಗದಿಪಡಿಸ ಲಿದ್ದೇನೆ. ನಾನು ಇನ್ನೂ ಕೆಲವು ಒಪ್ಪಂದಗಳನ್ನು ಮಾಡಿಕೊಳ್ಳುತ್ತೇನೆ? ಏಕೆಂದರೆ ನನಗೆ ಸಾಧ್ಯವಿಲ್ಲ, ನೀವು ಅಷ್ಟೊಂದು ಜನರನ್ನು ಭೇಟಿ ಮಾಡಲು ಸಾಧ್ಯವಿಲ್ಲ. ಒಪ್ಪಂದ ಮಾಡಿಕೊಳ್ಳಲು ಬಯಸುವ 150 ದೇಶಗಳು ನನ್ನ ಬಳಿ ಇವೆ, ಎಂದು ಟ್ರಂಪ್ ಹೇಳಿದರು.



ಭಾರತ, ಪಾಕಿಸ್ತಾನದ ನಡುವಿನ ಉದ್ವಿಗ್ನತೆಯನ್ನು ಇತ್ಯರ್ಥಗೊಳಿಸಲು ಸಹಾಯ ಮಾಡಿದೆ ಎಂದು ಟ್ರಂಪ್ ತಮ್ಮ ಹೇಳಿಕೆಯನ್ನು ಪುನರಾವರ್ತಿಸಿದ ಹಲವು ದಿನಗಳಲ್ಲಿ ಇದು ಏಳನೇ ಬಾರಿಯಾಗಿದೆ.

## ಇಬ್ಬರು ಐಸಿಸ್ ಸ್ಲೀಪರ್ ಸೆಲ್ ಆರೋಪಿಗಳ ಬಂಧನ

**ನವದೆಹಲಿ:** ಮುಂಬೈ ವಿಮಾನ ನಿಲ್ದಾಣದಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆ ಅಧಿಕಾರಿಗಳು ಭಯೋತ್ಪಾದಕ ಸಂಘಟನೆ ಐಸಿಸ್‌ನ ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಮಹಾರಾಷ್ಟ್ರದ ಪುಣೆಯಲ್ಲಿ 2023ರಲ್ಲಿ ನಡೆದ ಐಇಡಿಗಳ ತಯಾರಿಕೆ, ಪರೀಕ್ಷೆಗೆ ಸಂಬಂಧಿಸಿದ ಪ್ರಕರಣದಲ್ಲಿ ಈ ಇಬ್ಬರು ಬೇಕಾಗಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಂಧಿತರನ್ನು ಅಬ್ದುಲ್ಲಾ ಫಯಾಜ್ ಶೇಖ್ ಅಲಿಯಾಸ್ ಡಯಾಪರ್‌ವಾಲಾ, ತಲ್ಹಾ ಖಾನ್ ಎಂದು ಗುರುತಿಸಲಾಗಿದೆ.

ಕಳೆದ ರಾತ್ರಿ ಮುಂಬೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 2ರಲ್ಲಿ ಸಿಕ್ಕಿಬಿದ್ದಿದ್ದಾರೆ. ಇಂಡೋನೇಷ್ಯಾದಲ್ಲಿ ಅಡಗಿದ್ದ ಇವರು ಐಸಿಸ್ ಸ್ಲೀಪರ್ ಸೆಲ್‌ನ ಸಕ್ರಿಯ ಸದಸ್ಯರಾಗಿದ್ದು ಜಕಾರ್ತಾ ದಿಂದ ಭಾರತಕ್ಕೆ ಬಂದಾಗ ಕಸ್ಟಮ್ ಅಧಿಕಾರಿಗಳ ಸಹಕಾರದಿಂದ ಬಂಧಿಸಲಾಗಿದೆ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

ಇಬ್ಬರು ಆರೋಪಿಗಳು ಎರಡು ವರ್ಷಗಳಿಗೂ ಹೆಚ್ಚು ಕಾಲ ತಲೆಮರೆಸಿಕೊಂಡಿದ್ದರು, ಮುಂಬೈನ ಎನ್‌ಐಎ ವಿಶೇಷ ನ್ಯಾಯಾಲಯವು ಅವರ ವಿರುದ್ಧ ಜಾಮೀನು ರಹಿತ ವಾರಂಟ್‌ಗಳನ್ನು ಸಹ ಹೊರಡಿಸಿತ್ತು. ಇಬ್ಬರು ಆರೋಪಿಗಳ ಬಗ್ಗೆ ಮಾಹಿತಿ ನೀಡಿದವರಿಗೆ ತಲಾ 3 ಲಕ್ಷ ರೂಪಾಯಿ ನಗದು ಬಹುಮಾನ ನೀಡುವುದಾಗಿ ಘೋಷಿಸಲಾಗಿತ್ತು.



ಹಿಂಸಾಚಾರ, ಭಯೋತ್ಪಾದನೆಯ ಮೂಲಕ ದೇಶದಲ್ಲಿ ಇಸ್ಲಾಮಿಕ್ ಆಡಳಿತವನ್ನು ಸ್ಥಾಪಿಸುವ ಕಾರ್ಯಸೂಚಿಯನ್ನು ಮುಂದುವರಿಸಲು, ಭಾರತದ ಶಾಂತಿ ಮತ್ತು ಕೋಮು ಸಾಮರಸ್ಯವನ್ನು ಕದಡುವ ಗುರಿಯೊಂದಿಗೆ ಅವರು ಭಯೋತ್ಪಾದಕ ಕೃತ್ಯಗಳನ್ನು ಎಸಗಲು ಸಂಚು ರೂಪಿಸಿದ್ದರು ಎಂದು ಅದು ಹೇಳಿದೆ. ಈಗಾಗಲೆ ಸೆರೆಯಲ್ಲಿರುವವರ ಜೊತೆ ಸೇರಿ ಕಳೆದ 2022–2023ರ ಅವಧಿಯಲ್ಲಿ ಬಾಂಬ್ ತಯಾರಿಕೆ, ತರಬೇತಿ ಕಾರ್ಯಾಗಾರವನ್ನು ಸಹ ಆಯೋಜಿಸಿದ್ದರು ಪರೀಕ್ಷಿಸಲು ನಿಯಂತ್ರಿತ ಸ್ಫೋಟವನ್ನು ನಡೆಸಿದ್ದರು.

**ಪ್ರಸ್ತುತ ಅಬ್ದುಲ್ಲಾ ಫಯಾಜ್ ಶೇಖ್, ತಲ್ಲಾಖಾನ್ ಜೊತೆಗೆ, ಪ್ರಕರಣದಲ್ಲಿ ಬಂಧಿಸಲ್ಪಟ್ಟ ಇತರರನ್ನು ಮೊಹಮ್ಮದ್ ಇಮ್ರಾನ್ ಖಾನ್, ಮೊಹಮ್ಮದ್ ಯೂನಸ್ ಸಾಕಿ, ಅಬ್ದುಲ್ ಖಾದಿರ್ ಪಠಾಣ್, ಸಿಮಾಬ್ ನಾಸಿರುದ್ದೀನ್ ಕಾಜಿ, ಜುಲ್ಫಿಕರ್ ಅಲಿ ಬರೋಡಾವಾಲಾ, ಶಮಿಲ್ ನಾಚನ್, ಅಕಿಫ್ ನಾಚನ್ ಮತ್ತು ಶಹನವಾಜ್ ಅಲಂ ಎಂದು ಗುರುತಿಸಲಾಗಿದೆ ಎಂದು ತನಿಖಾ ಸಂಸ್ಥೆ ತಿಳಿಸಿದೆ.**

ಭಾರತದಲ್ಲಿ ಐಸಿಸ್ ಭಯೋತ್ಪಾದಕ ಯೋಜನೆಗಳನ್ನು ವಿಫಲಗೊಳಿಸುವ ಪ್ರಯತ್ನದಲ್ಲಿ ಅದರ ಚಟುವಟಿಕೆಗಳನ್ನು ಸಕ್ರಿಯವಾಗಿ ತನಿಖೆ ನಡೆಸುತ್ತಿರುವ ಎನ್‌ಐಎ, ಈ ಹಿಂದೆ ಪ್ರಕರಣದ ಎಲ್ಲಾ 10 ಆರೋಪಿಗಳ ವಿರುದ್ಧ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ, ಸ್ಫೋಟಕ ವಸ್ತುಗಳ ಕಾಯ್ದೆ, ಶಸ್ತ್ರಾಸ್ತ್ರ ಕಾಯ್ದೆ, ಭಾರತೀಯ ದಂಡ ಸಂಹಿತೆಯ ವಿವಿಧ ವಿಭಾಗಗಳ ಅಡಿಯಲ್ಲಿ ಆರೋಪ ಪಟ್ಟಿ ಸಲ್ಲಿಸಿತ್ತು.

# ಒಡಿಶಾದಲ್ಲಿ ಸಿಡಿಲು ಬಡಿದು 9 ಮಂದಿ ಸಾವು

**ಭುವನೇಶ್ವರ:** ಒಡಿಶಾ ರಾಜ್ಯದಲ್ಲಿ ಭಾರಿ ಮಳೆ ಮತ್ತು ಗುಡುಗು ಸಹಿತ ಸಿಡಿಲು ಬಡಿತದ ಘಟನೆಗಳಲ್ಲಿ ಆರು ಮಹಿಳೆಯರು ಸೇರಿದಂತೆ ಕನಿಷ್ಠ ಒಂಬತ್ತು ಮಂದಿ ಸಾವನ್ನಪ್ಪಿದ್ದಾರೆ. ಕೊರಾಪುಟ್ ಜಿಲ್ಲೆಯಲ್ಲಿ ಮೂವರು, ಜಾಜ್ ಪುರ, ಗಂಜಾಂ ಜಿಲ್ಲೆಗಳಲ್ಲಿ ತಲಾ ಇಬ್ಬರು, ಧೆಂಕನಲ್, ಗಜಪತಿ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವನ್ನಪ್ಪಿದ್ದಾರೆ, ಕೆಲವರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೊರಾಪುಟ್ ಜಿಲ್ಲೆಯ ಲಕ್ಷ್ಮಿಪುರ ಪೊಲೀಸ್ ಠಾಣೆ ಪ್ರದೇಶದ ಪರಿಡಿಗುಡ ಗ್ರಾಮದಲ್ಲಿ ಸಿಡಿಲು ಬಡಿದು ಮೂವರು ಮಹಿಳೆಯರು ಸಾವನ್ನಪ್ಪಿದ್ದಾರೆ ಮತ್ತು ವೃದ್ಧರೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ. ಮೂಲಗಳ ಪ್ರಕಾರ, ಒಂದೇ ಕುಟುಂಬದ ಸದಸ್ಯರಾಗಿದ್ದ ಇವರು ಭಾರೀ ಮಳೆ ನಡುವೆ ಹೊಲಗಳಲ್ಲಿ ಕೆಲಸ ಮಾಡುವಾಗ ತಾತ್ಕಾಲಿಕ ಗುಡಿಸಲಿನಲ್ಲಿ ಆಶ್ರಯ ಪಡೆದಿದ್ದರು. ಈ ವೇಳೆ ಗುಡಿಸಲಿಗೆ ಸಿಡಿಲು ಬಡಿದು ಮೂವರು ಮಹಿಳೆಯರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೃತರನ್ನು ಕುಂಭಾರ್ಗುಡ ಗ್ರಾಮದ ಬೂಧಿ ಮಂದಿಂಗಾ (60), ಅವರ ಮೊಮ್ಮಗಳು ಕಾಸಾ ಮಂದಿಂಗಾ (18), ಅಂಬಿಕಾ ಕಾಶಿ (35) ಎಂದು ಗುರುತಿಸಲಾಗಿದೆ. ಬೂಧಿ, ಕಾಸಾ ಮಂದಿಂಗಾ ಪರಿಡಿಗುಡ ನಿವಾಸಿಗಳಾಗಿದ್ದರು ಎಂದು ಅವರು ಹೇಳಿದರು. ಅಲ್ಲಿ ಅವರು ಪ್ರಸ್ತುತ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಅಧಿಕಾರಿ ಹೇಳಿದರು. ಹೆಂಬ್ರಮ್ (15), ತುಕುಲು ಚರ್ತ (12) ಎಂದು ಗುರುತಿಸಲಾಗಿದೆ ಎಂದು ಅವರು ಹೇಳಿದರು.

ಹಿಂಗು ಮಂದಿಂಗಾ ಎಂದು ಗುರುತಿಸಲಾದ 65 ವರ್ಷದ ಮತ್ತೊಬ್ಬ ವ್ಯಕ್ತಿ ಗಂಭೀರ ಗಾಯಗೊಂಡಿದ್ದು, ಅವರನ್ನು ಲಕ್ಷ್ಮಿ ಪುರ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು.



ಜಜ್‌ಪುರ ಜಿಲ್ಲೆಯಲ್ಲಿ ಧರ್ಮಸಾಲಾ ಪ್ರದೇಶದಲ್ಲಿ ಡಿಲು ಬಡಿದು ಇಬ್ಬರು ಬಾಲಕರು ಸಾವನ್ನಪ್ಪಿದ್ದಾರೆ. ಮೃತರನ್ನು ಜೆನಾಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬುರುಸಾಹಿ ಗ್ರಾಮದ ತಾರೆ ಗ್ರಾಮಸ್ಥರ ಪ್ರಕಾರ, ನಿನ್ನೆ ಸಂಜೆ ಪ್ರದೇಶದಲ್ಲಿ ಗುಡುಗು ಸಹಿತ ಮಳೆಯಾದಾಗ ಈ ಇಬ್ಬರು ಕುಚ್ಚಾ ಮನೆಯ ವರಾಂಡಾದಲ್ಲಿ ನಿಂತಿದ್ದರು. ಮಳೆಯ ಸಮಯದಲ್ಲಿ ಸಿಡಿಲು ಬಡಿದು ಅವರು ಸ್ಥಳದಲ್ಲೇ ಸಾವನ್ನಪ್ಪಿದರು. ಪೊಲೀಸರು ಶವಗಳನ್ನು ಶವಪರೀಕ್ಷೆಗಾಗಿ ಆಸ್ಪತ್ರೆಗೆ ಕಳು ಹಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಅಸ್ವಾಭಾ ವಿಕ ಸಾವು ಪ್ರಕರಣ ದಾಖಲಿಸಲಾಗಿದ್ದು, ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು

**ಇಲಾಖೆ ರೆಡ್ ಅಲರ್ಟ್**

**ಕೊರಾಪುಟ್, ಕಟಕ್, ಖುರ್ದಾ, ನಯಾಗಢ, ಜಾಜ್ ಪುರ, ಬಾಲಸೋರ್ ಮತ್ತು ಗಂಜಾಂ ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿ ಮಧ್ಯಾಹ್ನ ಗುಡುಗು ಸಹಿತ ಮಳೆ, ಮಿಂಚು ಮತ್ತು ಆಲಿಕಲ್ಲು ಸಹಿತ ಮಳೆ ಮತ್ತು ಗಂಟೆಗೆ 60 ರಿಂದ 70 ಕಿ.ಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ರೆಡ್ ಅಲರ್ಟ್ ನೀಡಿತ್ತು.**

ಇದಲ್ಲದೆ ಗಂಜಾಂ ಜಿಲ್ಲೆಯಲ್ಲಿ, ಕಬಿಸೂರ್ಯನಗರ ತಹಸಿಲ್‌ನ ಬರಿಡಾ ಗ್ರಾಮದಲ್ಲಿ ಓಂ ಪ್ರಕಾಶ್ ಪ್ರಧಾನ್ ಎಂದು ಗುರುತಿಸಲಾದ 7ನೇ ತರಗತಿಯ ವಿದ್ಯಾರ್ಥಿ ಸಿಡಿಲು ಬಡಿದು ಸಾವನ್ನ ಪ್ಪಿದ್ದಾನೆ. ಧೆಂಕನಾಲ್‌ನಲ್ಲಿ, ದಾಶಿಪುರ ಪಂಚಾಯತ್ ವ್ಯಾಪ್ತಿಯ ಕುಸುಮುಂಡಿಯಾ ಗ್ರಾಮದಲ್ಲಿ ಸುರುಷಿ ಬಿಟ್ಟಾಲ್ (40) ಎಂದು ಗುರುತಿಸಲಾದ ಮಹಿಳೆ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ. ಬೆಳಗುಂತ ಪ್ರದೇಶದ ತೋಟದಿಂದ ಮಾವಿನ ಹಣ್ಣುಗಳನ್ನು ಸಂಗ್ರಹಿಸುತ್ತಿದ್ದಾಗ 23 ವರ್ಷದ ಮಹಿಳೆಯೊಬ್ಬರು ಇದೇ ರೀತಿಯ ಘಟನೆಯಲ್ಲಿ ಸಾವನ್ನಪ್ಪಿದ್ದಾರೆ. ಗಜಪತಿಯ ಮೋಹನ ಪ್ರದೇಶದಲ್ಲಿ ಟ್ರ್ಯಾಕ್ಟರ್‌ಟ್ರೇಲರ್‌ನಿಂದ ಇಟ್ಟಿಗೆಗಳನ್ನು ಇಳಿಸುತ್ತಿದ್ದಾಗ ಸಿಡಿಲು ಬಡಿದು ಮಹಿಳೆಯೊಬ್ಬರು ಸಾವನ್ನಪ್ಪಿದ್ದಾರೆ.

## ರಷ್ಯಾ ಸೇನೆ ಹಕ್ಕು ಸಾಧಿಸಿರುವ ಪ್ರದೇಶಗಳಿಂದ ತೆರಳುವಂತೆ ತಾಕೀತು

**ಟರ್ಕಿ:** ರಷ್ಯಾ ಸೇನೆ ಹಕ್ಕು ಸಾಧಿಸಿರುವ ಎಲ್ಲ ಪ್ರದೇಶಗಳಿಂದ ಉಕ್ರೇನ್ ಪಡೆಗಳು ಸಂಪೂರ್ಣ ವಾಪಸ್ ಆಗಬೇಕು. ರಷ್ಯಾ–ಉಕ್ರೇನ್ ಸಂಘರ್ಷ ಸಂಬಂಧ ಟರ್ಕಿಯ ಇಸ್ತಾಂಬುಲ್‌ನಲ್ಲಿ ಶುಕ್ರವಾರ ನಡೆದ ಶಾಂತಿ ಸಭೆಯಲ್ಲಿ ಕದನ ವಿರಾಮಕ್ಕೆ ಒಪ್ಪುವ ಮುನ್ನ ರಷ್ಯಾ ನಿಯೋಗ ಈ ರೀತಿಯ ಬೇಡಿಕೆ ಇಟ್ಟಿದೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ಈ ಬೇಡಿಕೆಯು, ಮಾಸ್ಕೊ ಜೊತೆಗಿನ ಸಮಾಲೋಚನೆ ಬಳಿಕ ಅಮೆರಿಕ ಕಳೆದ ತಿಂಗಳು ಸಿದ್ಧಪಡಿಸಿದ್ದ ಶಾಂತಿ ಒಪ್ಪಂದದ ಕರಡಿನಲ್ಲಿನ ನಿಯಮಗಳನ್ನ ಮೀರಿದ್ದಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಉಕ್ರೇನ್‌ನ ಡೊನೆಟ್ಸ್, ಜಪೊರಿಝ್ಝಿಯಾನ್, ಖೆರ್ಸಾನ್, ಲುಹಾನ್ಸ್ಕ್ ಪ್ರದೇಶಗಳಿಂದ ಸೇನೆಯನ್ನು ಹಿಂಪಡೆದರಷ್ಟೇ ಕದನ ವಿರಾಮ ಮಾತುಕತೆ ಸಾಧ್ಯ ಎಂಬ ಷರತ್ತನ್ನು ರಷ್ಯಾ ವಿಧಿಸಿದೆ. ಈ ಪ್ರದೇಶಗಳು ರಷ್ಯಾ ಸೇನೆಯ ನಿಯಂತ್ರಣದಲ್ಲಿದ್ದರೂ, ಉಕ್ರೇನ್ ಪಡೆಗಳು ಹೋರಾಟ ಮುಂದುವರಿಸಿವೆ. ಈ ರೀತಿಯ ಯಾವುದೇ ಬೇಡಿಕೆ ಅಮೆರಿಕ ಸಿದ್ಧಪಡಿಸಿರುವ ಶಾಂತಿ ಒಪ್ಪಂದದ ಕರಡಿನಲ್ಲಿ ಇಲ್ಲ. ಇದಷ್ಟೇ ಅಲ್ಲದೆ, ಮತ್ತಷ್ಟು ಷರತ್ತುಗಳನ್ನು ವಿಧಿಸಲಾಗಿದೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ. ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ಅವರನ್ನು ಉಕ್ರೇನ್ ಉಲ್ಲೇಖಿಸಿರುವ ಷರತ್ತುಗಳ ಬಗ್ಗೆ ಶನಿವಾರ ಮಾಧ್ಯಮದವರು ಪ್ರಶ್ನಿಸಿದ್ದರು. ಆದರೆ, ಪ್ರತಿಕ್ರಿಯಿಸಲು ನಿರಾಕರಿಸಿದ ಡಿಮಿಟ್ರಿ, ಆ ಚರ್ಚೆಗಳು ಗೋಪ್ಯವಾಗಿರಬೇಕು ಎಂದಷ್ಟೇ ಹೇಳಿದ್ದಾರೆ.

**ಕದನ ವಿರಾಮ ಮಾತುಕತೆ ಸಾಧ್ಯ**



**ಕದನ ವಿರಾಮ ಘೋಷಣೆ ಸಾಧ್ಯವಾಗಿಲ್ಲ**

**ಮೂರು ವರ್ಷಗಳ ಹಿಂದೆ ಸಂಘರ್ಷ ಆರಂಭವಾದ ನಂತರ ಉಭಯ ರಾಷ್ಟ್ರಗಳ ನಡುವೆ ನಡೆದ ಮೊದಲ ನೇರ ಮಾತುಕತೆ ಇದಾಗಿದೆ. ಈ ವೇಳೆ, ಕೈದಿಗಳ ಹಸ್ತಾಂತರ ಒಪ್ಪಂದಕ್ಕೆ ಬರಲಾಗಿದೆಯಾದರೂ, ಕದನ ವಿರಾಮ ಘೋಷಣೆ ಸಾಧ್ಯವಾಗಿಲ್ಲ. ಕಾರ್ಯಸಾಧ್ಯವಾಗದ ಷರತ್ತುಗಳನ್ನು ರಷ್ಯಾ ವಿಧಿಸಿತ್ತು ಎಂದು ಉಕ್ರೇನ್ ಮೂಲಗಳು ತಿಳಿಸಿವೆ.**

## ಎಸ್-500 ಬಂದರೆ ಭಾರತವನ್ನು ಟಚ್ ಮಾಡೋಕೆ ಆಗಲ್ಲ

**ನವದೆಹಲಿ:** ಭಾರತದ ಸೇನಾ ಬತ್ತಳಿಕೆಗೆ ಶೀಘ್ರದಲ್ಲೇ ಎಸ್–500 ಸೇರ್ಪಡೆಯಾಗುವ ಸಾಧ್ಯತೆ ಇದೆ. ಒಂದು ವೇಳೆ ಈ ಅಸ್ತ್ರ ಸೇನೆಗೆ ಬಂದರೆ ವಿಶ್ವದಲ್ಲಿ ನಮ್ಮನ್ನು ಯಾರು ಏನು ಮಾಡಲು ಸಾಧ್ಯವಾಗುವುದಿಲ್ಲ ಎಂದು ರಕ್ಷಣಾ ಕ್ಷೇತ್ರದ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಆಪರೇಷನ್ ಸಿಂಧೂರ ಕಾರ್ಯಾಚರಣೆಯಲ್ಲಿ ಭಾರತದ ಸೇನಾ ಸಾಮರ್ಥ್ಯ ಕಂಡು ಇಡೀ ಜಗತ್ತೇ ಅಚ್ಚರಿ ಗೊಂಡಿದೆ. ಹೀಗಾಗಿ ಭಾರತದ ಶಸ್ತ್ರಾಸ್ತ್ರಗಳಿಗೆ ಬೇಡಿಕೆ ಹೆಚ್ಚಾಗಿದೆ. ಈ ನಡುವೆ ಭಾರತದ ರಕ್ಷಣಾ ವ್ಯವಸ್ಥೆ ಇನ್ನಷ್ಟು ಬಲಿಷ್ಠವಾಗುತ್ತಿರುವ ಬಗ್ಗೆ ರಕ್ಷಣಾ ಕ್ಷೇತ್ರದ ವಿಶ್ಲೇಷಕರು ಮಾಹಿತಿ ನೀಡಿದ್ದಾರೆ.

ಸದ್ಯ ಇಸ್ರೇಲ್‌ನ ಐರನ್ ಡೋಮ್, ರಷ್ಯಾದ–400. ಅಮೆರಿಕ ಅಭಿವೃದ್ಧಿ ಪಡಿಸಿರುವ ಥಾಡ್ ಏರ್ ಡಿಫೆನ್ಸ್ ಸಿಸ್ಟಂ, ಡೇವಿಡ್ ಸಿಲ್ಲಿಂಗ್ ಏರ್ ಡಿಫೆನ್ಸ್ ಸಿಸ್ಟಂ ಜಗತ್ತಿನ ಶಕ್ತಿಶಾಲಿ ವಾಯುರಕ್ಷಣಾ ವ್ಯವಸ್ಥೆಗಳಾಗಿ ಗುರುತಿಸಿಕೊಂಡಿವೆ. ಆದ್ರೆ ಎಸ್–500 ಏರ್ ಡಿಫೆನ್ಸ್ ಸಿಸ್ಟಂ ಭಾರತಕ್ಕೆ ಬಂದರೆ ಜಗತ್ತಿನಲ್ಲಿ ಭಾರತದ ಸೇನಾ ಶಕ್ತಿ ಮತ್ತಷ್ಟು ಬಲಿಷ್ಠವಾಗಲಿದೆ. ಜೊತೆಗೆ ಅಮೆರಿಕ, ರಷ್ಯಾ ದೇಶಗಳ ವಾಯುರಕ್ಷಣಾ ವ್ಯವಸ್ಥೆಯನ್ನೂ ಹಿಂದಿಕ್ಕಲಿದೆ ಎಂದು ಅಂದಾಜಿಸಲಾಗಿದೆ. ಎಸ್–500 ರಕ್ಷಣಾ ವ್ಯವಸ್ಥೆಯು ಎಸ್–400ನ ಮುಂದುವರಿದ ಭಾಗವಾಗಿದೆ. 600 ಕಿಮೀ ದೂರದಿಂದಲೇ ಶತ್ರುಗಳ ಡ್ರೋನ್, ಫೈಟರ್ ಜೆಟ್, ಮಿಸೈಲ್‌ಗಳನ್ನ ಹೊಡೆದುರುಳಿಸುವ ಸಾಮರ್ಥ್ಯ ಹೊಂದಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.



**ಆಪರೇಷನ್ ಸಿಂಧೂರದ ಕಾರ್ಯಾಚರಣೆ ವೇಳೆ ಪಾಕ್‌ನಿಂದ ಬರುತ್ತಿದ್ದ ಕ್ಷಿಪಣಿಗಳನ್ನು ಧ್ವಂಸಗೈದು ಭಾರತವನ್ನು ರಕ್ಷಿಸಿದ್ದ ಎಸ್–400 ವಾಯು ರಕ್ಷಣಾ ಕ್ಷಿಪಣಿಗೆ ಬೇಡಿಕೆ ಹೆಚ್ಚಾಗಿದೆ. ಪಾಕ್ ನಡುವಿನ ಸಂಘರ್ಷದಲ್ಲಿ ಇದರ ಪ್ರಯೋಗ ಯಶಸ್ವಿಯಾದ ಬೆನ್ನಲ್ಲೇ ಭಾರತ ಮತ್ತಷ್ಟು ಎಸ್–400 ವಾಯು ರಕ್ಷಣಾ ಕ್ಷಿಪಣಿಗೆ ಬೇಡಿಕೆಯಿಟ್ಟಿದೆ ಎಂದು ವರದಿಗಳು ತಿಳಿಸಿವೆ.**

# ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರದ ಪಟ್ಟಿಗೆ ಸೇರಿಸಿ

### ಯುಎಪಿಎ ಕಾಯ್ದೆಗೆ ತಿದ್ದುಪಡಿ ತರಲು ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಒತ್ತಾಯ

**ಹೊಸದಿಲ್ಲಿ:** ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಯುಎಪಿಎ ಕಾಯ್ದೆಗೆ ತಿದ್ದುಪಡಿ ತರಲು ಒತ್ತಾಯಿದ್ದು, ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವೆಂದು ಘೋಷಿಸುವಂತೆ ಸಲಹೆ ನೀಡಿದ್ದಾರೆ. ಇದೇ ವೇಳೆ ಪ್ರಧಾನಿ ಮನಮೋಹನ್ ಸಿಂಗ್ ಅಧಿಕಾರಾ ವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿಗಳು ಕಡಿಮೆಯಾಗಿದ್ದವು ಎಂದು ಹೇಳಿದ್ದಾರೆ. ಕಪಿಲ್ ಸಿಬಲ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಮ್ಮ ವಿದೇಶಾಂಗ ನೀತಿಯು ಪಾಕಿಸ್ತಾನ ಭಯೋತ್ಪಾದನೆಯ ಕಾರ್ಖಾನೆ ಎಂಬ ಅಂಶದ ಮೇಲೆ ಕೇಂದ್ರೀಕರಿಸಬೇಕು ಎಂದು ಹೇಳಿದರು. ಯುಎನ್‌ನಲ್ಲಿ ಒಂದು ತಿದ್ದುಪಡಿ ತರಬೇಕು. ಅದರಲ್ಲಿ ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವೆಂದು ಘೋಷಿಸಬೇಕು ಎಂದು ಸಲಹೆ ನೀಡಿದರು. ನೀವು ಅವರೊಂದಿಗೆ ವ್ಯಾಪಾರ ಮಾಡುತ್ತಿದ್ದೀರಿ. ಆದರೆ, ಈ ಭಯೋತ್ಪಾದನೆಯನ್ನು ನಿಲ್ಲಿಸುವಂತೆ ಏಕೆ ಹೇಳುವುದಿಲ್ಲ? ಇದು ಜಗತ್ತಿಗೆ ಒಳ್ಳೆಯದು. ನಮ್ಮ ಪ್ರಗತಿಗೆ ಒಳ್ಳೆಯದು. ಇದು ಪಾಕಿಸ್ತಾನದ ಜನರನ್ನು ಹುರಿದುಂಬಿಸುತ್ತದೆ.


- **ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವೆಂದು ಘೋಷಿಸಲು ಸಲಹೆ**
- **ಭಯೋತ್ಪಾದನೆ ನಿಂತರ ಜಗತ್ತಿಗೆ ಒಳ್ಳೆಯದು ಎಂದ ಕಪಿಲ್ ಸಿಬಲ್**

ಕಾಶ್ಮೀರದ ಜನರಿಗೂ ಇದು ಪ್ರಯೋಜನವನ್ನು ನೀಡುತ್ತದೆ. ಸಾಮಾನ್ಯ ನಾಗರಿಕರು ಬಲಿಪಶುಗಳಾಗುವುದಿಲ್ಲ. ಆದ್ದರಿಂದ ವಿದೇಶಾಂಗ ನೀತಿಯು ಇದರ ಮೇಲೆ ಕೇಂದ್ರೀಕರಿಸಬೇಕು ಎಂದು ಒತ್ತಾಯಿಸಿದರು.

ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅಧಿಕಾರಾವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿಗಳು ಕಡಿಮೆಯಾಗಿದ್ದವು. 26/11ರ ಮುಂಬಯಿ ದಾಳಿಯ ನಂತರ, ಆಗಿನ ಪ್ರಧಾನಿ ಮನಮೋಹನ್ ಸಿಂಗ್ ವಿವಿಧ ದೇಶಗಳಿಗೆ ನಿಯೋಗಗಳನ್ನು ಕಳುಹಿಸಲು ನಿರ್ಧರಿಸಿದರು. ಪಾಕಿಸ್ತಾನ ಭಯೋತ್ಪಾದಕ ರಾಷ್ಟ್ರ ಎಂದು ಜಗತ್ತಿಗೆ ತೋರಿಸಲು ಈ ನಿರ್ಧಾರ ಕೈಗೊಳ್ಳಲಾಗಿತ್ತು. ಪಾಕಿಸ್ತಾನ ಭಯೋತ್ಪಾದನೆಯನ್ನು ಉತ್ಪಾದಿಸುವ ಕಾರ್ಖಾನೆ ಎಂಬ ವಾತಾವರಣವನ್ನು ಜಗತ್ತಿನಲ್ಲಿ ಸೃಷ್ಟಿಸಲಾಯಿತು ಎಂದು ಸಿಬಲ್ ಹೇಳಿದರು. 2014 ರಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಭಯೋತ್ಪಾದಕ ದಾಳಿಗಳು ನಂತರದ ವರ್ಷಗಳಿಗಿಂತ ಕಡಿಮೆ ಇದ್ದವು ಎಂದು ತಿಳಿಸಿದರು. ಭಾರತ – ಪಾಕಿಸ್ತಾನ ಕದನ ವಿರಾಮದ ನಂತರ, ಸರ್ವಪಕ್ಷ ನಿಯೋಗವು ವಿವಿಧ ದೇಶಗಳಿಗೆ ಭೇಟಿ ನೀಡಬೇಕೆಂದು ನಾನು ಒತ್ತಾಯಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರು ವಿರೋಧ ಪಕ್ಷದ ಬೇಡಿಕೆಯನ್ನು ಆಲಿಸಿದ್ದಕ್ಕೆ ನನಗೆ ತುಂಬಾ ಸಂತೋಷವಾಗಿದೆ. ನಮ್ಮ ಸಲಹೆಯನ್ನು ಪರಿಗಣಿಸಿದರೆ, ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಒಟ್ಟಿಗೆ ತಲುಪಬಹುದು ಎಂದು ನಾನು ಯಾವಾಗಲೂ ಹೇಳುತ್ತೇನೆ ಎಂದು ಹೇಳಿದರು.

**ನಮ್ಮ ಪ್ರಗತಿಗೆ ಒಳ್ಳೆಯದು**

**ರಾಜ್ಯಸಭಾ ಸಂಸದ ಕಪಿಲ್ ಸಿಬಲ್ ಯುಎಪಿಎ ಕಾಯ್ದೆಗೆ ತಿದ್ದುಪಡಿ ತರಲು ಒತ್ತಾಯಿದ್ದು, ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರವೆಂದು ಘೋಷಿಸುವಂತೆ ಸಲಹೆ ನೀಡಿದ್ದಾರೆ. ಇದೇ ವೇಳೆ ಪ್ರಧಾನಿ ಮನಮೋಹನ್ ಸಿಂಗ್ ಅಧಿಕಾರಾವಧಿಯಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿಗಳು ಕಡಿಮೆಯಾಗಿದ್ದವು ಎಂದು ಹೇಳಿದ್ದಾರೆ. ಕಪಿಲ್ ಸಿಬಲ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ನಮ್ಮ ವಿದೇಶಾಂಗ ನೀತಿಯು ಪಾಕಿಸ್ತಾನ ಭಯೋತ್ಪಾದನೆಯ ಕಾರ್ಖಾನೆ ಎಂಬ ಅಂಶದ ಮೇಲೆ ಕೇಂದ್ರೀಕರಿಸಬೇಕು. ಭಯೋತ್ಪಾದನೆಯನ್ನು ನಿಲ್ಲಿಸುವಂತೆ ಪಾಕಿಸ್ತಾನಕ್ಕೆ ಹೇಳಬೇಕು. ಇದರಿಂದ ಜಗತ್ತಿಗೆ ಒಳ್ಳೆಯದಾಗಲಿದೆ ಎಂದು ಹೇಳಿದರು.**



**ಸರ್ವಪಕ್ಷ ಸಂಸದರ ನಿಯೋಗಗಳಿಂದ ವಿದೇಶಗಳಿಗೆ ಭೇಟಿ:** ಉಗ್ರರಿಗೆ ಬೆಂಬಲ ನೀಡುತ್ತಿರುವ ಪಾಕಿಸ್ತಾನದ ವಿರುದ್ಧ ಜಾಗತಿಕ ಮಟ್ಟದಲ್ಲಿ ಬೆಂಬಲ ಪಡೆಯಲು ಭಾರತವು ರಾಜತಾಂತ್ರಿಕ ಅಭಿಯಾನ ನಡೆಸಲು ಮುಂದಾಗಿದೆ. ಆಪರೇಷನ್ ಸಿಂಧೂರ ಕಾರ್ಯಾ ಚರಣೆಯ ಕುರಿತು ವಿದೇಶಗಳಿಗೆ ಮಾಹಿತಿ ನೀಡಿ, ಆ ಮೂಲಕ ಪಾಕಿಸ್ತಾನದ ಕುತಂತ್ರವನ್ನು ಜಗತ್ತಿನ ಮುಂದೆ ತೆರೆದಿ ಡಲು ಸರ್ವ ಪಕ್ಷಗಳ ಸಂಸದರ ನಿಯೋಗಗಳನ್ನು ವಿದೇಶಗಳಿಗೆ ಕಳುಹಿಸಲು ಕೇಂದ್ರ ಸರಕಾರ ಮುಂದಾಗಿದೆ. ಈ ಸಂಬಂಧ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ವಿವಿಧ ಪಕ್ಷಗಳ ಸಂಸದರ ಜತೆ ಮಾತುಕತೆ ನಡೆಸುತ್ತಿದ್ದು, ಮೇ 22ರಿಂದ ನಿಯೋಗಗಳು ವಿದೇಶಗಳಿಗೆ ಪ್ರಯಾಣ ಬೆಳೆಸಲಿವೆ ಎಂದು ಮೂಲಗಳು ಹೇಳಿವೆ.

5–6 ಸಂಸದರು ಇರುವ ಪ್ರತಿಯೊಂದು ನಿಯೋಗಗಳು ಅಮೆರಿಕ, ಬ್ರಿಟನ್, ದಕ್ಷಿಣ ಆಫ್ರಿಕಾ, ಕತಾರ್, ಯುಎಇ ಸೇರಿದಂತೆ ವಿವಿಧ ದೇಶಗಳಿಗೆ ಭೇಟಿ ನೀಡಲಿದ್ದು, ಅಲ್ಲಿನ ಉನ್ನತ ಅಧಿಕಾರಿಗಳಿಗೊಂದಿಗೆ ಮಾತುಕತೆ ನಡೆಸಿ ಅಂತಾರಾಷ್ಟ್ರೀಯ ಬೆಂಬಲವನ್ನು ಪಡೆಯಲಿದೆ. ಆಪರೇಷನ್ ಸಿಂಧೂರದ ಹಿಂದೆ ಭಾರತದ ತಾರ್ಕಿಕತೆ ಪ್ರಸ್ತುತಪಡಿಸುವುದು, ಪಾಕ್ ಪ್ರಾಯೋಜಿತ ಭಯೋತ್ಪಾದನೆಯ ವಿರುದ್ಧ ಅಂತಾರಾಷ್ಟ್ರೀಯ ಬೆಂಬಲವನ್ನು ಕ್ರೋಢೀಕರಿಸುವುದು ಇದರ ಉದ್ದೇಶವಾಗಿದೆ ಎಂದು ಮೂಲಗಳು ಹೇಳಿವೆ.

## ಮಿನಿ ನ್ಯೂಸ್

### ಅಸ್ಸಾಂನಲ್ಲಿ 1500 ಕೆಜಿ ಡ್ರಗ್ಸ್ ವಶ

**ಗುವಾಹಟಿ:** ಅಸ್ಸಾಂ ಪೊಲೀಸರು ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಸುಮಾರು 1,500 ಕೆಜಿ ನಿಷಿದ್ಧ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ತಿಳಿಸಿದ್ದಾರೆ. ಎಕ್ಸ್‌ನಲ್ಲಿ ಎರಡು ಪ್ರಮುಖ ಬಂಧನಗಳ ವಿವರಗಳನ್ನು ಹಂಚಿಕೊಂಡ ಶರ್ಮಾ, ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ, 3 ಕೋಟಿ ರೂ. ಮೌಲ್ಯದ 512.58 ಗ್ರಾಂ ಹೆರಾಯಿನ್ ಅನ್ನು ವಶಪಡಿಸಿಕೊಂಡಿದೆ. 3 ಜನರನ್ನು ಬಂಧಿಸಿದೆ ಎಂದು ಹೇಳಿದರು.

ಕೊಕ್ರಜಾರ್ ಪೊಲೀಸರು ನಡೆಸಿದ ಮತ್ತೊಂದು ಕಾರ್ಯಾಚರಣೆಯಲ್ಲಿ, 963.19 ಕೆಜಿ ಗಾಂಜಾವನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು. ಮಾದಕ ವಸ್ತುಗಳ ವಿರುದ್ಧ ನಮ್ಮ ನಿರಂತರ ಅನ್ವೇಷಣೆ ಮುಂದುವರಿಯುತ್ತದೆ ಎಂದು ಮುಖ್ಯಮಂತ್ರಿ ಹೇಳಿದರು.

### ಟ್ರ್ಯಾಕ್ಟರ್‌ಗೆ ಬಸ್ ಡಿಕ್ಕಿ : ತಮಿಳುನಾಡಿನಲ್ಲಿ ಭೀಕರ ಅಪಘಾತಕ್ಕೆ ನಾಲ್ವರು ಬಲಿ

**ಕರೂರ್:** ತಮಿಳುನಾಡಿನ ಕರೂರ್ ಜಿಲ್ಲೆಯ ಸೆಮ್ಮ ಡೈ ಬಳಿ ಓಮ್ನಿ ಬಸ್ ಒಂದು ಟ್ರ್ಯಾಕ್ಟರ್‌ಗೆ ಡಿಕ್ಕಿ ಹೊಡೆದು ಸಂಭವಿಸಿದ ಭೀಕರ ಅಪ ಘಾತದಲ್ಲಿ ನಾಲ್ವರು ಸಾವನ್ನಪ್ಪಿ, ಇತರ 15 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಓಮ್ನಿ ಬಸ್ ಮೊದಲು ಮೀಡಿಯನ್‌ಗೆ ಡಿಕ್ಕಿ ಹೊಡೆದು. ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿದ್ದ ಪ್ರವಾಸಿ ವ್ಯಾನ್‌ಗೆ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರಲ್ಲಿ ವ್ಯಾನ್ ಚಾಲಕ ಕೂಡ ಸೇರಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ, ಗಾಯಾಳುಗಳನ್ನು ಚಿಕಿತ್ಸೆಗಾಗಿ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬೆಂಗಳೂರಿನಿಂದ ನಾಗರಕೋಯಿಲ್‌ಗೆ ಹೋಗುತ್ತಿದ್ದ ಓಮ್ನಿ ಬಸ್ ಕರೂರ್ ಸೇಲಂ ಹೆದ್ದಾರಿಯಲ್ಲಿ ಟ್ರ್ಯಾಕ್ಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ, ವಾಹನವು ಬಲಕ್ಕೆ ತಿರುಗಿ ಮೀಡಿಯನ್ ಅನ್ನು ಡಿಕ್ಕಿ ಹೊಡೆದು ತೂತುಕುಡಿಯಿಂದ ಬರುತ್ತಿದ್ದ ಪ್ರವಾಸಿ ವ್ಯಾನ್‌ಗೆ ಡಿಕ್ಕಿ ಹೊಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಡಿಕ್ಕಿಯ ಪರಿಣಾಮ ಓಮ್ನಿ ಬಸ್, ಟ್ರ್ಯಾಕ್ಟರ್, ವ್ಯಾನ್‌ನ ಮುಂಭಾಗವು ಹಾನಿ ಗೊಳಗಾಗಿದೆ.ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರೆದಿದೆ.

### ಜಾರ್ಖಂಡ್‌ನಲ್ಲಿ ಇಬ್ಬರು ಮಾವೋವಾದಿಗಳ ಬಂಧನ

**ರಾಂಚಿ:** ಮಾವೋವಾದಿ ವಿಭಜನೆ ಗುಂಪಾದ ತೃತೀಯಾ ಸಮ್ಮೇಳನ ಪ್ರಸ್ತುತಿ ಸಮಿತಿಯ ಉಪ–ವಲಯ ಕಮಾಂಡರ್ ಸೇರಿದಂತೆ ಇಬ್ಬರು ಸದಸ್ಯರನ್ನು ಜಾರ್ಖಂಡ್‌ನ ರಾಂಚಿ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಮಾವೋವಾದಿಗಳನ್ನು ಟಿಎಸ್‌ಪಿಸಿ ಉಪ–ವಲಯ ಕಮಾಂಡರ್ ದಿವಾಕರ್ ಗಂಜು ಅಲಿಯಾಸ್ ಪ್ರತಾಪ್ ಜಿ ಮತ್ತು ಸಂಘಟನೆಯ ಸಕ್ರಿಯ ಸದಸ್ಯ ಅಕ್ಷಯ್ ಗಂಜು ಎಂದು ಗುರುತಿಸಲಾಗಿದೆ.

ಬರ್ಮು ಪೊಲೀಸ್ ಠಾಣೆ ವ್ಯಾಪ್ತಿಯ ಚೈಂಗಹರ್, ಗಮ್ಹರಿಯಾ ನಡುವಿನ ಅರಣ್ಯ ಪ್ರದೇಶದಿಂದ ಅವರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದರು. ಬಂಧಿತರಿಂದ ಎರಡು ಪಿಸ್ತೂಲ್‌ಗಳು, ಆರು ಲೈವ್ ಕಾರ್ಟ್ರಿಡ್ಜ್‌ಗಳು, ಟಿಎಸ್ ಪಿಸಿ ಕರಪತ್ರಗಳು, ಐದು ಮೊಬೈಲ್ ಫೋನ್‌ಗಳು, ನಾಲ್ಕು ಫೋನ್ ಚಾರ್ಜರ್‌ಗಳು, ಇತರ ವಸ್ತುಗಳನ್ನು ಅವರ ಬಳಿಯಿಂದ ವಶಪಡಿಸಿಕೊಳ್ಳಲಾಗಿದೆ.

ರಾಂಚಿಯ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಚಂದನ್ ಕುಮಾರ್ ಸಿನ್ಹಾ ಅವರು ಬರ್ಮು, ಉರಿಮರಿ, ಭುರ್ಕುಂಡ, ಪತರತು ಬಡ್ಗಾಂವ್, ಕೆರೆದಾರಿ ಪ್ರದೇಶಗಳಲ್ಲಿ ಕ್ರಷರ್ ಘಟಕದ ಮಾಲೀಕರು, ಇಟ್ಟಿಗೆ ಗೂಡು ನಿರ್ವಾಹಕರು, ಭೂ ವ್ಯಾಪಾರಿಗಳಿಂದ ಸುಲಿಗೆ ಮಾಡುವಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳಿದರು. ಬೆಂಕಿ ಹಚ್ಚುವಿಕೆ, ವಿಧ್ವಂಸಕ ಕೃತ್ಯ, ಗುಂಡು ಹಾರಿಸುವಿಕೆಗೆ ಸಂಬಂಧಿಸಿದ 18 ಪ್ರಕರಣಗಳಲ್ಲಿ ದಿವಾಕರ್ ಬೇಕಾಗಿದ್ದಾರೆ ಎಂದು ಅವರು ಹೇಳಿದರು.

### ಇಸ್ರೇಲ್ ದಾಳಿ: ಗಾಜಾದಲ್ಲಿ 24 ಗಂಟೆ ಅವಧಿಯಲ್ಲಿ 146 ಮಂದಿ ಸಾವು

**ಗಾಜಾ:** ಇಸ್ರೇಲ್ ಸೇನೆಯು ಗಾಜಾಪಟ್ಟಿ ಮೇಲೆ ದಾಳಿ ನಡೆಸಿದ್ದು, 24 ಗಂಟೆಗಳ ಅವಧಿಯಲ್ಲಿ ಕನಿಷ್ಠ 146 ಮಂದಿ ಮೃತಪಟ್ಟಿದ್ದು, 459 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ. ದೀರ್ ಅಲ್–ಬಲಾಹ್ನ ಹೊರ ವಲಯ, ಖಾನ್ ಯೂನಿಸ್ ನಗರ ವ್ಯಾಪ್ತಿಯಲ್ಲಿ ದಾಳಿಗಳು ನಡೆದಿದ್ದು, ಮೃತದೇಹಗಳನ್ನು ಇಂಡೊನೇಷಿಯನ್, ನಸ್ಸೆರ್ ಆಸ್ಪತ್ರೆಗೆ ಆಸ್ಪತ್ರೆಗೆ ಕರೆತರಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ದಾಳಿ ಕುರಿತು ಪ್ರತಿಕ್ರಿಯಿಸಿದ ಇಸ್ರೇಲ್, ಗಾಜಾದಲ್ಲಿರುವ ಬಂಡುಕೋರರನ್ನು ಗುರಿಯಾಗಿಸಿ ನಾವು ಕಾರ್ಯಾಚರಣೆ ಮುಂದುವರಿಸಿದ್ದೇವೆ. ಕ್ಷಿಪಣಿ ಪೋಸ್ಟ್‌ಗಳು, ಸೇನಾ ಮೂಲಸೌಕರ್ಯ ಸೇರಿ 150 ಕಟ್ಟಡಗಳನ್ನು ಗುರಿಯಾಗಿಸಿ ದಾಳಿ ನಡೆಸಿದ್ದೇವೆ. ಉತ್ತರ ಗಾಜಾದಲ್ಲಿ ಹಲವು ಬಂಡುಕೋರರನ್ನು ಹತ್ಯೆ ಮಾಡಿದ್ದೇವೆ ಎಂದಿದೆ. ಇಸ್ರೇಲ್ ದಾಳಿಯಿಂದಾಗಿ ಗಾಜಾಪಟ್ಟಿಯ ಹಲವೆಡೆ ದಟ್ಟ ಹೊಗೆ ಆವರಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕದನ ವಿರಾಮಕ್ಕೆ ನಾಂದಿ ಹಾಡಬಹುದು ಎಂಬ ನಿರೀಕ್ಷೆ ಇತ್ತು. ಆದರೆ, ಇಸ್ರೇಲ್ ಮಧ್ಯ ಪ್ರಾಚ್ಯದಿಂದ ದೂರ ಉಳಿದ ಕಾರಣ ನಿರೀಕ್ಷೆ ಹುಸಿಯಾಗಿದೆ.

### ಕಣಿವೆ ರಾಜ್ಯದಲ್ಲಿ ಅನುಮಾನಾಸ್ಪದ ವ್ಯಕ್ತಿಗಳ ಓಡಾಟ: ಭದ್ರತಾ ಪಡೆಗಳ ಶೋಧ



**ಜಮ್ಮು:** ಜಮ್ಮು, ಕಾಶ್ಮೀರದ ಸಾಂಬಾ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಮೂವರು ಶಂಕಿತ ಉಗ್ರರ ಚಲನವಲನಗಳು ಕಂಡು ಬಂದ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಆರಂಭಿಸಿವೆ ಎಂದು ಅಧಿಕಾರಿಗಳು ತಿಳಿಸಿದರು.

ಪೊಲೀಸ್, ಭದ್ರತಾ ಪಡೆಗಳ ಜಂಟಿ ತಂಡವು ನಂಗಲ್, ಚಿಲ್ಲಡಂಗಾ, ಗೋರನ್, ಸಮೀಪದ ಅರಣ್ಯ ಪ್ರದೇಶದ ಸುತ್ತಮುತ್ತ ಶವಿವಾರ ಬೆಳಿಗ್ಗೆಯಿಂದ ಸಂಪೂರ್ಣ ಶೋಧ ಕಾರ್ಯಾಚರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು. ಶುಕ್ರವಾರ, ಶನಿವಾರ ಮಧ್ಯರಾತ್ರಿಯ ವೇಳೆ ಮೂವರು ಅನುಮಾನಾಸ್ಪದವಾಗಿ ತಿರುಗಾಡುತ್ತಿದ್ದರು ಎಂಬ ಸ್ಥಳಿ ಯರ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ಮಾಡುತ್ತಿವೆ. ಆದರೆ ಕಾರ್ಯಾಚರಣೆ ವೇಳೆ, ಇದುವರೆಗೂ ಯಾವುದೇ ಭಯೋತ್ಪಾದಕ ಚಟುವಟಿಕೆಗಳು ಕಂಡು ಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದಯ ವಾಹಿನಿ
www.udayavahini.in
epaper.udayavahini.in
Udaya vahini news
Udaya vahini news
Udayavahini news youtube
udayavahininews@gmail. com



ರಾಧಿಕಾ ನಾರಾಯಣ್ ತಳ್ಳಗೆ...ಬೆಳ್ಳಗೆ ತುಂಬಾನೆ ಚೆನ್ನಾಗಿದ್ದಾರೆ. ತಮಗೆ ಸರಿ ಹೊಂದುವ ಬಟ್ಟೆಗಳನ್ನೆ ಧರಿಸುತ್ತಾರೆ. ತೀರಾ ಮಾಡ್ರನ್ ಅಂತ ಖುಲಂ ಖುಲ್ಲಾ ಡ್ರೆಸ್ ತೊಡೋದು ತುಂಬಾನೆ ಕಡಿಮೆ. ಇಲ್ವೇ ಇಲ್ಲ ಅಂದ್ರೂ ತಪ್ಪಿಲ್ಲ. ಅದಕ್ಕೆ ಈಗೀನ ಈ ಒಂದು ಫೋಟೋ ಶೂಟ್‌ಗಳು ಮತ್ತಷ್ಟು ಸಾಕ್ಷಿ ನೀಡುತ್ತದೆ. ರಾಧಿಕಾ ನಾರಾಯಣ್ ಇಲ್ಲಿ ತುಂಬಾನೆ ಸಿಂಪಲ್ ಅನಿಸೋ ಡ್ರೆಸ್ ತೊಟ್ಟಿದ್ದಾರೆ. ಕಾಟನ್ ಬಟ್ಟೆನೆ ಇದಾಗಿದೆ. ಮಾಡ್ರನ್ ಫೀಲ್ ಬರುತ್ತದೆ. ತೀರ ಬೋಲ್ಡ್ ಅನಿಸೋದಿಲ್ಲ. ರಾಧಿಕಾ ನಾರಾಯಣ್ ಅವರಿಗೆ ತುಂಬಾನೆ ಚೆನ್ನಾಗಿ ಕಾಣಿಸುತ್ತಿದೆ. ಇದನ್ನ ತೊಟ್ಟ ರಾಧಿಕಾ ಅವರನ್ನ ನೋಡಿದವ್ರು. ಪರಿಶುದ್ಧ ಸೌಂದರ್ಯ ಅಂತಲೂ ಕೊಂಡಾಡಿದ್ದಾರೆ.




# ಶ್! ಯಾರಿಗೂ ಹೇಳ್ಬೇಡಿ

ರಾಧಿಕಾ ನಾರಾಯಣ್ ಮನೆಯ ಬಾಲ್ಕನಿಯಲ್ಲಿಯೇ ನಿಂತಿದ್ದಾರೆ. ಇಲ್ಲಿಯೇ ಸಿಂಪಲ್ ಎಕ್ಸಪ್ರೆಷನ್ ಕೊಟ್ಟಿದ್ದಾರೆ. ಪ್ರತಿ ಎಕ್ಸಪ್ರೆಷನ್ ಅಲ್ಲೂ ವಿಭಿನ್ನತೆ ಇದೆ.



ಕ್ಯಾಮರಾ ಕಣ್ಣಲ್ಲಿ ಅದ್ಭುತ ಅನಿಸೋ ಹಾಗೇನೆ ಕ್ಯಾಪ್ಚರ್ ಆಗಿದೆ. ಚೆಂದದ ಈ ಫೋಟೋಗಳನ್ನ ರಾಧಿಕಾ ನಾರಾಯಣ್ ತಮ್ಮ ಸೋಷಿಯಲ್ ಮೀಡಿಯಾ ಪೇಜ್ ಅಲ್ಲಿ ಹಂಚಿಕೊಂಡಿದ್ದಾರೆ. ರಾಧಿಕಾ ನಾರಾಯಣ್ ಸಣ್ಣ ಇದ್ದಾರೆ. ಒಳ್ಳೆ ಹೈಟ್ ಕೂಡ ಇದೆ. ನಿತ್ಯ ಯೋಗ ಮಾಡ್ತಾರೆ. ಅದಕ್ಕೆ ಸಾಕ್ಷಿ ಇವರ ಈ ಸೌದರ್ಯ ಅಂತಲೂ ಬಣ್ಣಿಸಬಹುದು. ಅಷ್ಟು ಚಂದಗೆ ಇರೋ ರಾಧಿಕಾ ನಾರಾಯಣ್ ಅವರನ್ನ ಹುಡುಕಿಕೊಂಡು ಒಳ್ಳೆ ಪಾತ್ರಗಳೇ ಬರುತ್ತವೆ. ರಂಗಿತರಂಗ ಚಿತ್ರದಲ್ಲಿ ರಾಧಿಕಾ ನಾರಾಯಣ್ ಅದ್ಭುತವಾಗಿಯೇ ನಟಿಸಿದ್ದರು.

# ರಾಜಮೌಳಿಗೆ ಹಿನ್ನಡೆ; ಕುಟುಂಬದಿಂದ ವಿರೋಧ



ಭಾರತದ ಸಿನಿಮಾದ ಹರಿಕಾರ ದಾದಾಸಾಹೇಬ್ ಫಾಲ್ಕೆ ಅವರ ಬಗ್ಗೆ ಬಯೋಪಿಕ್ ಮಾಡಲು ಸಿದ್ಧತೆ ನಡೆದಿದೆ. 1903ರಲ್ಲಿ ಭಾರತದ ಮೊಟ್ಟ ಮೊದಲ ಪೂರ್ಣ ಪ್ರಮಾಣದ ಚಿತ್ರವನ್ನು ನಿರ್ದೇಶನ ಹಾಗೂ ನಿರ್ಮಾಣ ಮಾಡಿದ ಖ್ಯಾತಿ ದಾದಾಸಾಹೇಬ್ ಫಾಲ್ಕೆ ಅವರಿಗೆ ಇದೆ. ಆಗಿನ ಕಾಲಕ್ಕೆ ಅವರು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಇದನ್ನು ಶತಮಾನಗಳ ಬಳಿಕ ತೆರೆಮೇಲೆ ತೋರಿಸುವ ಪ್ರಯತ್ನ ಆಗುತ್ತಿದೆ. ಆದರೆ, ಎರಡು ಖ್ಯಾತ ನಾಮರು ಇದಕ್ಕೆ ಸಿದ್ಧತೆ ನಡೆಸಿದ್ದಾರೆ ಎನ್ನಲಾಗಿದೆ. ಈ ಬಗ್ಗೆ ದಾದಾಸಾಹೇಬ್ ಫಾಲ್ಕೆ ಮೊಮ್ಮಗ ಚಂದ್ರಶೇಖರ್ ಶ್ರೀಕೃಷ್ಣ ಪುಸಾಲ್ಕರ್ ಮಾತನಾಡಿದ್ದಾರೆ. ರಾಜಮೌಳಿ ಬಗ್ಗೆ ಅವರು ಅಸಮಾಧಾನ ಹೊರಹಾಕಿದ್ದಾರೆ. ಖ್ಯಾತ ನಿರ್ದೇಶಕ ರಾಜಮೌಳಿ ಹಾಗೂ ಕೆಲವರು ಸೇರಿಕೊಂಡು ದಾದಾಸಾಹೇಬ್ ಫಾಲ್ಕೆ ಚಿತ್ರವನ್ನು ನಿರ್ಮಾಣ ಮಾಡಲು ಹೊರಟಿದ್ದಾರೆ. ಈ ಚಿತ್ರದಲ್ಲಿ ಜೂನಿಯರ್ ಎನ್‌ಟಿಆರ್ ಅವರು ದಾದಾಸಾಹೇಬ್ ಫಾಲ್ಕೆ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದು ವರದಿ ಆಗಿತ್ತು. ಎನ್‌ಟಿಆರ್ ಅವರು ದಾದಾಸಾಹೇಬ್ ಲುಕ್‌ನಲ್ಲಿರುವ ಸಾಕಷ್ಟು ಎಐ ಫೋಟೋಗಳು ವೈರಲ್ ಆಗಿವೆ. ಈ ಬಗ್ಗೆ ಚಂದ್ರಶೇಖರ್ ಶ್ರೀಕೃಷ್ಣ ಅಸಮಾಧಾನ ಹೊರಹಾಕಿದ್ದಾರೆ.

ಏಕೆಂದರೆ ಮತ್ತೊಂದು ಕಡೆ ದಾದಾಸಾಹೇಬ್ ಫಾಲ್ಕೆ ಬಯೋಪಿಕ್ ಮಾಡಲು ಆಮಿರ್ ಖಾನ್ ಹಾಗೂ ರಾಜ್‌ಕುಮಾರ್ ಹಿರಾನಿ ಸಿದ್ಧತೆ ಮಾಡಿಕೊಂಡಿದ್ದಾರೆ. ಇವರು ದಾದಾಸಾಹೇಬ್ ಫಾಲ್ಕೆ ಕುಟುಂಬವನ್ನು ಸಂಪರ್ಕಿಸಿ ಸ್ಕ್ರಿಪ್ಟ್ ಆರಂಭಿಸಿದ್ದರು. ರಾಜಮೌಳಿ ಅವರು ಬೇರೆ ಬೇರೆ ಪುಸ್ತಕಗಳನ್ನು ಆಧರಿಸಿ ಸಿನಿಮಾ ಮಾಡುತ್ತಿದ್ದಾರೆ.

ಅವರು ಈವರೆಗೆ ಕುಟುಂಬದವರನ್ನು ಸಂಪರ್ಕಿಸಿಯೇ ಇಲ್ಲ. ಇದು ಚಂದ್ರಶೇಖರ್ ಅವರ ಬೇಸರಕ್ಕೆ ಕಾರಣ ಆಗಿದೆ.

'ರಾಜಮೌಳಿ ಅವರು ಮಾಡುತ್ತಿರುವ ಪ್ರಾಜೆಕ್ಟ್ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಆದರೆ ಅವರು ನನ್ನನ್ನು ಎಂದಿಗೂ ಸಂಪರ್ಕಿಸಲಿಲ್ಲ. ಯಾರಾದರೂ ಫಾಲ್ಕೆ ಬಗ್ಗೆ ಸಿನಿಮಾ ಮಾಡುತ್ತಿದ್ದಾರೆ ಎಂದರೆ ಕನಿಷ್ಠ ಪಕ್ಷ ಅವರ ಕುಟುಂಬದೊಂದಿಗೆ ಮಾತನಾಡಬೇಕು' ಎಂದು ಅವರು ಅಭಿಪ್ರಾಯ ಹೊರಹಾಕಿದ್ದಾರೆ.



# ಪೇಪರ್‌ನಿಂದ ಮೈಮುಚ್ಚಿಕೊಂಡ ಪೂನಂ

## ಒದ್ದಿಟ್ಟು ಕೊಡ್ತೀನಿ ಕೊಡಿ ಅಂದ್ರು ನೆಟ್ಟಿಗರು


ಮಾದಕ ನಟಿ ಪೂನಂ ಪಾಂಡೆಯ ಟಾಪ್‌ಲೆಸ್ ಅವತಾರಗಳು ಹೊಸದೇನಲ್ಲ. ಆಗಾಗ್ಗೆ ತನ್ನ ಮೈಮಾಟವನ್ನ ಸಾಮಾಜಿಕ ಜಾಲತಾಣದಲ್ಲಿ ಪ್ರದರ್ಶನಕ್ಕಿಡುವ ಮೂಲಕ ಗಮನ ಸೆಳೆಯುತ್ತಿರುತ್ತಾರೆ. ಕೆಲವು ತಿಂಗಳ ಹಿಂದೆ ಗರ್ಭಕಂಠದ ಕ್ಯಾನ್ಸರ್‌ನಿಂದ ಸಾವನ್ನಪ್ಪಿರುವುದಾಗಿ ಇಡೀ ದೇಶವನ್ನೇ ನಂಬಿಸಿದ್ದ ಚಾಲಕಿ ಈಕೆ. ಇದೀಗ ಅಭಿಮಾನಿಗಳಿಗೆ ಕಚಗುಳಿ ಇಡುವ ಮೂಲಕ ಮತ್ತೆ ಸೋಷಿಯಲ್ ಮೀಡಿಯಾಗಳಲ್ಲಿ ಸುದ್ದಿಯಾಗಿದ್ದಾರೆ. ಮೈಮೇಲೆ ತುಂಡು ಬಟ್ಟೆಯಿಲ್ಲದೇ ಕೇವಲ 2 ತುಂಡು ನ್ಯೂಸ್ ಪೇಪರ್ ಸುತ್ತಿಕೊಂಡು ಫೋಟೋ ಶೂಟ್ ಮಾಡಿಸಿದ್ದಾರೆ. ಈ ಮಾದಕ ಫೋಟೋಗಳನ್ನ ತಮ್ಮ ಇನ್‌ಸ್ಟಾ ಖಾತೆಯಲ್ಲೂ ಹಂಚಿಕೊಂಡು ಅಭಿಮಾನಿಗಳ ಹೃದಯ ಕದ್ದಿದ್ದಾರೆ. ಜೊತೆಗೆ ನನ್ನನ್ನು ಓದಲು ಬಯಸುವಿರಾ ಅಂತ ಇಂಗ್ಲಿಷ್‌ನಲ್ಲಿ ಕ್ಯಾಪ್ಷನ್ ಬರೆದುಕೊಂಡಿದ್ದಾರೆ. ಇದಕ್ಕೆ ಕಾಮೆಂಟ್ ಮಾಡಿರುವ ನೆಟ್ಟಿಗರು ಪೇಪರ್ ಕೊಡಿ ಸ್ವಲ್ಪ ಓದಿ ಕೊಡ್ತೀನಿ ಅಂತಾ ಕಾಲೆಳೆದಿದ್ದಾರೆ. ಇನ್ನೂ ಕೆಲವರು, ಸೋ ಹಾಟ್, ಸೆಕ್ಸಿ ಅಂತಾ ಕಾಮೆಂಟ್ ಮಾಡಿದ್ರೆ, ಉಳಿದವರು ವಾವ್ ಎಂದಿದ್ದಾರೆ.

# ನಿಮಗೆ ಎಲ್ಲಿಯೂ ಏನೂ ಇಲ್ಲ ಅನನ್ಯಾ

ನಟಿ ಅನನ್ಯಾ ಪಾಂಡೆ ಅವರು ಬಾಲಿವುಡ್‌ನಲ್ಲಿ ಗುರುತಿಸಿಕೊಂಡಿದ್ದಾರೆ. ಅವರು ನಟ ಚಂಕಿ ಪಾಂಡೆ ಮಗಳು ಎಂಬ ಕಾರಣಕ್ಕೆ ಅವರಿಗೆ ಸುಲಭದಲ್ಲಿ ಅವಕಾಶಗಳು ದೊರೆತವು. ಆದರೆ, ಯಶಸ್ಸು ಮಾತ್ರ ಅವರಿಗೆ ಸಿಕ್ಕೇ ಇಲ್ಲ ಅನ್ನೋದು ಬೇಸರದ ವಿಚಾರ. ಈ ಮಧ್ಯೆ ಅವರ ಹಳೆಯ ಸಂದರ್ಶನದ ಬಗ್ಗೆ ಚರ್ಚೆ ಆಗಿದೆ. ಅನನ್ಯಾ ಅವರ ಬಗ್ಗೆ ಎಲ್ಲರೂ ನಾನಾ ರೀತಿಯ ಕಮೆಂಟ್‌ಗಳನ್ನು ಮಾಡುತ್ತಿದ್ದರಂತೆ. ಇದರಿಂದ ಅನನ್ಯಾ ಪಾಂಡೆ ಅವರು ಸಖತ್ ಬೇಸರ ಮಾಡಿಕೊಳ್ಳುತ್ತಿದ್ದರು. ಅನನ್ಯಾ ಪಾಂಡೆ ಅವರು 'ಸ್ಟುಡೆಂಟ್ ಆಫ್ ದಿ ಇಯರ್ ಸೀಸನ್ 2' ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟರು.

ಅವರು ನಟಿಸಿ ಮೊದಲ ಸಿನಿಮಾ ಫ್ಲಾಪ್ ಆಯಿತು. ಮೊದಲ ಸಿನಿಮಾ ನೆಲಕಚ್ಚಿದರೆ ಏನಂತೆ, ಮತ್ತೆ ಸಿನಿಮಾ ಮಾಡಿ ಗೆದ್ದರಾಯಿತು ಬಿಡು ಎಂದು ಅವರು ಅಂದುಕೊಂಡರು. ಆದರೆ, ಅದೃಷ್ಟ ಅವರ ಪರವಾಗಿ ಇರಲಿಲ್ಲ. 'ಪತಿ ಪತ್ನಿ ಔರ್ ವೋ', 'ಖಾಲಿ ಪೀಲಿ', 'ಗೆಹರಾಯಿಯಾ' ಹೀಗೆ ಎಲ್ಲಾ ಸಿನಿಮಾಗಳು ಸೋಲೋಕೆ ಆರಂಭ ಆದವು. ಇತ್ತೀಚೆಗೆ ರಿಲೀಸ್ ಆದ 'ಕೇಸರಿ ಚಾಪ್ಟರ್ 2' ಸ್ವಲ್ಪ ಓಕೆ ಎಂಬ ರೀತಿಯಲ್ಲಿ ಪ್ರದರ್ಶನ ಕಂಡಿತು. ಸಾಮಾನ್ಯವಾಗಿ ಸಿನಿಮಾ ಗೆಲುವು ಕಂಡಿಲ್ಲ ಎಂದಾಗ, ಯಶಸ್ಸು ಸಿಕ್ಕಿಲ್ಲ ಎಂದಾಗ ಟ್ರೋಲ್ ಆಗೋದು ಸಾಮಾನ್ಯ. ಅನನ್ಯಾ ಪಾಂಡೆಗೂ ಹಾಗೆಯೇ ಆಗಿತ್ತು. 'ನನಗೆ 18 ಅಥವಾ 19 ವರ್ಷ ಇರಬಹುದು. ನಾನು ಹೊರಗೆ ಗುರುತಿಸಿಕೊಳ್ಳಲು ಆರಂಭಿಸಿದ್ದೆ. ನಾನು ತೆಳ್ಳಗಿದ್ದೆ. ನನ್ನ ಬಗ್ಗೆ ಎಲ್ಲರೂ ಟೀಕೆ ಮಾಡುತ್ತಿದ್ದರು. ನಿಮ್ಮದು ಕೋಳಿ ಕಾಲು, ಬೆಂಕಿ ಕಡ್ಡಿ ರೀತಿ ಕಾಣುತ್ತೀಯಾ, ನಿಮಗೆ ಎದೆ ಭಾಗ, ಹಿಂಭಾಗದಲ್ಲಿ ಏನೂ ಇಲ್ಲ ಎನ್ನುತ್ತಿದ್ದರು' ಎಂದು ಹಳೆಯ ಘಟನೆಯನ್ನು ನೆನಪಿಸಿಕೊಂಡಿದ್ದಾರೆ. ಅನನ್ಯಾ ಪಾಂಡೆ ಈಗಲೂ ಟೀಕೆ ಎದುರಿಸುತ್ತಾರೆ. ನೆಪೋ ಕಿಡ್ ಎಂಬ ಕಾರಣಕ್ಕೆ ಅನನ್ಯಾ ಅವರು ಸಾಕಷ್ಟು ಟೀಕೆಗಳನ್ನು ಎದುರಿಸಿದ್ದು ಇದೆ. ಅವರ ಬಗ್ಗೆ ಒಂದಲ್ಲಾ ಒಂದು ಟೀಕೆಗಳು ಹೊರ ಬರುತ್ತಲೇ ಇರುತ್ತವೆ.

# ಜೂ.ಎನ್‌ಟಿಆರ್ ಬರ್ತ್‌ಡೇಗೆ ಸರ್‌ಪ್ರೈಸ್ ಗಿಫ್ಟ್



## 'ವಾರ್ 2' ಸಿನಿಮಾ ಘೋಷಣೆ

ಜೂನಿಯರ್ ಎನ್‌ಟಿಆರ್ ಅವರ ಜನ್ಮದಿನದಂದು, ಹೃತಿಕ್ ರೋಷನ್ ಅವರು ವಾರ್ 2 ಚಿತ್ರದ ಗ್ಲಿಂಪ್ಸ್ ಅನ್ನು ಉಡುಗೊರೆಯಾಗಿ ನೀಡುವುದಾಗಿ ಘೋಷಿಸಿದ್ದಾರೆ. ಈ ಸುದ್ದಿ ಅಭಿಮಾನಿಗಳಲ್ಲಿ ಭಾರಿ ಸಂತೋಷವನ್ನುಂಟು ಮಾಡಿದೆ. ವಾರ್ 2 ಚಿತ್ರದಲ್ಲಿ ಜೂನಿಯರ್ ಎನ್‌ಟಿಆರ್ ಮತ್ತು ಹೃತಿಕ್ ರೋಷನ್ ಅಭಿನಯಿಸುತ್ತಿದ್ದು, ಈ ಗ್ಲಿಂಪ್ಸ್ ಜೂನಿಯರ್ ಎನ್‌ಟಿಆರ್ ಪಾತ್ರದ ಬಗ್ಗೆ ಹೆಚ್ಚಿನ ಮಾಹಿತಿ ರಿವೀಲ್ ಮಾಡಲಿದೆ. ಜೂನಿಯರ್ ಎನ್‌ಟಿಆರ್ ಅವರು ಮೇ 20ರಂದು ತಮ್ಮ ಬರ್ತ್‌ಡೇ ಆಚರಿಸಿಕೊಳ್ಳುತ್ತಿದ್ದಾರೆ. ನೆಚ್ಚಿನ ನಟನ ಜನ್ಮದಿನ ಆಚರಿಸಿಕೊಳ್ಳಲು ಅಭಿಮಾನಿಗಳು ಪ್ಲ್ಯಾನ್ ಮಾಡಿದ್ದಾರೆ. ಇದರ ಜೊತೆಗೆ ಹೃತಿಕ್ ರೋಷನ್ ಅವರು ಜೂನಿಯರ್ ಎನ್‌ಟಿಆರ್‌ಗೆ ಒಂದು ವಿಶೇಷ ಉಡುಗೊರೆ ನೀಡಲು ರೆಡಿ ಆಗಿದ್ದಾರೆ. ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಅಧಿಕೃತ ಘೋಷಣೆ ಮಾಡಿದ್ದಾರೆ. ಈ ವಿಚಾರ ಕೇಳಿ ಫ್ಯಾನ್ಸ್ ಭರ್ಜರಿ ಖುಷಿಪಟ್ಟಿದ್ದಾರೆ. ಹಾಗಾದರೆ ಸಿಗುತ್ತಿರೋ ಉಡುಗೊರೆ ಏನು 'ವಾರ್ 2' ಚಿತ್ರದ ಗ್ಲಿಂಪ್ಸ್ ವಿಡಿಯೋ. 'ವಾರ್' ಸಿನಿಮಾ ಹಿಟ್ ಆದ ಬಳಿಕ 'ವಾರ್ 2' ಸಿನಿಮಾ ಘೋಷಣೆ ಮಾಡಲಾಯಿತು. ಈ ಚಿತ್ರದಲ್ಲಿ ಜೂನಿಯರ್ ಎನ್‌ಟಿಆರ್ ಹಾಗೂ ಹೃತಿಕ್ ರೋಷನ್ ಇದ್ದಾರೆ. ಹೃತಿಕ್ ಪಾತ್ರ ಏನು ಎಂಬುದು ಮೊದಲ ಪಾರ್ಟ್‌ನಲ್ಲೇ ಗೊತ್ತಾಗಿದೆ. ಈಗ ಕುತೂಹಲ ಇರೋದು ಜೂನಿಯರ್ ಎನ್‌ಟಿಆರ್ ಪಾತ್ರದ ಬಗ್ಗೆ. ಬರ್ತ್‌ಡೇ ದಿನ ಟೀಸರ್ ಅಥವಾ ಗ್ಲಿಂಪ್ಸ್ ರಿಲೀಸ್ ಆದರೆ ಸಿನಿಮಾದ ಬಗ್ಗೆ ಸ್ಪಷ್ಟ ಚಿತ್ರಣ ಸಿಗಲಿದೆ.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966